ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೮-೦
೬ ತಿಂಗಳಿಗೆ ,, ೩-೮-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ತರಿಸಿಕೊಂಡಲ್ಲಿ ೩ ಆಣೆ
ಹೆಚ್ಚಿಗೆ ಬೀಳುವವು.

ಬೆಲೆ: ಎರಡು ಆಣೆ

ಕರ್ಮವೀರ

KARMAVEER
WEEKLY
HUBLI
SEPT. 9
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೯—೯—೧೯೪೬ [ಸಂಚಿಕೆ ೩೨

"ಭಾರತಕ್ಕೆ ಸ್ವಾತಂತ್ರ್ಯದಂತೆ ಕರ್ನಾಟಕಕ್ಕೆ ಸ್ವಾಯತ್ತತೆ"

—ಅಧ್ಯಕ್ಷ ಶ್ರೀ ಪಾಟೀಲ

"ನಮ್ಮ ನಾಡು ತುಂಡಾದಂತೆ ಬುದ್ಧಿಯೂ ತುಂಡಾಗಿದೆ"

—ಉದ್ಘಾಟಕ ಶ್ರೀ ಕಾರಂತ

ಅಖಿಲ ಕರ್ನಾಟಕಸ್ಥರ ಮಹಾಧಿವೇಶನದಲ್ಲಿ ಸಂಸ್ಥಾನಯುಕ್ತ ಕರ್ನಾಟಕ ಪ್ರಾಂತ ರಚಿಸುವ ನಿರ್ಧಾರ

ಕರ್ನಾಟಕ ಮಹಾಧಿವೇಶನ ಮೊದಲು ಪ್ರಸಿದ್ಧ ಮಾಡಿದಂತೆ ಅಗಸ್ಟ ೩೧ ನೆಯ ತಾರೀಕು ಒಳ್ಳೆ ವಿಜೃಂಭಣೆಯಿಂದ ಸಾಂಗವಾಯಿತು. ದಾವಣಗೆರೆಯ ದಾನಶೂರ ಕರ್ಣರಾದ ಧರ್ಮಪ್ರವರ್ತಕ ಶ್ರೀ ರಾಜನಹಳ್ಳಿ ಹನುಮಂತಪ್ಪನವರ ಛತ್ರದಲ್ಲಿ ಅಧಿವೇಶನದ ಏರ್ಪಾಡು ಮಾಡಲಾಗಿತ್ತು. ಅದರ ಪಟಾಂಗಣದಲ್ಲಿ ಮನೋಹರವಾದ ಛತ್ರವನ್ನು ನಿಲ್ಲಿಸಲಾಗಿತ್ತು. ಕರ್ನಾಟಕದ ಎಲ್ಲ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಸಭೆ ಒಳ್ಳೆ ಪ್ರಾತಿನಿಧಿಕವಾಗಿತ್ತು. ಇತ್ತೀಚೆ ಇಷ್ಟೊಂದು ಪ್ರಾತಿನಿಧಿತ್ವವು ಬೇರೆ ಯಾವ ಸಭೆಗಳಲ್ಲಿ ಕಂಡುಬಂದಿಲ್ಲೆಂದು ಹೇಳಿದರೆ ಅತಿಶಯೋಕ್ತಿಯಾಗದು. ಸಮ್ಮೇಲನಕ್ಕೆ ಬರಲು ಆಗದಿದ್ದವರು ತಂತಿ, ಪತ್ರಗಳನ್ನು ಕಳಿಸಿ ಯಶಸ್ಸನ್ನು ಕೋರಿದ್ದಲ್ಲದೆ ಕರ್ನಾಟಕ ಪ್ರಾಂತೀಕರಣಕ್ಕೆ ತಮ್ಮ ಹೃತ್ಪೂರ್ವಕ ಬೆಂಬಲವನ್ನು ನೀಡಿದ್ದರು. ಸಂಸ್ಥಾನ ಪ್ರಜೆಗಳೂ ಕರ್ನಾಟಕ ಸ್ವತಂತ್ರ ಪ್ರಾಂತಕ್ಕಾಗಿ ಎಷ್ಟೊಂದು ಉತ್ಸುಕರಾಗಿದ್ದಾರೆಂಬುದು ಅಧಿವೇಶನದಲ್ಲಿ ಭಾಗವಹಿಸಿದವರ ಭಾಷಣ ಉತ್ಸಾಹದಿಂದ ಹಾಗೂ ಸಂದೇಶಗಳನ್ನು ಕಳಿಸಿದವರ ಸದ್ಭಾವನೆಗಳಿಂದ ವ್ಯಕ್ತವಾಗುವಂತಿತ್ತು.

೩೦ ನೆಯ ತಾರೀಕು ಸಾಯಂಕಾಲ ವೇಲಗಾಡಿಯಿಂದ ಅಧಿವೇಶನದ ಅಧ್ಯಕ್ಷರು ದಾವಣಗೆರೆಗೆ ಬಂದ ಕೂಡಲೆ ಅವರಿಗೆ ಸಂಭ್ರಮವಾದ ಸ್ವಾಗತವನ್ನೀಯಲಾಯಿತು. ಉದ್ಘಾಟಕರಾದ ಶ್ರೀ ಕೆ. ಆರ್ ಕಾರಂತರು ಕಾರ್ಯಬಾಹುಲ್ಯದ ಮೂಲಕ ಅಂದು ಬರಲಿಲ್ಲಾದ್ದರಿಂದ ಅಧ್ಯಕ್ಷರೊಬ್ಬರ ಮೆರವಣಿಗೆಯನ್ನೆ ತೆಗೆಯಲಾಯಿತು. ನಾಲ್ಕು ಜೋಡು ಎತ್ತುಗಳನ್ನು ಹೂಡಿದ ಒಳ್ಳೆ ಶೃಂಗರಿಸಲ್ಪಟ್ಟ ರಥದಲ್ಲಿ ಅಧ್ಯಕ್ಷರು ವಿರಾಜಮಾನರಾಗಿದ್ದರು. ಕ. ಪ್ರಾಂ. ಕಾಂಗ್ರೆಸ ಕಮಿಟಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಕ. ಏ. ಸಂಘದ ಅಧ್ಯಕ್ಷ ಶ್ರೀ ಜಿನರಾಜ ಹೆಗ್ಗಡೆಯವರು ಸ್ವಾಗತಾಧ್ಯಕ್ಷ ಶ್ರೀ [illegible] ಬಸಪ್ಪನವರೂ ರಥದಲ್ಲಿ ಕುಳಿತಿದ್ದರು. ಮೆರವಣಿಗೆ ನಗರದ ಬೇರೆ ಬೇರೆ ಬೀದಿಗಳಿಂದ ಹಾಯ್ದುಬಂದಿತು. ದಾರಿಯುದ್ದಕ್ಕೂ ನಾಗರಿಕರು ಹೂಮಾಲೆ ಆರತಿಗಳಿಂದ ಮಾನ್ಯ ಮುಖಂಡರನ್ನು ಸತ್ಕರಿಸಿದರು. ತಳಿರು ತೋರಣಗಳಿಂದ ಬೀದಿಗಳನ್ನು ಸುಶೋಭಿತಗೊಳಿಸಲಾಗಿತ್ತು. ಮಾನ್ಯ ಅತಿಥಿಗಳನ್ನು ಟ್ರಾವಲರ್ಸ ಬಂಗಲೆಯಲ್ಲಿಳಿಸಲಾಗಿತ್ತು.

೩೧ ನೆಯ ತಾರೀಕು ಮುಂಜಾನೆ ೯ ಗಂಟೆಯಿಂದಲೆ ಕಾರ್ಯಕ್ರಮ ಪ್ರಾರಂಭವಾಗುವದಿತ್ತು ಆದರೆ ಬೆಂಗಳೂರು ಕಡೆಯ ಉಗಿಬಂಡಿ ಸಕಾಲಕ್ಕೆ ಬಾರದ್ದರಿಂದ ಅಧಿವೇಶನದ ವೇಳೆಯಲ್ಲಿ ಬದಲಾವಣೆ ಮಾಡಲಾಯಿತು. ಮುಂಜಾನೆ ೧೦ ಗಂಟೆಗೆ ಮೇಲ ಗಾಡಿ ದಾವಣಗೆರೆ ಸ್ಟೇಶನ್ನಿಗೆ ಬಂದಿತು. ಅದೇ ಗಾಡಿಯಿಂದ ಶ್ರೀ ಕಾರಂತರು ಮತ್ತು ಬೆಂಗಳೂರು ಕಡೆಯ ಇತರ ಮಹನೀಯರು ಬಂದರು. ಅವರಿಗೆ ಹೃತ್ಪೂರ್ವಕ ಸ್ವಾಗತ ಮಾಡಲಾಯಿತು. ಶ್ರೀ ಕಾರಂತರನ್ನು ಮೆರವಣಿಗೆಯಿಂದ ಬಿಡಾರ ಸ್ಥಾನಕ್ಕೆ ಕರೆದೊಯ್ಯಲಾಯಿತು.

ಸರಿಯಾಗಿ ೧೧॥ ಗಂಟೆಗೆ ಅಧಿವೇಶನ, ಕರ್ನಾಟಕ ಗೀತೆ ಸ್ವಾಗತ ಗೀತೆಗಳಿಂದ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷರು ಭಾಷಣ ಮಾಡಿ ಎಲ್ಲರನ್ನು ಸ್ವಾಗತಿಸಿ [illegible] ಮತ್ತು ಅಧ್ಯಕ್ಷರು ತಮ್ಮ ಸ್ಥಾನಗಳನ್ನಲಂಕರಿಸಿ ಮುಂದಿನ ಕಾರ್ಯವನ್ನು ಸಾಗಿಸಬೇಕೆಂದು ಬಿನ್ನವಿಸಿಕೊಂಡರು. ಮಾನ್ಯ ಕಾರಂತರು ಚಿಕ್ಕದಾದರೂ ಚೊಕ್ಕ ಭಾಷಣ ಮಾಡಿ ಕನ್ನಡಿಗರಿಗೆ ಸ್ವತಂತ್ರ ಪ್ರಾಂತವಿಲ್ಲದ್ದರಿಂದ ಆಗುತಿರುವ ಕಷ್ಟನಷ್ಟಗಳನ್ನು ವಿವರಿಸಿ ಸ್ವತಂತ್ರ ಪ್ರಾಂತರಚನೆಗಾಗಿ ಎಲ್ಲರೂ ಪ್ರಯತ್ನಿಸಬೇಕೆಂದು ಬಿನ್ನವಿಸಿ ಅಧಿವೇಶನ ಪ್ರಾರಂಭವಾಯಿತೆಂದು ಸಾರಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರ್ನಾಟಕ ಪ್ರಾಂತೀಕರಣದ ಚಳವಳಿಯ ಇತಿಹಾಸವನ್ನು ವಿವರಿಸಿ ಇದೀಗ ಅದಕ್ಕೆ ಮೂರ್ತಸ್ವರೂಪ ಬಂದಿದ್ದು ಈ ಕಾಲದಲ್ಲಿ ಎಲ್ಲರೂ ಉತ್ಸಾಹದಿಂದ ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಮಧ್ಯಾನ್ಹ ೧ ಗಂಟೆಗೆ ಮುಂಜಾವಿನ ಕಾರ್ಯಕ್ರಮ ಮುಗಿಯಿತು.

ಮಧ್ಯಾನ್ಹ ೩॥ ಗಂಟೆಗೆ ಅಧಿವೇಶನ ಮತ್ತೆ ಪ್ರಾರಂಭವಾಯಿತು. ಮೂಲ ಗೊತ್ತುವಳಿಗೆ ಬಂದ ಉಪಸೂಚನೆಗಳನ್ನು ವಿಚಾರಿಸಿ ಸಿದ್ಧಪಡಿಸಿದ ಗೊತ್ತುವಳಿಯನ್ನು ಶ್ರೀ ಜಿನರಾಜ ಹೆಗಡೆಯವರು ಮುಂಡಿಸಿದರು. ಆದರೆ ಸಭಿಕರೆಲ್ಲರ ಅನುಮತಿಯನ್ನು ಪಡೆಯಲು ಅದು ಸಮರ್ಥವಾಗಲಿಲ್ಲ. ಹಲವು ಉಪಸೂಚನೆಗಳು ಮುಂಡಿಸಲ್ಪಟ್ಟವು. ಸಂಸ್ಥಾನ ಭಾಗವನ್ನೂ ಕೂಡಲೆ ಸೇರಿಸಿಕೊಳ್ಳಬೇಕು, ಸಂಸ್ಥಾನಗಳೆಲ್ಲ ಸಮೂಲ ನಾಶವಾಗಬೇಕು, ಭಾವೀ ಕರ್ನಾಟಕ ಪ್ರಾಂತದ ಆಡಳಿತ ಸಂಯುಕ್ತ ರಾಜ್ಯಾಂಗ ಬಗೆಯುದಿರತಕ್ಕದ್ದಲ್ಲ ಮುಂತಾದ್ದು ತಿದ್ದುಪಡಿಗಳ ಆಶಯವಾಗಿತ್ತು. ಆದರೆ ಮೂಲ ಸೂಚನೆಯು ಸದ್ಯದ ಪರಿಸ್ಥಿತಿಗೆ ತಕ್ಕದಾಗಿದ್ದು ಅಂತಿಮ ಧ್ಯೇಯಕ್ಕೆ ಯಾವ ರೀತಿಯಿಂದಲೂ ವಿಸಂಗತವಾಗಿಲ್ಲೆಂದು ಅನೇಕರು ಪ್ರತಿಪಾದಿಸಿದರು. ಶ್ರೀ ದಿವಾಕರ ರಂಗನಾಥರಾಯರು ಉಪಸೂಚನೆಗಳನ್ನೆಲ್ಲ ಕೂಲಂಕಷವಾಗಿ ವಿಮರ್ಶಿಸಿ ಅವು ಹೇಗೆ ತ್ಯಾಜ್ಯವಾಗಿವೆಂಬುದನ್ನು ತೋರಿಸಿ ಕೊಟ್ಟು ಆಕ್ಷೇಪಕರ ಸಂಶಯಗಳನ್ನೆಲ್ಲ ನಿವಾರಿಸಿ ಎಲ್ಲರೂ ಮೂಲ ಸೂಚನೆಯನ್ನು ಸ್ವೀಕರಿಸಬೇಕೆಂದು ಬಿನ್ನವಿಸಿದರು. ಉಪಸೂಚನೆಗಳೆಲ್ಲ ಹಿಂತೆಗೆದುಕೊಳ್ಳಲ್ಪಟ್ಟು ಮೂಲಸೂಚನೆ ಪ್ರಚಂಡ ಬಹುಮತದಿಂದ ಸ್ವೀಕೃತವಾಯಿತು. ನಾಲ್ಕು ಜನ ಕಮ್ಯುನಿಸ್ಟರು ಮಾತ್ರ ವಿರುದ್ಧ ಮತ ಕೊಟ್ಟರು. ಎರಡನೆ ಗೊತ್ತುವಳಿ ವಿಶೇಷ ಚರ್ಚೆಯಿಲ್ಲದೆ ಸ್ವೀಕೃತವಾಯಿತು. ಮೂರನೆಯ ಗೊತ್ತುವಳಿಯ ಬಗ್ಗೆ ಮಾತ್ರ ಶ್ರೀ ಮುನವಳ್ಳಿ ಮತ್ತು ಷಡಕ್ಷರಿ ಶಾಸ್ತ್ರಿಗಳು ವಿರೋಧ ಪ್ರದರ್ಶಿಸಿ ಸಮಿತಿಯ ಸದಸ್ಯರನ್ನು ಈಗಲೆ ಆರಿಸಬೇಕೆಂದೂ ಆ ಕಾರ್ಯವನ್ನು ಈ ಮೂವರಿಗೆ ಒಪ್ಪಿಸಬಾರದೆಂದೂ ಪ್ರತಿಪಾದಿಸಿದರು. ಅನೇಕರು ಮೂಲ ಸೂಚನೆಗೆ ಬೆಂಬಲಕೊಟ್ಟರು. ಅಧ್ಯಕ್ಷರು ಸೂಚನೆಯನ್ನು ಮತಕ್ಕೆ ಹಾಕುವಾಗ ಸಮಿತಿಯಲ್ಲಿ ವಿಶ್ವಾಸವಿದ್ದರೆ ಮಾತ್ರ ಅನುಕೂಲ ಮತ ಕೊಡಬೇಕೆಂದೂ ಇಲ್ಲವಾದರೆ ವಿರುದ್ಧ ಮತಕೊಡಬೇಕೆಂದೂ ಹೇಳಿದರು. ಮೇಲಿನ ಇಬ್ಬರು ಮಾತ್ರ ವಿರುದ್ಧ ಮತ ಕೊಟ್ಟರು. ಪ್ರಚಂಡ ಬಹುಮತದಿಂದ ಗೊತ್ತುವಳಿ ಸ್ವೀಕೃತವಾಯಿತು. ಘಟನಾ ಸಮಿತಿಯ ಸಂಸ್ಥಾನ ಸದಸ್ಯರನ್ನು ನಾಮಕರಣ ಮಾಡದೆ ಶಾಸನ ಸಭೆಗಳ ಸದಸ್ಯರು ಅವರನ್ನಾರಿಸಬೇಕೆಂದು ಶ್ರೀ ಚಂಗಲರಾಯರೆಡ್ಡಿಯವರು ಮತ್ತೊಂದು ಗೊತ್ತುವಳಿಯನ್ನು ಮುಂಡಿಸಿ ಅದರ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಬ್ರಿಟಿಶ್ ಕರ್ನಾಟಕದ ಪರವಾಗಿ ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಬೆಂಬಲ ಕೊಟ್ಟ ಬಳಿಕ ಸರ್ವಾನುಮತದಿಂದ ಅದು ಸ್ವೀಕೃತವಾಯಿತು.

ಅನಂತರ ಅಧ್ಯಕ್ಷರು ಸ್ವಲ್ಪದರಲ್ಲಿಯೆ ಅಧಿವೇಶನದ ಉಪಸಂಹಾರ ಮಾಡುತ್ತ ಪಾಸಾದ ಗೊತ್ತುವಳಿಗಳನ್ನು, ಕಾರ್ಯರೂಪದಲ್ಲಿ ತರುವುದಕ್ಕೆ ಎಲ್ಲರೂ ಮನಃಪೂರ್ವಕ ಪ್ರಯತ್ನಿಸಬೇಕೆಂದು ಬಿನ್ನವಿಸಿದರು ಅಭಾರಮನ್ನಣೆಯಾಗಿ ಪ್ರಚಂಡ ಜಯ ಜಯಕಾರದಲ್ಲಿ ಅಧಿವೇಶನ ಕೊನೆಗಂಡಿತು.

ಈ ಅಧಿವೇಶನದಲ್ಲಿ ಅತಿಥಿಗಳ ಬಿಡಾರ, ಭೋಜನದ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಸ್ವಯಂಸೇವಕರ, ಕಾರ್ಯಕರ್ತರ ಶಿಸ್ತು ಚನ್ನಾಗಿದ್ದಿತು. ಸುಮಾರು ಹತ್ತು ಸಾವಿರದಷ್ಟು ಜನಸ್ತೋಮ ಸನ್ಮಿಲಿತವಾಗಿತ್ತೆಂದು ಅಂದಾಜು. ಧ್ವನಿವಾಹಕ ಯಂತ್ರದ ವ್ಯವಸ್ಥೆಯಿಟ್ಟದ್ದರಿಂದ ಎಲ್ಲರಿಗೂ ಪರಿಷತ್ತಿನಲ್ಲಿಯ ಚರ್ಚೆ ಕೇಳಿಸುತಿತ್ತು. ಇಂಥ ದೊಡ್ಡ ಪ್ರಮಾಣದ ಪರಿಷತ್ತನ್ನು ಇನ್ನು ಮುಂದೆ ಮಾಡುವುದಾದರೆ ದಾವಣಗೆರೆಯಲ್ಲಿಯೆ ಮಾಡಬೇಕೆಂಬ ಉದ್ಗಾರಗಳು ಅನೇಕರಿಂದ ಹೊರಡುತಿದ್ದವು.

ಕರ್ನಾಟಕದ ಮುಖಂಡರಲ್ಲಿ ಹಲವರು ಹರಿಹರದಲ್ಲಿರುವ ಮೈಸೂರು ಕಿರ್ಲೋಸ್ಕರ ಕಾರಖಾನೆಯನ್ನು ಸಂದರ್ಶಿಸಿ ಅಲ್ಲಿನ ಕಾರ್ಯಕಲಾಪಗಳನ್ನು ತಿಳಿದುಕೊಂಡರು. ಶ್ರೀ ಮಲ್ಲನಗೌಡ ಪಾಟೀಲರು ರವಿವಾರ ಮೇಲಿನಿಂದ ಪುಣೆಗೆ ತೆರಳಿದರು.

ಗೊತ್ತುವಳಿಗಳು

೧ ಬ್ರಿಟಿಶ್ ಕರ್ನಾಟಕದ ವಿಭಾಗಗಳನ್ನು ಮೊದಲು ಒಂದೆಡೆ ಸೇರಿಸಿ ಕರ್ನಾಟಕ ಪ್ರಾಂತವನ್ನು ನಿರ್ಮಿಸುವದಕ್ಕೆ ಆತಂಕವುಂಟಾಗದಂತೆ ಬ್ರಿಟಿಶ್ ಕರ್ನಾಟಕ, ಸಂಸ್ಥಾನ ಕರ್ನಾಟಕ ಎಂಬ ಭೇದವೆಣಿಸದೆ ಎಲ್ಲ ಕರ್ನಾಟಕಸ್ಥರ ಸಾಮಾನ್ಯ ಬೆಳವಣಿಗೆಗಾಗಿ ಅವರೆಲ್ಲರಿಗೂ ಒಂದೇ ಆಡಳಿತೆಯುಳ್ಳ ಸರಕಾರ, ಸಂಯುಕ್ತ ಬಗೆಯದ್ದಾಗಲಿ ಅಥವಾ ಬೇರೆಬಗೆಯದ್ದಾಗಲಿ, ಸ್ಥಾಪಿತವಾಗುವದರಿಂದಲೆ ಅಖಂಡ ಕರ್ನಾಟಕದ ಹಿತ ಸರಿಯಾಗಿ ಸಾಧಿಸುವದೆಂದು ಸಂಸ್ಥಾನ ಕರ್ನಾಟಕವನ್ನೊಳಗೊಂಡ ಅಖಿಲ ಕರ್ನಾಟಕದ ಪ್ರತಿನಿಧಿಗಳ ಈ ಮಹಾ ಪರಿಷತ್ತು ಸಾರುತ್ತದೆ.

ಅಖಂಡ ಕರ್ನಾಟಕಕ್ಕೆ ಈ ಬಗೆಯ ಒಂದೇ ಸರಕಾರದ ಸ್ಥಾಪನೆ ಸುಲಭಸಾಧ್ಯವಾಗಲು ಎಲ್ಲ ಸಂಸ್ಥಾನಗಳಲ್ಲಿ ಪೂರ್ಣ ಪ್ರಜಾಸತ್ತಾತ್ಮಕ ಹೊಣೆಗಾರಿಕೆಯ ಸರಕಾರ ಸ್ಥಾಪಿತವಾಗುವದು ಅವಶ್ಯವೆಂದು ಈ ಮಹಾಸಭೆ ಅಭಿಪ್ರಾಯ ಪಡುತ್ತದೆ. ಹಾಗು ಸಂಸ್ಥಾನಾಧೀಶರರು ಈ ಮಹಾಕಾರ್ಯದಲ್ಲಿ ಸಹಕರಿಸಬೇಕೆಂದು ಬಿನ್ನವಿಸುತ್ತದೆ.

೨. ಭಾಷಾನುಗುಣ ಪ್ರಾಂತರಚನೆಯ ವಿಷಯವನ್ನು ಮಹತ್ವದ ಮಾತೆಂದು ಘಟನಾ ಸಮಿತಿಯವರು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕೆಂದೂ ಕರ್ನಾಟಕ ಪ್ರಾಂತರಚನೆಗಾಗಿ ಶೀಘ್ರವಾಗಿಯೆ ಕಾರ್ಯಪ್ರವೃತ್ತರಾಗಬೇಕೆಂದೂ ಈ ಮಹಾ ಪರಿಷತ್ತು ಆಗ್ರಹಪೂರ್ವಕವಾಗಿ ಸೂಚಿಸುತ್ತದೆ.

೩. ಮೇಲಿನ ಗೊತ್ತುವಳಿಗಳ ಉದ್ದೇಶಸಾಧನೆಗಾಗಿ ಅವಶ್ಯ ಕಂಡ ಎಲ್ಲ ಬಗೆಯ ಕಾರ್ಯ ಕೈಕೊಳ್ಳಲು ಕೆಳಗೆ ಕಾಣಿಸಿದ ಮಹನೀಯರ ಒಂದು ಸಮಿತಿಯನ್ನು ಈ ಮಹಾ ಪರಿಷತ್ತು ನಿಯಮಿಸುತ್ತದೆ.

ಶ್ರೀ ಎಂ ಪಿ ಪಾಟೀಲ, ಶ್ರೀ ನಿಜಲಿಂಗಪ್ಪ ಮತ್ತು ಶ್ರೀ ಜಿನರಾಜ ಹೆಗಡೆ.

ಈ ಸಮಿತಿಯು ಕ. ಪ್ರಾ. ಕಾ. ಕಮಿಟಿ ಮತ್ತು ಕರ್ನಾಟಕ ಏಕೀಕರಣ ಸಂಘಕ್ಕೆ ಅಧೀನವಾಗಿ ಕಾರ್ಯ ನಡೆಸಬೇಕು. ಅದಕ್ಕೆ ಅವಶ್ಯವೆನಿಸಿದಂತೆ ಈ ಸಮಿತಿಯಲ್ಲಿ ಸದಸ್ಯರನ್ನು ಸೇರಿಸಿಕೊಳ್ಳಬೇಕು.

೪ ಘಟನಾ ಸಮಿತಿಗೆ ಬ್ರಿಟಿಶ ಹಿಂದುಸ್ಥಾನದಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳೇ ಹೋಗಿರುವಂತೆ ಸಂಸ್ಥಾನಗಳಿಂದಲೂ ಚುನಾಯಿಸಲ್ಪಟ್ಟ ಪ್ರತಿನಿಧಿಗಳನ್ನೆ ಕಳಿಸಬೇಕೆಂದು ಈ ಮಹಾಧಿವೇಶನ ಅಭಿಪ್ರಾಯಪಡುತ್ತದೆ.

ಉದ್ಘಾಟಕ ಶ್ರೀ ಕಾರಂತರ ಭಾಷಣದ ಸಾರ

ಶ್ರೀ. ಕಾರಂತರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು—

ಬ್ರಿಟಿಶ ಕರ್ನಾಟಕ ಮತ್ತು ಸಂಸ್ಥಾನ ಕರ್ನಾಟಕಗಳಿಂದ ಇಷ್ಟೊಂದು ಜನ ಹೀಗೆ ಕೂಡಿದ್ದು

—೨ನೇ ಪುಟ ನೋಡಿರಿ

“ಭಾರತಕ್ಕೆ ಸ್ವಾತಂತ್ರ್ಯದಂತೆ ಕರ್ನಾಟಕಕ್ಕೆ ಸ್ವಾಯತ್ತತೆ”

(೧ ನೇ ಪುಟದಿಂದ ಬಂದದ್ದು)

ಇದೇ ಪ್ರಥಮ ಸಲವೆಂದು ಹೇಳಬಹುದು. ಇದೀಗ ಘಟನಾ ಸಮಿತಿ ಸೇರಿ ಹಿಂದುಸ್ತಾನದ ಘಟನೆಯನ್ನು ಸಿದ್ಧ ಮಾಡಲಿದೆ. ಈ ಸಮಯದಲ್ಲಿ ಈ ಮಹಾಧಿವೇಶನ ಕೂಡಿದ್ದು ಉಚಿತವಾಗಿದೆ.

ತುಂಡರಿಸಲ್ಪಟ್ಟ ಕರ್ನಾಟಕ

ಕರ್ನಾಟಕವು ೨೧ ತುಂಡುಗಳಲ್ಲಿ ವಿಭಾಗಿಸಲ್ಪಟ್ಟಿದೆ. ಇದರಿಂದ ನಮ್ಮ ಕನ್ನಡ ಜನರಿಗೆ ಬಗೆ ಬಗೆಯ ಕಷ್ಟಗಳು ಒದಗುತ್ತವೆ. ಕನ್ನಡಿಗರು ಬೇರೆ ಬೇರೆ ಭಾಷೆಯವರಲ್ಲಿ ಸಿಕ್ಕು ನುಗ್ಗಾಗುತ್ತಿದ್ದಾರೆ. ಮಡಗಶಿರಾ, ಕಲ್ಯಾಣದುರ್ಗ ಮೊದಲಾದ ತಾಲೂಕುಗಳಲ್ಲಿ ಹೆಚ್ಚಿಗೆ ಕನ್ನಡಿಗರು ಇದ್ದಾರೆ. ದೇಶೀಯ ಸಂಸ್ಥಾನಗಳಲ್ಲಿಯ ಕನ್ನಡಿಗರೂ ಸ್ವಾತಂತ್ರ್ಯವಿಲ್ಲದೆ ಬಳಲುತ್ತಿರುವರು. ಆಂಧ್ರರು ಮತ್ತು ತಮಿಳರಿಗೆ ಸ್ವತಂತ್ರ ಪ್ರಾಂತವಿಲ್ಲದಿದ್ದರೂ ಅವರು ಸ್ವತಂತ್ರರಾಗಿ ಬಾಳುವಷ್ಟು ಜಿಲ್ಲೆಗಳು ಒಂದೆಡೆ ಇವೆ. ಆದರೆ ಕನ್ನಡಿಗರದು ಮಾತ್ರ ಹಾಗಲ್ಲ. ನಮ್ಮ ಪ್ರಾಂತವು ಹೀಗೆ ತುಂಡಾಗಿದ್ದಂತೆ ನಮ್ಮ ಬುದ್ಧಿಯೂ ತುಂಡಾಗಿದೆ. ಅನೇಕ ಪಂಗಡಗಳು ನಮ್ಮಲ್ಲಿ ಇವೆ. ಹೀಗೆ ನಾನು ಹೇಳಿದರೆ ತಮಗೆ ಬೇಜಾರವೆನಿಸಬಹುದು. ಆದರೆ ಇದ್ದದ್ದನ್ನು ಇದ್ದಂತೆ ಹೇಳುವದು ನಮ್ಮ ಕರ್ತವ್ಯ. ಎಲ್ಲೆಲ್ಲಿ ನೋಡಿದರೂ ಪ್ರತಿಯೊಂದು ಕಡೆ ಪಂಗಡ. ನಮ್ಮನ್ನ ಕೇಳುವವರೇ ಇಲ್ಲ. ಘಟನಾ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಗಳೆಂದರೆ ಕೇವಲ ಒಬ್ಬಿಬ್ಬರು ಮಾತ್ರ. ನಾವು ತುಂಡರಿಸಲ್ಪಟ್ಟದ್ದರಿಂದ ಈ ರೀತಿ ನಮಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಲಿಲ್ಲ.

ಮೈಸೂರು ಕೂಡಿದ ಕರ್ನಾಟಕ

ಕನ್ನಡ ಮಾತಾಡುವವರೆಲ್ಲ ಒಂದೇ ಆಡಳಿತೆಯಲ್ಲಿ ಬರುವದು ಅವಶ್ಯವಾಗಿದೆ. ೧೯೩೮ ರಲ್ಲಿ ಧಾರವಾಡದಲ್ಲಿ ಏಕೀಕರಣ ಪರಿಷತ್ತು ನನ್ನ ಅಧ್ಯಕ್ಷತೆಯಲ್ಲಿ ಸೇರಿದಾಗ ಶ್ರೀ ಗಂಗಾಧರರಾವ ದೇಶಪಾಂಡೆಯವರು ಒಂದು ಗೊತ್ತುವಳಿಯನ್ನು ತಂದಿದ್ದರು. ಮೈಸೂರ ಮಹಾರಾಜರು ಇಡೀ ಕನ್ನಡ ನಾಡಿನ ಘಟನಾಬದ್ಧ ಅರಸರಾಗಿ ಆಡಳಿತೆಯನ್ನು ನಿರ್ವಹಿಸಬೇಕೆಂಬುದೆ ಆ ಗೊತ್ತುವಳಿಯ ಆಶಯವಾಗಿತ್ತು. ಆದರೆ ಆ ಗೊತ್ತುವಳಿ ವಿಷಯ ನಿಯಾಮಕ ಸಮಿತಿಯಲ್ಲಿ ಚರ್ಚೆಗೆ ಬಾರದ್ದರಿಂದ ನಾನು ಅದಕ್ಕೆ ಅಪ್ಪಣೆ ಕೊಡಲಿಲ್ಲ. ಆದರೀಗ ಕರ್ನಾಟಕ ಪ್ರಾಂತ ಒಂದಾಗುವ ಸಮಯ ಬಂದಿದೆ. ಬ್ರಿಟಿಶ ಕರ್ನಾಟಕ ಸ್ವತಂತ್ರ ಪ್ರಾಂತವಾಗುವ ಸಂದರ್ಭ ಬಂದಾಗ ಮೈಸೂರ ಸಂಸ್ಥಾನದ ಪ್ರಜೆಗಳು ಹಿಂದುಳಿಯುವದು ಶಕ್ಯವಿಲ್ಲ.

ಈ ಬಗೆಯ ಪರಿಸ್ಥಿತಿಯಿರುವಾಗ ಮೈಸೂರಿನ ವಿಷಯವಾಗಿ ವಿಚಾರಿಸಿದರೆ ವ್ಯಥೆಯಾಗುತ್ತದೆ. ಇಲ್ಲಿ ೧೮೮೧ ನೇ ಕಲಮಿನ ನಿರ್ಬಂಧ ಮುಂತಾದವುಗಳಿಂದ ಆಡಳಿತ ನಡೆಸಲಾಗುತ್ತದೆ. ಇಲ್ಲಿಯ ರಾಜ್ಯಘಟನೆ ನೋಡಿದರೂ ವ್ಯಥೆ. ಇಲ್ಲಿಯೇನೋ ಕೆಲವು ಮಂತ್ರಿಗಳಿರುವರು. ಆದರೆ ಅವರು ಪ್ರಜಾನಿಯುಕ್ತರಲ್ಲ, ಪ್ರಜೆಗಳ ಪ್ರತಿನಿಧಿಗಳಲ್ಲ, ಅವರ ಕೈಯಲ್ಲಿ ಅಧಿಕಾರವಿಲ್ಲ. ಇಂಥ ಸರಕಾರದಲ್ಲಿ ನಾವು ಸೇರುವದೆಂತು ? ಮೈಸೂರನ್ನು ಘಟನಾತ್ಮಕ ಸ್ಥಾನದೆಡೆಗೆ ಕರೆದುಕೊಂಡು ಹೋಗುವದು ಯೋಗ್ಯವಾಗಿದೆ. ಮೈಸೂರಿನ ಸದ್ಯದ ದಿವಾಣರಾದ ಸರ್ ರಾಮಸ್ವಾಮಿ ಮುದಲಿಯಾರರು ಒಳ್ಳೆ ಪ್ರಖ್ಯಾತರು. ರಾಜ್ಯ ಶಾಸನದ ಅನುಭವ ಅವರಿಗೆ ಹೆಚ್ಚಾಗಿದೆ. ಅವರು ಮೈಸೂರು ಮಹಾರಾಜರಿಗೆ ಯೋಗ್ಯ ಸಲಹೆ ನೀಡಿ ಕರ್ನಾಟಕದ ‘ಕಾನ್ಸ್ಟಿಟ್ಯೂಶನಲ್ ರೂಲರ’ ಆಗಬೇಕೆಂದು ಬಿನ್ನವಿಸಿಕೊಳ್ಳಬೇಕು. ಅರಮನೆಯಿಂದ ರಾಜ್ಯ ನಡೆಸುವದು ನಮಗೆ ಬೇಕಾಗಿಲ್ಲ. ಇಡೀ ಹಿಂದುಸ್ತಾನದಲ್ಲಿ ದೊಡ್ಡದೊಂದು ನೆರೆ ಬಂದಾಗ ಇಂಥ ಸಂಸ್ಥಾನಗಳು ತಾವು ಪ್ರತ್ಯೇಕವಾಗಿರುವೆವೆಂದು ಹೇಳಿದರೆ ನಡೆಯಲಾರದು ಇದೊಂದು ಬಗೆಯ ಹುಚ್ಚುಚ್ಚಾರವೆನಿಸಬಹುದು. ಅದರಿಂದ ನಾನು ಮೇಲೆ ಹೇಳಿದಂತೆ ದಿವಾಣರು ಮೈಸೂರು ಮಹಾರಾಜರಿಗೆ ಸಲಹೆ ಕೊಡಬೇಕೆಂದು ಬಿನ್ನವಿಸುತ್ತೇನೆ. ಈ ಮಹಾಧಿವೇಶನವೂ ಅದೇ ಬಗೆಯ ಸಲಹೆ ಕೊಡುವದೆಂದು ನಂಬುತ್ತೇನೆ. ಒಬ್ಬನನ್ನು ಆಳಲಿಕ್ಕೆ ಇನ್ನೊಬ್ಬನು ಹುಟ್ಟಿಲ್ಲೆಂಬದನ್ನು ಯಾರೂ ನಿರಾಕರಿಸಲಾರರು.

ಅನೇಕ ಜಮೀನದಾರರು ನನ್ನೆಡೆಗೆ ಬರುತ್ತಿರುವರು. ಹೇಗಾದರೂ ಮಾಡಿ ನಮಗೆ ಪರಿಹಾರ ದ್ರವ್ಯ ಕೊಟ್ಟು ಜಮೀನದಾರಿಗಳನ್ನು ತೆಗೆದುಕೊಂಡು ಬಿಡಿರೆಂದು ಕೇಳಿಕೊಳ್ಳುತ್ತಿರುವರು. ಅವರೀಗ ಒಂದು ಬಗೆಯ “ಬಂದೀಖಾನೆ”ಯಲ್ಲಿದ್ದಂತಿರುವರು. ಏಕೆಂದರೆ ಪ್ರಜೆಗಳೆಲ್ಲ ಅವರಿಗೆ ವಿರೋಧಿಗಳಾಗಿರುವರು. ಕೋವಿ ಮುಂತಾದವುಗಳನ್ನಿಟ್ಟುಕೊಂಡು ಜಮೀನದಾರರೀಗ ಇರಬೇಕಾಗಿದೆ. ಸಂಸ್ಥಾನಿಕರ ಪರಿಸ್ಥಿತಿಯಾದರೂ ಹೀಗೆಯೆ ಇದೆಯೆಂದು ಹೇಳಬಹುದು ಮೈಸೂರಿಗೆ ಈಗ ಬಂದರವಿಲ್ಲ. ಇಡೀ ಕರ್ನಾಟಕ ಪ್ರಾಂತ ಒಂದಾದರೆ ಮೈಸೂರಿನ ಉನ್ನತಿಯಾಗುವದು.

ದೊಡ್ಡ ವರಿಗೆ ತೆರಿಗೆ ಹಾಕಬೇಕು

ಇನ್ನು ನಮ್ಮ ಈ ಎಲ್ಲ ಕಾರ್ಯ ಸಾಗಬೇಕಾದರೆ ಹಣ ಬೇಕಾಗುವದು ನಮ್ಮಲ್ಲಿ ಕಲೆ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕಾಗುವದು. ಇದಕ್ಕಾಗಿ ನಾವು ದೊಡ್ಡವರಿಗೆ ತೆರಿಗೆ ಹಾಕಬೇಕಾಗಬಹುದು. ದೊಡ್ಡ ಮೈಸೂರಿನ ಸಂಬಂಧ ಹೀಗಿರಬೇಕೆಂದು ಹೇಳುವಾಗ ಸಣ್ಣ ಸಣ್ಣ ಸಂಸ್ಥಾನಗಳು ಸ್ವತಂತ್ರ ಕರ್ನಾಟಕ ಪ್ರಾಂತದಲ್ಲಿ ಸೇರಬೇಕೆಂದು ಬೇರೆ ಹೇಳಬೇಕಿಲ್ಲ ನಮ್ಮ ಈ ಸಂಸ್ಥಾನಿಕರು ತಾವು ಪರದೇಶದಿಂದ ಬಂದವರೆಂದು ತಿಳಿದುಕೊಳ್ಳಬಾರದು. ಜನತೆಗೆ ಸಹಾಯ ಮಾಡುವಲ್ಲಿ ನಿರತರಾಗಬೇಕು.

ಕಲಹ ಬೇಡ

ನನಗೆ ಯಾರೊಡನೆಯೂ ಜಗಳಾಡುವದು ಬೇಕ. ಗಡಿ ಎಲ್ಲಿ, ರಾಜಧಾನಿ ಯಾವುದು ಮುಂತಾದ್ದರ ಬಗ್ಗೆ ಈಗಲೆ ನಾವು ಹೋರಾಡುವದು ಬೇಡ ಜಗಳದಲ್ಲಿ ನಾವು ‘ ಹುಷಾರ ’ ರು. ಆದರೆ ನಾವೀಗ ಬಡೆದಾಡಬಾರದು. ನಾವೆಲ್ಲರು ಹಿಂದುಸ್ತಾನದ ಮಕ್ಕಳು. ಇಡೀ ಹಿಂದು ದೇಶದ ಸ್ವಾತಂತ್ರ್ಯವೇ ನಮ್ಮ ಗುರಿಯಾಗಿರಬೇಕು. ಕರ್ನಾಟಕವು ಎಲ್ಲರನ್ನು ಕೂಡಿಕೊಂಡು ಹೋಗಬೇಕು. ಯಾರ ಮೇಲೆಯೂ ಬಲಾತ್ಕಾರ ಮಾಡಬಾರದು. ಕೊಡಗಿನ ಸಂಬಂಧದಲ್ಲಿಯೂ ನಾವು ಬಲಾತ್ಕಾರ ಮಾಡಬಾರದು. ಜನರ ಇಚ್ಛೆಯಂತೆ ನಾವು ನಡೆಯಬೇಕು. ಈ ರೀತಿಯಾಗಿ ನಾವು ನಡೆದಾದರೆ ನಮ್ಮ ಧ್ಯೇಯ ಸಾಧಿಸುವದೆಂದು ನಾನು ಹೇಳಿ ತಾವೆಲ್ಲ ಈ ಕಾರ್ಯದಲ್ಲಿ ನಿರತರಾಗಬೇಕೆಂದು ಬಿನ್ನವಿಸಿ ಭಾಷಣ ಮುಗಿಸುತ್ತೇನೆ.

ಅಧ್ಯಕ್ಷ ಶ್ರೀ ಪಾಟೀಲರ ಭಾಷಣದ ಮುಖ್ಯಾಂಶ

ಶ್ರೀ ಪಾಟೀಲರು ಈ ರೀತಿ ಹೇಳಿದರು—

ಅಖಿಲ ಭಾರತ ಕಾಂಗ್ರೆಸ್ ಸಮಿತಿಯವರು ಭಾಷಾನುಗುಣ ಪ್ರಾಂತ ರಚನೆಯ ತತ್ವವನ್ನು ಮಾನ್ಯ ಮಾಡಿದಂದಿನಿಂದ ಕಾಂಗ್ರೆಸ್ಸಿನ ನಡೆವಳಿಕೆಗಳಲ್ಲಿ ಕರ್ನಾಟಕ ಒಂದು ಪ್ರಾಂತವಾಗಿ ತನ್ನ ವಿಪ್ರೂಪವಾದ ಭಿನ್ನತೆಯಲ್ಲಿಯೂ ಒಂದು ರೀತಿಯ ಐಕ್ಯವನ್ನು ಕಾಣತೊಡಗಿದೆ. ಬ್ರಿಟಿಶ ಮತ್ತು ಸಂಸ್ಥಾನಿ ಕರ್ನಾಟಕಗಳನ್ನು ಸಮೀಪಕ್ಕೆ ತಂದು ಅವುಗಳಲ್ಲಿ ಸೋದರಭಾವದ ಒಂದು ಸಾಮರಸ್ಯವನ್ನು ಉಂಟುಮಾಡಿದ ಶ್ರೇಯಸ್ಸು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ಸಲ್ಲತಕ್ಕದ್ದಾಗಿದೆ ಕನ್ನಡ ಮಾತನಾಡುವ ಜನ ಒಂದು ಪ್ರಾಂತವೆಂಬ ಭಾವನೆಯನ್ನು ಮೊದಲಿಗೆ ಬೆಳಸಿಕೊಂಡು ಬಂದ ಪ್ರಾಂತಿಕ ಕಾಂಗ್ರೆಸ್ ಸಮಿತಿಯವರೂ ಸಮಗ್ರವಾದ ಕರ್ನಾಟಕವೆ ಕನ್ನಡದ ಜೀವಾಳವೆಂದು ನಾಲ್ಕು ದಶಕಗಳಿಂದ ದುಡಿಯುತ್ತ ಬಂದ ಅಖಿಲ ಕರ್ನಾಟಕ ಏಕೀಕರಣ ಸಂಘದವರೂ ಈ ಮಹಾಪರಿಷತ್ತನ್ನು ಕರೆದುದು ಸುಯೋಗ್ಯವಾಗಿದೆ. ಸಮಯೋಚಿತವಾಗಿದೆ.

ಏಕೀಕರಣದ ಅಗತ್ಯ

ಹೆಚ್ಚಿನ ಪ್ರಗತಿಯ ಸಾಧನೆಗಾಗಿ ಕರ್ನಾಟಕ ಇಂದಿನ ಬದಲಾವಣೆಯ ಕಾಲದಲ್ಲಿ ಒಂದು ಪ್ರಾಂತವಾಗಿರಬೇಕಾಗಿತ್ತು. ಅದು ಇನ್ನೂ ‘ಇಲ್ಲ’ದಿರುವದರಿಂದಲೆ ಅದನ್ನು ಸಾಧಿಸುವ ಪ್ರಥಮ ಹೆಜ್ಜೆಯೆಂದು ಸರ್ವ ಕನ್ನಡಿಗರ ಈ ಮಹಾಪರಿಷತ್ತು ಸೇರಿದೆಯೆಂದು ನಾನು ಭಾವಿಸುತ್ತೇನೆ.

ಭಾರತಕ್ಕೆ ಸ್ವಾತಂತ್ರ್ಯ, ಹೇಗೊ ಹಾಗೆ ಕರ್ನಾಟಕಕ್ಕೆ ಸ್ವಾಯತ್ತತೆ. ಸ್ವಾತಂತ್ರ್ಯದ ಆಸೆ ಆಕಾಂಕ್ಷೆಗಳು ಭಾರತಕ್ಕೆ ನೈಸರ್ಗಿಕವಾದಂತೆ ಸ್ವತಂತ್ರ ಭಾರತದಲ್ಲಿ ಏಕತಂತ್ರವಾಗಿರಬೇಕೆಂಬ ಕರ್ನಾಟಕದ ಬಯಕೆ ಬೇಡಿಕೆಗಳೂ ಅಷ್ಟೇ ನೈಸರ್ಗಿಕ.

ರಾಜಕೀಯ ಕುತಂತ್ರ ಹಾಗೂ ಐತಿಹಾಸಿಕ ಕಾರಣಗಳ ಮೂಲಕ ಕನ್ನಡ ನಾಡು ಇಂದು ಇಪ್ಪತ್ತೆರಡು ಆಡಳಿತೆಗಳಲ್ಲಿ ಹರಿದು ಹಂಚಿ ಹೋಗಿದೆ.

ಇಷ್ಟೊಂದು ಭಿನ್ನ ಭಿನ್ನ ರಾಜಕೀಯ ಆಡಳಿತ ವಿಭಾಗಗಳಿಗೆ ಒಳಪಟ್ಟಿದ್ದರೂ ಸ್ವಾಯತ್ತ ಪ್ರಾಂತವಾಗಿ ನಿಲ್ಲಬೇಕಾದ ಯೋಗ್ಯತೆ ಕರ್ನಾಟಕಕ್ಕೆ ಇದೆಯೆ ಎಂಬ ಪ್ರಶ್ನೆ ಏಕೀಕರಣದ ವಿಚಾರ ಬಂದಾಗ ಸಹಜವಾಗಿ ಉದ್ಭೂತವಾಗುತ್ತದೆ. ಅದಕ್ಕೆ ಕರ್ನಾಟಕದ ವಿಸ್ತೀರ್ಣ, ಜನಸಂಖ್ಯೆ, ಆರ್ಥಿಕ ಸಂಪತ್ತುಗಳೇ ಸಮರ್ಪಕವಾದ ಉತ್ತರವೆಂದು ಹೇಳಬಹುದು.

(ಅ) ೧೯೪೧ ನೆಯ ಸಾಲಿನ ಜನಗಣತಿಯ ಮೇರೆಗೆ ಬ್ರಿಟಿಷ್ ಕರ್ನಾಟಕದ ವಿಸ್ತೀರ್ಣ ಮತ್ತು ಜನಸಂಖ್ಯೆ:

ಜಿಲ್ಲೆಗಳ ಹೆಸರು	ಚದರು ಮೈಲುಗಳು	ನಗರ	ಗ್ರಾಮ	ಒಟ್ಟು ಜನಸಂಖ್ಯೆ
ಬೆಳಗಾವಿ	೪೫೩೭	೯	೧೦೬೪	೧೩,೭೫,೪೩೮
ವಿಜಾಪುರ	೫೭೦೪	೮	೧೧೧೬	೯,೭೫,೯೮೨
ಧಾರವಾಡ	೪೫೭೬	೧೪	೧೩೪೯	೧೨,೦೧,೦೧೬
ಕಾರವಾರ	೪೯೬೧	೭	೧೨೪೪	೪,೪೧,೧೫೭
ಮಂಗಳೂರು	೪೦೨೧	೭	೬೬೮	೧೫,೪೭,೯೬೮
ಸೊಲ್ಲಾಪೂರ	೮೪೮	೧	೯೫೦	೪,೫೪,೭೮೧
ಕೊಡಗು	೧೫೯೩	೩	೪೭೭	೧,೬೮,೭೨೬
ಬಳ್ಳಾರಿ	೫೭೧೪	೧೨	೯೪೮	೧೦,೫೧,೨೪೮
ನೀಲಗಿರಿ	೯೮೯	೪	೫೪	೨,೦೯,೭೦೯
ಹೊರಭಾಗದ ತಾಲೂಕುಗಳು				
ಮಡಗಶಿರಾ (ಅನಂತಪುರ)	೪೪೬	೧	೫೮	೧,೦೭,೧೬೬
ಹೊಸೂರ (ಸೇಲಂ)	೧೧೮೧	೧	೪೪೭	೨,೨೪,೨೪೦
ಕೃಷ್ಣಗಿರಿ (ಸೇಲಂ)	೬೮೮	೨	೧೮೪	೨,೫೬,೮೬೮
ಕೊಳ್ಳೆಗಾಲ (ಕೊಯಂಬತ್ತೂರ)	೧೦೭೬	೧	೪೮	೧,೧೮,೫೯೧

(ಆ) ಸಂಸ್ಥಾನ ಕರ್ನಾಟಕದ ವಿಸ್ತೀರ್ಣ ಮತ್ತು ಜನಸಂಖ್ಯೆ

ಸಂಸ್ಥಾನಗಳು	ಚದರು ಮೈಲುಗಳು	ನಗರ	ಹಳ್ಳಿ	ಜನಸಂಖ್ಯೆ
ಮೈಸೂರು	೨೯,೪೫೮	—	—	೭೪,೨೯,೧೪೦
ಹೈದರಾಬಾದ	೧೧,೪೧೯	—	—	೪೨,೦೦,೦೦೦
ಅಕ್ಕಲಕೋಟೆ	೪೭೪	೧	೧೦೪	೧,೦೪,೯೦೪
ಔಂಧ	೫೦೧	೧	೭೪	೮೮,೭೨೪ [ಕ. ಮ.]
ಜಮಖಂಡಿ	೫೨೪	೭	೭೧	೧,೨೬,೨೭೪
ಸವಣೂರ	೭೪	—	—	೨೨,೪೪೦
ಮುಧೋಳ	೩೬೮	೪	೭೬	೭೨,೪೪೭
ರಾಮದುರ್ಗ	೧೬೯	೧	೩೬	೪೦,೧೦೪
ಸೊಂಡೂರು	೧೫೮	೧	೨೨	೧೫,೮೨೬
ಸಾಂಗಲಿ	೧೧೩೬	೬	೨೨೮	೨,೯೩,೩೮೧ [ಕ. ಮ.]
ಜತ್ತ	೯೮೧	೧	೧೧೮	೧,೦೭,೦೩೬ [,,]
ಕೊಲ್ಲಾಪುರ	೩೨೧೭	೧೪	೧೦೩೭ (೨೦೦ ಕನ್ನಡ ಹಳ್ಳಿಗಳು)	೧೦,೯೨,೦೪೬ (೨ ಲಕ್ಷ ಕನ್ನಡಿಗರು)
ವಾಡಿ	೧೨	—	೨	೨,೦೨೨ [ಕ. ಮ.]
ಕುರುಂದವಾಡ (ಹಿರಿ)	೧೮೨	೧	೪೬	೫೨,೫೨೬ ,,
,, (ಕಿರಿ)	೧೧೬	೨	೩೨	೪೬,೭೦[illegible] ,,
ಮಿರಜಿ (ಹಿರಿ)	೩೪೨	೬	೫೯	೧,೦೪,೫೪೭ ,,
,, (ಕಿರಿ)	೧೯೬	೫	೩೧	೪೬,೨೯೫ ,,

ಮೇಲೆ ಹೇಳಿದ ಸಂಸ್ಥಾನಗಳಲ್ಲಿ ಮೈಸೂರು, ಹೈದರಾಬಾದಿನ ಕನ್ನಡ ಪ್ರದೇಶ, ಜಮಖಂಡಿ, ಮುಧೋಳ, ರಾಮದುರ್ಗ, ಸವಣೂರು, ಸೊಂಡೂರು—ಇವೆಲ್ಲ ಭಾಗಗಳು ಒಂದಾಗೂಡಿದರೆ ೪೩೧೯೯ ಚದರು ಮೈಲು ವಿಸ್ತಾರವುಳ್ಳ ಒಂದು ಪ್ರಭಾವಶಾಲಿ ಅಂಗ ಕರ್ನಾಟಕದಲ್ಲಿ ಸಮಾವೇಶವಾದಂತಾಗುತ್ತವೆ. ಈ ಭೂಭಾಗದ ಜನಸಂಖ್ಯೆ ೧,೧೮,೯೬,೨೨೯೦. ಇದರೊಂದಿಗೆ ಇನ್ನುಳಿದ ಸಂಸ್ಥಾನಗಳಲ್ಲಿಯ ಕನ್ನಡ ಮಾತನಾಡುವ ಪ್ರದೇಶವನ್ನು [ಅದು ಸುಮಾರು ೨೫೯೦ ಚದರು ಮೈಲಿಗಿಂತಲೂ ಹೆಚ್ಚು] ಅದರ ಜನಸಂಖ್ಯೆಯನ್ನು [ಅದು ಐದು ಲಕ್ಷ] ಸೇರಿಸಿದರೆ ಅಖಂಡ ಕರ್ನಾಟಕವು ೬೪.೫೦೦ ಚದರು ಮೈಲು ವಿಸ್ತೀರ್ಣವುಳ್ಳ ವಿಶಾಲ ಪ್ರಾಂತವಾಗಿ ಮೆರೆಯುತ್ತದೆ. ೧,೯೮,೦೦,೦೦೦ ಕ್ಕೆ ಮೇಲ್ಪಟ್ಟು ಜನಬಲವನ್ನುಳ್ಳ ಪ್ರಾಂತ ಯಾರ ಮೇಲೆಯಾದರೂ ತನ್ನ ಪ್ರಭಾವವನ್ನು ಬೀರಬಲ್ಲದು. ಇಂತಹ ಏಕೀಕೃತ ಕನ್ನಡ ನಾಡು ಅಸಾಮ, ಸಿಂಧ, ಓಡಿಸಾ ಪ್ರಾಂತಗಳಿಗಿಂತ ಸಮೃದ್ಧವೂ ವಿಶಾಲವೂ ಆಗುವದರಲ್ಲಿ ಅನುಮಾನಕ್ಕೆ ಆಸ್ಪದವಿಲ್ಲ. ಇಷ್ಟೇ ಅಲ್ಲದೆ ಅದು ಮುಂದುವರಿದ ಪ್ರಾಂತಗಳಾದ ಬಂಗಾಲ, ಪಂಜಾಬ, ಯುಕ್ತಪ್ರಾಂತಗಳಷ್ಟೆ ಮಹತ್ವವುಳ್ಳ ಸತ್ವಯುತವಾದ ಪ್ರಥಮವರ್ಗದ ಪ್ರಾಂತವಾಗುತ್ತದೆ.

ಕನ್ನಡಿಗರು ಇನ್ನು ಸಹಿಸುವದಿಲ್ಲ

ಈ ಪರಿಸ್ಥಿತಿ ಎಷ್ಟು ಅಸಹನೀಯವಾದುದೆಂಬುದನ್ನು ವರ್ಣಿಸಲು ಸಾಧ್ಯವಾಗದಷ್ಟು ಅದು ಅಸಹನೀಯವಾಗಿದೆ. ಎಚ್ಚತ್ತ ಕರ್ನಾಟಕ ಈ ದುರ್ದಸೆಯನ್ನು ಸಹಿಸಲಾರದು. ಐವತ್ತು ವರ್ಷ[illegible] ಈ ಭಾವನೆ ಕನ್ನಡಿಗರ ಮನಸ್ಸಿನಲ್ಲಿ ಒಂದಲ್ಲ ಒಂದು ರೀತಿಯಿಂದ ಜಾಗ್ರತಗೊಳ್ಳುತ್ತ ಬಂದಿದೆ. ಪ್ರಾಂತದ ಸರ್ವತೋಮುಖವಾದ ಏಳಿಗೆಗೆ ಈ ವಿಕ್ಷಿಪ್ತ ಸ್ಥಿತಿ ಎಂಥ ತೊಡರಾಗಿದೆ ಎಂಬುದನ್ನು ಕರ್ನಾಟಕದ ಜನ ಬಹಳ ಹಿಂದೆಯೇ ಅರಿತಿದ್ದರೆನ್ನುವದಕ್ಕೆ ೧೮೫೦ ರಲ್ಲಿ ಆರಂಭವಾದ ಕನ್ನಡ ಭಾಷಾ ಪ್ರಚಾರವೊಂದು ಪ್ರಬಲವಾದ ನಿದರ್ಶನವಾಗಿದೆ.

ಮುಂದುವರಿಯುತ್ತ ಅಧ್ಯಕ್ಷರು ಏಕೀಕರಣ ಚಳವಳಿಯ ಹಿನ್ನೆಲೆಯನ್ನು ರೇಖಿಸಿ ಬ್ರಿಟಿಶ ಕರ್ನಾಟಕ ಏಕೀಕರಣದ ಧ್ಯೇಯದಿಂದ ಪ್ರಾರಂಭವಾಗಿ ಕೊನೆಗೆ ೧೯೪೪ ರಲ್ಲಿ ಸಂಸ್ಥಾನ ಸಹಿತ ಅಖಿಲ ಕರ್ನಾಟಕವನ್ನು ಒಂದೇ ಆಡಳಿತಕ್ಕೆ ತರೆ

—೬ನೇ ಪುಟಕ್ಕೆ

ಕರ್ನಾಟಕಸ್ಥರ ನಿರ್ಧಾರ

ದಾವಣಗೆರೆಯಲ್ಲಿ ಕರ್ನಾಟಕಸ್ಥರ ಮಹಾಧಿವೇಶನ ಸೇರಿ ಅಖಂಡ ಕರ್ನಾಟಕ ಪ್ರಾಂತ ರಚನೆಯ ನಿರ್ಧಾರ ಮಾಡಲಾಯಿತು. ಈ ಮಹಾಧಿವೇಶನದ ಕಾರ್ಯಕಲಾಪಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ಹಿಂದುಸ್ತಾನದ ಘಟನೆಯನ್ನು ಸಿದ್ಧಪಡಿಸುವ ಹೊಣೆಯನ್ನು ಬ್ರಿಟಿಶ್ ಸರಕಾರವು ಹಿಂದೀಯರಿಗೆ ಕೊಟ್ಟ ಈ ಸಂಧಿಕಾಲದಲ್ಲಿ ಕರ್ನಾಟಕಸ್ಥರು ಸ್ವತಂತ್ರ ಪ್ರಾಂತ ರಚನೆಯ ಈ ಅಚಲ ನಿರ್ಧಾರ ಮಾಡಿದ್ದು ಅತ್ಯಂತ ಮಹತ್ವದ್ದಾಗಿದೆ. ಸಂಸ್ಥಾನವನ್ನೊಳಗೊಂಡ ಅಖಂಡ ಕರ್ನಾಟಕವನ್ನು ಒಂದು ಗೂಡಿಸಬೇಕೆಂಬ ನಿರ್ಧಾರವನ್ನು ಏಕೀಕರಣ ಸಂಘದವರು ಬೆಳಗಾವಿಯ ಸಮ್ಮೇಲನದಲ್ಲಿಯೆ ಮಾಡಿದ್ದು ೧೯೪೪ ರಲ್ಲಿ ಮತ್ತು ೧೯೪೫ ರಲ್ಲಿ ಅದನ್ನು ಹೆಚ್ಚು ಒತ್ತಿ ಹೇಳಿದ್ದು ಸರ್ವಶ್ರುತ. ಅಖಿಲ ಕರ್ನಾಟಕಸ್ಥರ ಈ ಮಹಾಧಿವೇಶನ ಈ ಮಾತನ್ನು ಮತ್ತಷ್ಟು ನಿಚ್ಚಳವಾಗಿ ಜನತೆಯ ಮುಂದಿಟ್ಟಿತು. [illegible] ಹಿಂದೆ ಹೋಗುವುದಾದರೆ ಕರ್ನಾಟಕಸ್ಥರು ನಾಗಪುರ ಕಾಂಗ್ರೆಸ್ಸಿನಲ್ಲಿಯೆ ತಮ್ಮ ಈ ಸ್ವತಂತ್ರ ಪ್ರಾಂತ ಬೇಡಿಕೆಯನ್ನು ಮಂಡಿಸಿ ಅದನ್ನು ಪಡೆದುಬಿಟ್ಟರು. ಮತ್ತು ಅಂದಿನಿಂದ ಇಂದಿನ ವರೆಗೆ ಸಂಸ್ಥಾನವನ್ನೊಳಗೊಂಡ ಇಡೀ ಕರ್ನಾಟಕ ಒಂದೇ ಆಡಳಿತದಲ್ಲಿ ತರಲ್ಪಟ್ಟು ಕಾರ್ಯಕಲಾಪಗಳು ಜರಗುತ್ತವೆ. ೧೯೩೮ ರಲ್ಲಿ ಕೂಡಿದ್ದ ಸರ್ವಪಕ್ಷೀಯ ಪರಿಷತ್ತು ಕರ್ನಾಟಕಸ್ಥರ ಈ ನ್ಯಾಯ್ಯ ಬೇಡಿಕೆ ಸಮಂಜಸವಾಗಿದೆಂಬುದನ್ನು ಒಪ್ಪಿತು. ಆರ್ಥಿಕ ದೃಷ್ಟಿಯಿಂದಲೂ ಕರ್ನಾಟಕ ಸ್ವತಂತ್ರ ಪ್ರಾಂತವಾಗಲು ತಕ್ಕುದಾಗಿದೆಂಬುದು ಸಿದ್ಧವಾಗಿದೆ. ಆದರೂ ಸರಕಾರದವರು ತಮ್ಮ ಆಡಳಿತದಲ್ಲಿ ಇದನ್ನು ಕಾರ್ಯರೂಪದಲ್ಲಿ ತಂದಿರುವುದಿಲ್ಲ ಕನ್ನಡಿಗರು ವಿವಿಧ ಆಡಳಿತಗಳಲ್ಲಿ ಹರಿದು ಹಂಚಿ ಹೋದ್ದರಿಂದ ಅವರ ಕೂಗು ಬ್ರಿಟಿಶ್ ಸರಕಾರದ ಕಿವಿ ವರೆಗೆ ಜೋರಾಗಿ ಅಪ್ಪಳಿಸುವುದಿಲ್ಲ. ಅಲ್ಲದೆ ಸಂಸ್ಥಾನಿಕರೂ ಈ ಸಮಸ್ಯೆಯ ಪರಿಹಾರಕ್ಕೆ ಅಡ್ಡಿಯಾಗಿರುವರೆಂದುಹೇಳಬಹುದು. ಅಂತೆಯೆ ದಾವಣಗೆರೆ ಮಹಾಧಿವೇಶನದವರು ಬ್ರಿಟಿಶ ಕರ್ನಾಟಕ ಪ್ರಾಂತ ರಚನೆಗೆ ಅಡ್ಡಿ ಆತಂಕಗಳು ಬಾರದಂತೆ ಸಂಸ್ಥಾನವನ್ನೊಳಗೊಂಡ ಅಖಂಡ ಕರ್ನಾಟಕ ಪ್ರಾಂತ ರಚನೆಯ ನಿರ್ಧಾರ ಮಾಡಿದ್ದಾರೆ. ಇದು ಸಮಂಜಸವಾಗಿದೆ. ಮುಂದಿನ ಕಾರ್ಯಕಲಾಪಗಳನ್ನು ಸಾಗಿಸಿ ಪ್ರಾಂತ ರಚನೆಯ ಪ್ರಯತ್ನ ರಭಸದಿಂದ ನಡೆಸಲು ಉಪಸಮಿತಿಯೊಂದನ್ನು ನಿಯಮಿಸಿದ್ದು ಸೂಕ್ತವಾಗಿದೆ ಈ ಸಮಿತಿಯವರು ಕರ್ನಾಟಕಸ್ಥರೆಲ್ಲರ ಸಹಕಾರದಿಂದ ಬೇಗನೆ ಸ್ವತಂತ್ರ ಪ್ರಾಂತ ರಚಿಸಲೆಂದು ಹಾರಯಿಸುತ್ತೇವೆ.

[illegible]ನಾ ಸಮಿತಿಯ ಕರ್ತವ್ಯ

ಹಿಂದುಸ್ತಾನದ ಹೊಸ ಘಟನೆಯನ್ನು ಸಿದ್ಧಪಡಿಸಲು ಬೇಗನೆ ಘಟನಾ ಸಮಿತಿ ಸೇರಲಿದೆ. ಈ ಸಮಿತಿಯವರು ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ತೆಗೆದುಕೊಂಡು ಆಯಾ ಭಾಷಾನ್ವಯ ಪ್ರಾಂತಗಳ ಸೀಮೆಯನ್ನು ನಿರ್ಣಯಿಸಲು ಸಮಿತಿಯನ್ನು ನಿಯಮಿಸುವುದು ಅತ್ಯಂತ ಅವಶ್ಯವಾಗಿದೆ. ಪ್ರಾಸ್ತಾವಿಕ ಅಧಿವೇಶನದಲ್ಲಿಯೆ ಈ ಸಮಿತಿಯನ್ನು ನಿಯಮಿಸಿ ವರದಿಯನ್ನು ತರಿಸಿಕೊಳ್ಳುವುದವಶ್ಯವಾಗಿದೆ. ಕಾಂಗ್ರೆಸ್ ಕಾರ್ಯ ಸಮಿತಿಯ ಹಿಂದಿನ ಸದಸ್ಯರೂ ಆಂಧ್ರ ಪ್ರಾಂತದ ಪ್ರಸಿದ್ಧ ಮುಖಂಡರೂ ಘಟನಾ ಸಮಿತಿಯ ಸದಸ್ಯರೂ ಆಗಿರುವ ಡಾ. ಪಟ್ಟಾಭಿ ಸೀತಾರಾಮಯ್ಯನವರು ಭಾಷಾನ್ವಯ ಪ್ರಾಂತರಚನೆಯ ಸಂಬಂಧದಲ್ಲಿ ಬರೆಯುತ್ತ ಈ ಮಾತನ್ನು ನಿಚ್ಚಳಪಡಿಸಿ [illegible]ಂತು ಈ ಸೀಮಾ ಸಮಿತಿಯನ್ನು [illegible] ಎರಡು ತಿಂಗಳುಗಳಲ್ಲಿ ವರದಿ ತರಿಸಿ[illegible]ದು ಹೊಸ ಭಾಷಾನ್ವಯ ಪ್ರಾಂತರಚನೆಯನ್ನು ಸಿದ್ಧಪಡಿಸಲಿರುವ ಹೊಸ ಘಟನೆಯಲ್ಲಿ ಸೇರ್ಪಡಿಸದಿದ್ದರೆ ಇನ್ನು ಹತ್ತು ವರುಷಗಳವರೆಗೆ ಭಾಷಾನ್ವಯ ಪ್ರಾಂತರಚನೆಯ ಪ್ರಶ್ನೆ ಹಿಂದೆ ಬೀಳುವುದೆಂದು ಡಾಕ್ಟರ ಸಾಹೇಬರು ಎಚ್ಚರಿಕೆ ಕೊಟ್ಟಿದ್ದಾರೆ. ಇದು ಅತ್ಯಂತ ಮಹತ್ವದ್ದಾಗಿದೆ. ಬ್ರಿಟಿಶ ಮಂತ್ರಿತ್ರಯರ ಘೋಷಣೆಯನ್ವಯ ಈಗ ಪ್ರಾಂತಗಳ ಪುನರ್ಘಟನೆಯಾದರೆ ಮುಂದೆ ಹತ್ತು ವರುಷಗಳವರೆಗೆ ಅದರಲ್ಲಿ ಹೆಚ್ಚು ಕಡಮೆ ಆಗುವಂತಿಲ್ಲ. ಅದುದರಿಂದ ಈಗಲೆ ಕರ್ನಾಟಕಸ್ಥರು ಭಾಷಾನ್ವಯ ಪ್ರಾಂತರಚನೆಗಾಗಿ ಜೋರಾಗಿ ಪ್ರಯತ್ನಿಸಬೇಕು ಸಂಸ್ಥಾನಿಕರು ಈ ಸಮಯದಲ್ಲಿ ತಮ್ಮ ಭವಿತವ್ಯದ ಸ್ಪಷ್ಟ ಕಲ್ಪನೆ ಮಾಡಿಕೊಂಡು ಜನತೆಯೊಡನೆ ಸಹಕರಿಸಿ ತಮ್ಮ ಮತ್ತು ಪ್ರಾಂತದ ಉನ್ನತಿಯನ್ನು ಸಾಧಿಸಬೇಕು. ದಾವಣಗೆರೆ ಮಹಾಧಿವೇಶನದವರೂ ಇದೇ ಬಗೆಯ ಸಲಹೆಯಿತ್ತಿದ್ದಾರೆ. ಇಡೀ ಕರ್ನಾಟಕದ ಅತ್ಯಂತ ಪ್ರಾತಿನಿಧಿಕವಾಗಿದ್ದ ಈ ಮಹಾಧಿವೇಶನದ ಈ ನಿರ್ಧಾರವನ್ನು ಸಂಸ್ಥಾನಿಕರು, ಘಟನಾ ಸಮಿತಿಯವರು ಮತ್ತು ಬ್ರಿಟಿಶ್ ಸರಕಾರದವರು ಅಲಕ್ಷಿಸಲಾರರು. ಕನ್ನಡಿಗರ ಈ ಬಹುದಿನದ ಬೇಡಿಕೆಯು ಪೂರಯಿಸುವದು. ಕರ್ತವ್ಯವಾಗಿದೆ.

ಸಂಪಾದಕೀಯ * * * * * * *

ಟೀಕೆ-ಟಿಪ್ಪಣೆಗಳು

ರಾಷ್ಟ್ರೀಯ ಸರಕಾರಕ್ಕೆ ಸ್ವಾಗತ

೧೯೪೬ ನೆ ಇಸ್ವಿಯ ಸಪ್ಟೆಂಬರ ೨ ನೆಯ ತಾರೀಕು ಹಿಂದುಸ್ತಾನ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂತಹ ದಿನ. ಅಂದು ರಾಷ್ಟ್ರೀಯ ಮಹಾಸಭೆಯ ಧುರೀಣರು ಉಳಿದ ಅಲ್ಪಸಂಖ್ಯಾಕರ ಮತ್ತು ಮುಸಲ್ಮಾನರ ಸಹಾಯದಿಂದ ನಡುಗಾಲ ಸರಕಾರ ಸ್ಥಾಪಿಸಿಕೊಂಡು ಆಡಳಿತ ಸೂತ್ರಗಳನ್ನ ವಹಿಸಿಕೊಂಡಿದ್ದಾರೆ. ಆ ದಿನಮುಸ್ಲಿಂಲೀಗ ಪಕ್ಷದವರು ಈ ನಡುಗಾಲ ಸರಕಾರದಲ್ಲಿ ಸಹಕರಿಸಿದ್ದರೆ ಹೆಚ್ಚು ಚಿರಸ್ಮರಣೀಯವಾಗುತಿತ್ತು. ಆದರೆ ಲೀಗಿನವರು ದುರಾಗ್ರಹ ತಳೆದುದೇಶದಸ್ವಾತಂತ್ರ್ಯ ಪಥದಲ್ಲಿ ಅಡ್ಡಗಾಲು ಹೊಡೆದುದು ದುರ್ದೈವದ ಸಂಗತಿ ಇನ್ನಾದರೂ ಅವರಿಗೆ ಸದ್ಬುದ್ಧಿಯುಂಟಾಗಲೆಂದು ಇಡೀ ದೇಶವೇ ಬಯಸುತಿದೆಂಬಲ್ಲಿ ಸಂದೇಹವಿಲ್ಲ. ಪಂಡಿತ ಜವಾಹರಲಾಲರ ಮುಖಂಡತ್ವದಲ್ಲಿ ಸ್ಥಾಪಿತವಾದ ಈ ನಡುಗಾಲ ಸರಕಾರದ ಮಾರ್ಗ ಮಾತ್ರ ಸುಗಮವಾಗಿಲ್ಲ. ಆಡಳಿತ ಮಾರ್ಗದಲ್ಲಿ ಅನೇಕ ಅಡ್ಡಿ ಅಡಚಣೆಗಳಿವೆ. ಮಹಾತ್ಮಾ ಗಾಂಧಿಯವರು ಅಪ್ಪಣೆ ಕೊಡಿಸಿದಂತೆ ಅವರ ಈ ಕಿರೀಟವು ಮುಳ್ಳ ಕಿರೀಟವಾಗಿದೆ. ಅವರು ಬಿಡಿಸತಕ್ಕ ಸಮಸ್ಯೆಗಳು ಅನೇಕ ಇರುವವು. ದೇಶವಿಂದು ಬಗೆ ಬಗೆಯ ಕಷ್ಟನಷ್ಟಗಳಿಂದ ಬಳಲುತಿದೆ. ಅಹಾರ ಸಮಸ್ಯೆ ಬಾಧಿಸುತಲಿದೆ. ಬಡತನದಿಂದ ಜನ ಬಳಲುತಿದ್ದಾರೆ. ಬಟ್ಟೆಯ ಸಮಸ್ಯೆಯೂ ಜೀವ ತಿನ್ನುತಿದೆ. ಇದೆಲ್ಲಕ್ಕೂ ಹೆಚ್ಚಿನದೆಂದರೆ ಮುಸ್ಲಿಂ ಲೀಗಿನವರು ವಿರೋಧಿಸುತಿರುವುದರಿಂದ ದೇಶದಲ್ಲಿ ಶಾಂತಿ ನೆಮ್ಮದಿಯುಳಿಯದಂತಾಗಿದೆ. ಅಂತರ ರಾಷ್ಟ್ರೀಯ ಪ್ರಶ್ನೆಯನ್ನೂ ನಡುಗಾಲ ಸರಕಾರ ಬಿಡಿಸಬೇಕಾಗಿದೆ. ದಕ್ಷಿಣ ಅಫ್ರಿಕೆ ಮೊದಲಾದ ಕಡೆಗಳಲ್ಲಿ ಭಾರತೀಯರಿಗೆ ಆಗುತಿರುವ ಅಪಮಾನ, ಅನ್ಯಾಯಗಳನ್ನು ಹೋಗಲಾಡಿಸಬೇಕಾಗಿದೆ. ನಮ್ಮ ದೇಶದಲ್ಲಿಯೆ ಅನ್ಯಾಯದ ಕರಗಳನ್ನು ರದ್ದುಪಡಿಸಿ, ದಬ್ಬಾಳಿಕೆಗೆ ಆಹುತಿಯಾದವರ ಬಿಡುಗಡೆ ಮಾಡಬೇಕಾಗಿದೆ ಇವೆಲ್ಲ ಮಹತ್ವದ ಸಮಸ್ಯೆಗಳನ್ನು ಬಿಡಿಸುವಲ್ಲಿ ರಾಷ್ಟ್ರೀಯ ಸರಕಾರ ಯಶಸ್ವಿಯಾಗಲೆಂದೂ ಭಾರತೀಯರು ಅದಕ್ಕೆ ಹಾರ್ದಿಕ ಸಹಕಾರ ಕೊಡಬೇಕೆಂದು ಸೂಚಿಸುತ್ತೇವೆ.

ಜಿನ್ನಾ—ಚರ್ಚಿಲ್ ಒಳಸಂಚು

ಮುಸ್ಲಿಂ ಲೀಗಿನ ಧುರೀಣರಾದ ಬ್ಯಾ. ಜಿನ್ನಾ ಸಾಹೇಬರು ಬ್ರಿಟಿಶ ಪ್ರತಿಗಾಮಿಗಳ ಬೆಂಬಲದಿಂದಲೆ ಹೀಗೆ ಹಿಂದೀ ಸ್ವಾತಂತ್ರ್ಯ ಪಥದಲ್ಲಿ ಅಡ್ಡಗಾಲು ಹೊಡೆಯುತಿರುವರೆಂಬುದು ಇದೀಗ ಬೆಳಕಿಗೆ ಬಂದಿದೆ. ಒಡಕು ಹುಟ್ಟಿಸಿ ಆಳುವ ತಮ್ಮ ಚಾಣಕ್ಯ ನೀತಿಯನ್ನು ಬ್ರಿಟಿಶರು ಅನುಸರಿಸುತ್ತ ಬಂದದ್ದರಿಂದಲೆ ಇಂದು ಹಿಂದುಸ್ತಾನದಲ್ಲಿ ಇಷ್ಟೊಂದು ಪಕ್ಷಪಂಗಡಗಳುಂಟಾಗಿ ಜಾತೀಯ ಸಮಸ್ಯೆ ಮೇಲಿಂದ ಮೇಲೆ ತಲೆಯೆತ್ತುತಿದೆ ಬ್ರಿಟಿಶ ಮಂತ್ರಿತ್ರಯರು ಮೇ ತಿಂಗಳಲ್ಲಿ ಹಿಂದುಸ್ತಾನದಲ್ಲಿ ಹಿಂದೀ ಬಿಕ್ಕಟ್ಟು ಬಿಡಿಸುವ ಚರ್ಚೆ ನಡೆಸಿದ್ದಾಗ ಜಿನ್ನಾಸಾಹೇಬರು ಚರ್ಚಿಲ್ಲರೊಡನೆ ಟೆಲಿಫೋನ ಸಂಭಾಷಣೆ ನಡೆಸುತಿದ್ದರು. ಅವರ ಅಭಯದಿಂದಲೆ ಜಿನ್ನಾಸಾಹೇಬರು ತಮ್ಮ ಕುದರೆಯ ಸವಾರಿಯನ್ನು ಹೀಗೆ ನಡೆಸಿರುವರೆಂದು ಹೇಳಬಹುದು. ಬ್ಯಾ. ಜಿನ್ನಾ ಸಾಹೇಬರು ಮಂತ್ರಿತ್ರಯರು ಕೊಟ್ಟ ವಚನದಂತೆ ನಡೆಯಲಿಲ್ಲೆಂದು ಮುಂತಾಗಿ ಆರೋಪಿಸಿ ಬ್ರಿಟಿಶ ಮುಖ್ಯ ಮಂತ್ರಿಗಳಿಗೆ ಮತ್ತು ಚರ್ಚಿಲ್ ಸಾಹೇಬರಿಗೆ ಮತ್ತು ಇತರ ಹಲವರಿಗೆ ಪತ್ರ ಬರೆದಿದ್ದರಂತೆ. ಈ ಪತ್ರಕ್ಕೆ ಅಟ್ಲಿ ಸಾಹೇಬರು ಪತ್ರ ಮುಟ್ಟಿದೆಂದು ಉತ್ತರ ಕಳಿಸಿದರು. ಆದರೆ ಚರ್ಚಿಲ್ ಸಾಹೇಬರು ಇಷ್ಟೆ ಬರೆಯದೆ ಜಿನ್ನಾ ಸಾಹೇಬರಿಗೆ ತಮ್ಮ ಪಕ್ಷದ ಬೆಂಬಲದ ಆಶ್ವಾಸನ ಕೊಟ್ಟರೆಂದು ತಿಳಿಯುತ್ತದೆ ಜಿನ್ನಾ ಸಾಹೇಬರು ಪಾಕಿಸ್ತಾನ ಸ್ವರಾಜ್ಯ ಸ್ವೀಕರಿಸಬೇಕು. ಅದಕ್ಕೆ ಪ್ರತಿಯಾಗಿ ಚರ್ಚಿಲ್ ಸಾಹೇಬರ ಪಕ್ಷವು ಪಾಕಿಸ್ತಾನಕ್ಕೆ ಬೆಂಬಲ ಕೊಡುವುದೆಂದು ಚರ್ಚಿಲ್‌ರು ತಮ್ಮ ಪತ್ರದಲ್ಲಿ ಬರೆದಿರುವರಂತೆ. ಅಲ್ಲದೆ ಪಾಕಿಸ್ತಾನ ವಿಭಾಗದಲ್ಲಿಯ ಸಾಧನ ಸಾಮಗ್ರಿಗಳನ್ನು ಬ್ರಿಟಿಶ್ ಬಂಡವಲುದಾರರ ಉಪಯೋಗಕ್ಕಾಗಿ ಮುಕ್ತದ್ವಾರವಿಡಬೇಕೆಂದು ಕೇಳಿರುವರಂತೆ. ಅಲ್ಲದೆ ಪಾಕಿಸ್ತಾನದ ರಕ್ಷಣೆಗಾಗಿ ಬ್ರಿಟಿಶ ಸೈನ್ಯವನ್ನಿಡಬೇಕು. ಮತ್ತು ಅವಶ್ಯವೆನಿಸಿದಾಗ ರಶಿಯದ ಆಕ್ರಮಣದಿಂದ ಹಿಂದುಸ್ತಾನವನ್ನು ರಕ್ಷಿಸಲು ಅದು ಮುಂದಾಗಬೇಕೆಂದೂ ಚರ್ಚಿಲ್ಲರು ಸೂಚಿಸಿದ್ದರಂತೆ. ಚರ್ಚಿಲ್ಲರಿಂದ ಬಂದ ಪತ್ರವನ್ನು ಜಿನ್ನಾ ಸಾಹೇಬರು ಪ್ರಕಟಿಸಿದ್ದರೆ ಅವರು ನಡೆಸಿದ ಕಾರಸ್ಥಾನಗಳೆಲ್ಲ ಬಯಲಿಗೆ ಬರುವವೆಂಬಲ್ಲಿ ಸಂದೇಹವಿಲ್ಲ ಜನತೆಗೆ ತರ್ಕವಿತರ್ಕ ಮಾಡಲು ಅವಕಾಶ ಕೊಡದೆ ಈ ಪತ್ರವ್ಯವಹಾರವನ್ನು ಪ್ರಸಿದ್ಧಿಸುವದೆ ಒಳಿತೆಂದು ಹೇಳಬಯಸುತ್ತೇವೆ. ಈ ಪತ್ರವ್ಯವಹಾರದಲ್ಲಿಯ ಮಾತುಗಳು ನಿಜವಿದ್ದರೆ ಜಿನ್ನಾಸಾಹೇಬರು ಹಿಂದುಸ್ತಾನಕ್ಕೆ ಎಷ್ಟೊಂದು ಹಾನಿ ಬಗೆಯುತಿರುವರೆಂಬುದು ಸ್ಪಷ್ಟವಾಗುವುದು ಜಿನ್ನಾ ಸಾಹೇಬರು ಇನ್ನಾದರೂ ತಮ್ಮ ಧೋರಣವನ್ನು ಬದಲಿಸುವರೊ?

ಹೊಣೆಗೆಟ್ಟ ದೊಂಬಿಗಳು

ನಡುಗಾಲ ಸರಕಾರ ಸ್ಥಾಪನೆಯ ದಿನ ಮುಸ್ಲಿಂ ಲೀಗಿನವರು ಕಪ್ಪು ನಿಶಾನೆಗಳನ್ನು ಏರಿಸಿ ತಮ್ಮ ವಿರೋಧವನ್ನು ಪ್ರದರ್ಶಿಸಿದರು. ಕಾಂಗ್ರೆಸ್ಸು ಕೇಂದ್ರದಲ್ಲಿ ಅಧಿಕಾರ ಸ್ವೀಕರಿಸಲು ನಿರ್ಧರಿಸಿದಂದಿನಿಂದ ಮುಸ್ಲಿಂ ಲೀಗಿನವರ ವಿರೋಧ ಹೆಚ್ಚಿದೆ ಅವರ ಧುರೀಣರು ಅಜ್ಞ ಜನರಲ್ಲಿ ದ್ವೇಷಭಾವ ಹುಟ್ಟುವಂತೆ ಭಾಷಣಗಳನ್ನು ಮಾಡಹತ್ತಿದ್ದಾರೆ. ಕ್ಷಣಾರ್ಧದಲ್ಲಿ ಈ ಸರಕಾರವನ್ನುರುಳಿಸಿ ಬಿಡುವವೆಂದು ಒಬ್ಬರೆಂದರೆ ಇನ್ನೊಬ್ಬರು ಹಿಂದೂ ಕಾಂಗ್ರೆಸ್ಸಿನ ಈ ರಾಜ್ಯವನ್ನು ಮುಸಲ್ಮಾನರು ಜೋರಿನಿಂದ ವಿರೋಧಿಸುವರೆಂದು ಅಭಿಪ್ರಾಯ ಪಡುತ್ತಿರುವರು. ಮುಸ್ಲಿಂ ಲೀಗಿನ ಮುಖಪತ್ರವಾದ ಡಾನ ಪತ್ರಿಕೆ ಈ ಹೊಸಸರಕಾರದ ಗೂಡ ಅಸಹಕಾರ ಮಾಡಲು ನಿರ್ಧರಿಸಿದೆ. ಮುಸ್ಲಿಂ ಲೀಗಿನವರ ಈ ಬಗೆಯ ಮನೋವೃತ್ತಿಯಿಂದ ಪುಂಡ ಮತ್ತು ಸ್ವಾರ್ಥಿಗಳಿಗೆ ಒಂದು ಬಗೆಯಿಂದ ಸರಪಳಿ ಉಚ್ಚಿ ಬಿಟ್ಟಂತಾಗಿದೆ. ಎಂತಾದರೂ ದೊಂಬಿ ಹೂಡಿ ಸ್ವಾರ್ಥ ಸಾಧಿಸಿಕೊಳ್ಳುವಲ್ಲಿ ಅವರು ನಿರತರಾಗಿರುವರೆಂದು ಹೇಳಿದರೆ ತಪ್ಪಾಗದು. ಭಾರತೀಯರದೆ ಆದ ಸರಕಾರದ ವಿರುದ್ಧ ಇಂತಹ ದೊಂಬಿಯನ್ನು ನಡೆಸುವದು ಆತ್ಮವಿಘಾತಕವಾದುದೆಂಬುದನ್ನು ಅವರು ಮರೆಯುತಿರುವರು. ಕಲಕತ್ತೆಯಲ್ಲಾದ ಹತ್ಯಾಕಾಂಡ ಇನ್ನೂ ಮರೆಯದಿರುವಾಗಲೇ ಮುಂಬಯಿಯಲ್ಲಿ ಪುಂಡರು ದೊಂಬಿಯನ್ನು ಪ್ರಾರಂಭಿಸಿದ್ದಾರೆ. ಮುಂಬಯಿಯಲ್ಲಿ ಅಧಿಕಾರಿಗಳು ಸಕಾಲದಲ್ಲಿ ಉಪಾಯ ಕೈಕೊಂಡದ್ದರಿಂದ ದೊಂಬಿಯಷ್ಟೊಂದು ಹಬ್ಬಲಿಲ್ಲ. ಆದರೂ ಇನ್ನೂ ಅದು ಶಾಂತವಾಗಿಲ್ಲ. ಅದೇ ರೀತಿ ಇನ್ನು ಹಲವು ಕಡೆಗಳಲ್ಲಿಯೂ ದೊಂಬಿ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿವೆ. ಇದು ಅತ್ಯಂತ ಘಾತಕ ಮನೋವೃತ್ತಿ ಇದಕ್ಕೆ ಒಮ್ಮೆಲೆ ಜಾತೀಯ ಬಣ್ಣ ಬಳಿಯ ಬೇಕಾದುದಿಲ್ಲ. ಏಕೆಂದರೆ ಆಯಾ ಜಾತಿಗಳಲ್ಲಿಯ ಸಮಂಜಸ ಹೊಣೆಗಾರ ಜನರು ಇಂಥ ದೊಂಬಿಗಳನ್ನು ಯಾವಾಗಲೂ ನಿಷೇಧಿಸುವದುಂಟು. ಕೇವಲ ಪುಂಡರು ಸ್ವಾರ್ಥಿಗಳು ಇದನ್ನು ಮಾಡುತಿರುವರು ಪ್ರೋತ್ಸಾಹಿಸುತಿರುವರು. ಇದಕ್ಕೆ ಕೂಡಲೆ ಅರೆದಾಳ ಬಡೆಯಲಿಕ್ಕೇಬೇಕು. ಸರಕಾರದವರು ಈ ಸಂದರ್ಭದಲ್ಲಿ ತೆಗೆದುಕೊಳ್ಳುವ ಉಪಾಯಗಳಿಗೆ ಜನತೆ ಬೆಂಬಲ ಕೊಡಲಿಕ್ಕೆ ಬೇಕು. ಸದ್ಯದ ಸರಕಾರ ಹಿಂದಿನಂತೆ ಪರಕೀಯ ಸರಕಾರವಲ್ಲ. ಜನತೆಯ ಪ್ರತಿನಿಧಿಗಳ ಅಧಿಕಾರ ಸೂತ್ರ ವಹಿಸಿಕೊಂಡಿರುವರು. [illegible] ದೇಶದಲ್ಲಿ ಶಾಂತಿ ನೆಮ್ಮದಿಯುಳಿವುದಕ್ಕಾಗಿ ಅವರು ಕೈಗೊಳ್ಳುವ ಉಪಾಯಗಳು ಯಾವಾಗಲೂ ಸ್ವಾಗತಾರ್ಹವೆ. ಈ ಮಾತನ್ನು ನೆನೆದು ಎಲ್ಲರೂ ಪರ್ಯಾಯ ಹೊಣೆಗೆಟ್ಟ ದೊಂಬಿಗಳನ್ನು ನಾಶಗೊಳಿಸಬೇಕೆಂದು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ದೊಂಬಿಯ ಕಾರಣ ?

ನಾವು ಮೇಲೆ ಉಲ್ಲೇಖಿಸಿದ ವಿಧಾನಗಳಿಗೆ ಬ್ಯಾ. ಜಿನ್ನಾರವರು ಅಮೇರಿಕೆಯ ಪತ್ರಿಕಾ ಪ್ರತಿನಿಧಿಗೆ ಕೊಟ್ಟ ಸಂದರ್ಶನದ ಅಂಶಗಳು ಸಾಕ್ಷಿಯಾಗಿವೆ. ಅಮೇರಿಕೆಯ ಯುನಾಯಟೆಡ್ ಪ್ರೆಸ್ಸಿಗೆ ಕೊಟ್ಟ ಸಂದರ್ಶನದಲ್ಲಿ ಮುಸ್ಲಿಂ ಲೀಗ ಧುರೀಣ ಬ್ಯಾ. ಜಿನ್ನಾರವರು ಹೀಗೆ ಹೇಳಿದರೆಂದು ಪ್ರಸಿದ್ಧವಾಗಿದೆ. “ಸದ್ಯಕ್ಕೆ ಹಿಂದುಸ್ತಾನದ ಬೇರೆಬೇರೆ ಸ್ಥಳಗಳಲ್ಲಿ ನಡೆದ ದೊಂಬಿಗೆ ವಸ್ತುತಃ ಕಾಂಗ್ರೆಸ್ಸು ಮತ್ತು ವಾಯಿಸರಾಯರೆ ಹೊಣೆಗಾರರಾಗಿರುವರು. ಏಕೆಂದರೆ ಅವರು ಸ್ವೀಕರಿಸಿದ ಧೋರಣದಿಂದ ಭಾರತದಲ್ಲಿಯ ಮುಸಲ್ಮಾನರ ತೀವ್ರ ಅಪಮಾನವಾಗಿದೆ. ಅದರಲ್ಲಿಯೂ ಈಗ ಹಿಂದೂ ರಾಜ್ಯ ಸ್ಥಾಪನವಾಗಿರುವುದರಿಂದ ಮುಸಲ್ಮಾನರು ತಮ್ಮ ಅಜ್ಞೆಯಲ್ಲಿ ಉಳಿಯಬೇಕೆಂದು ಹಿಂದುಗಳಲ್ಲಿ ಬೆಳೆಯಹತ್ತಿದ ಭಾವನೆ ದುಣ್ಣನ ಮೇಲೆ ಬರೆ ಕೊಟ್ಟಂತಾಗಿದೆಂದು ಮುಸಲ್ಮಾನರಿಗೆನಿಸಿದರೆ ಆಶ್ಚರ್ಯವೇನು ? ನಾವಿನ್ನೂ ಪ್ರತೀಕಾರದ ಮಾರ್ಗ ನಿಶ್ಚಯಿಸಿಲ್ಲ. ಆದರೆ ಅದು ಪ್ರಾರಂಭವಾದರೂ ಯಾವಾಗಲೂ ಶಾಂತತಾಮಯವೇ ಉಳಿಯುವದೆಂಬುದು ನಿಶ್ಚಿತವೆಂದು ತಿಳಿಯಿರಿ. ಈವರೆಗಿನ ನಮ್ಮ ಎಲ್ಲ ಪ್ರದರ್ಶನಗಳೂ ಶಾಂತತಾಮಯವಾಗಿಯೆ ನಡೆಯಬೇಕೆಂದು ಹೇಳಲಾಗಿತ್ತು” ಎಂದು ಮುಂತಾಗಿ ಜಿನ್ನಾ ಸಾಹೇಬರು ಅಭಿಪ್ರಾಯಪಟ್ಟಿರುವರಂತೆ. ಈ ಅಭಿಪ್ರಾಯ ನಿಜವಿದ್ದರೆ ಅವರು ಮುಂಬಯಿ ಮೊದಲಾದ ನಗರಗಳಲ್ಲಿ ನಡೆದ ಅತ್ಯಾಚಾರಗಳನ್ನು ತೀವ್ರ ಶಬ್ದಗಳಲ್ಲಿ ಏಕೆ ನಿಷೇಧಿಸಬಾರದು? ಲೀಗಿನ ಬೆಂಬಲವೂ ತಮಗಿಲ್ಲೆಂದು ಪುಂಡರಿಗೆ ಮನವರಿಕೆಯಾದರೆ ಅವರು ಹತ್ಯಾಕಾಂಡಕ್ಕೆಳಸರು. ಆದುದರಿಂದ ಜಿನ್ನಾಸಾಹೇಬರು ಮತ್ತು ಅವರ ಅನುಯಾಯಿಗಳು ಪತ್ರಿಕಾ ಪ್ರಕಟನೆ ತೆಗೆದು ಸದ್ಯದಲ್ಲಿ ಅಲ್ಲಲ್ಲಿ ನಡೆದ ಅತ್ಯಾಚಾರಗಳನ್ನು ತೀವ್ರ ಶಬ್ದಗಳಲ್ಲಿ ಖಂಡಿಸಬೇಕು. ಅಂದರೆ ಶಾಂತಿ ಸ್ಥಾಪನೆಗೆ ಮಾರ್ಗ ಸುಗಮವಾದಂತಾಗುವದು.

ಆಕಾಶವಾಣಿಯಲ್ಲಿ ಕನ್ನಡ

ಲೋಕ ಪ್ರತಿನಿಧಿಗಳು ಅಧಿಕಾರ ವಹಿಸಿದ ಕೂಡಲೆ ಜನತೆಯ ಬೇಡಿಕೆಗಳು ಹೇಗೆ ಒಂದೊಂದಾಗಿ ಪೂರಯಿಸಲ್ಪಡುತಿರುವವೆಂಬುದು ಅನುಭವದ ಮಾತಾಗಿದೆ. ಕನ್ನಡಿಗರು ಕನ್ನಡ ಬಾನುಲಿಗಾಗಿ ಎಂದಿನಿಂದಲೂ ಪ್ರಯತ್ನಿಸುತಿರುವರು. ಪಕ್ಕಳಿಗಾಗಿಯೆಂದು ಕೆಲ ಭಾಷಣಗಳನ್ನು ಈ ಮೊದಲು ಏರ್ಪಡಿಸಿದ್ದರು. ಆದರೆ ಹಿಂದುಸ್ತಾನದಲ್ಲಿಯ ಬೇರೆ ಅನೇಕ ಭಾಷೆಗಳಲ್ಲಿ ಸುದ್ದಿಗಳನ್ನು ಕೇಳುವ ಉಪಕ್ರಮ ನಡೆದಿದ್ದರೂ ಕನ್ನಡದಲ್ಲಿ ಮಾತ್ರ ಆ ಉಪಕ್ರಮವಿಲ್ಲ. ಕನ್ನಡಿಗರು ದೈನಿಕ ಸುದ್ದಿಗಳಿಗೆ ಇಂತು ಎರವಾಗುತಿರುವರು. ಹಳ್ಳಿಗರಿಗಾಗಿಯಾದರೂ ಆಕಾಶವಾಣಿ ಕಾರ್ಯಕ್ರಮವಿಡಿರೆಂದು ಕನ್ನಡ ಧುರೀಣರು ಹಲವಾರು ವರುಷಗಳಿಂದ ಕೂಗಿಕೊಳ್ಳುತಿದ್ದರೂ ಈ ವರೆಗೆ ಅದಕ್ಕೆ ಮನ್ನಣೆ ಸಿಕ್ಕಿರಲಿಲ್ಲ. ಕಳೆದ ವರ್ಷ ನಮ್ಮ ಪ್ರತಿನಿಧಿ ಈ ಸಂಬಂಧದಲ್ಲಿ ಮುಂಬಯಿ ಸುದ್ದೀಖಾತೆಯ ಅಧಿಕಾರಿಗಳನ್ನು ಭೆಟ್ಟಿಯಾಗಿ ಕೇಳಿಕೊಂಡಾಗ ಕಳೆದ ಸಪ್ಟಂಬರದಿಂದಲೆ ಅದನ್ನು ಸುರುಮಾಡುವುದಾಗಿ ಆಶ್ವಾಸನವಿತ್ತಿದ್ದರು. ಆದರೆ ಈ ಸಪ್ಟಂಬರ ೧ ರಿಂದ ಆ ಕಾರ್ಯಕ್ರಮ ಪ್ರಾರಂಭವಾಯಿತು. ಮುಂಬಯಿ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಅದನ್ನು ಪ್ರಾರಂಭಿಸುತ್ತ ಕನ್ನಡಿಗರ ಭವಿತವ್ಯ ಉಜ್ವಲವಾಗಿದೆಂದು ಅಭಿಪ್ರಾಯಪಟ್ಟರು. ಆದರೆ ಹಳ್ಳಿಗರಿಗಾಗಿ ಏರ್ಪಡಿಸಿದ ಈ ಕಾರ್ಯಕ್ರಮ ವಿಷಯದಿಂದ ಕನ್ನಡಿಗರೆಂದೂ ಸಂತುಷ್ಟರಾಗಲಾರರು. ಉಳಿದ ಎಲ್ಲ ಭಾಷೆಗಳಲ್ಲಿ ಈಗ ದಿನಾಲು ಸುದ್ದಿಗಳನ್ನು ಹೇಳುತಿರುವಂತೆ ಕನ್ನಡದಲ್ಲಿಯೂ ಜಾಗತಿಕ ಸುದ್ದಿಗಳನ್ನು ಹೇಳಬೇಕು. ಈಗ ಹೇಗಾದರೂ ಸುದ್ದಿಖಾತೆ ಲೋಕಪ್ರತಿನಿಧಿಗಳ ಕೈಯಲ್ಲಿ ಬಂದಿದೆ. ಕನ್ನಡಿಗರು ಹೆಚ್ಚು ಪ್ರಯತ್ನ ಮಾಡಿ ಇದನ್ನು ಸಾಧಿಸಿಕೊಳ್ಳಬೇಕೆಂದು ಬಿನ್ನವಿಸುತ್ತೇವೆ. ಸರಕಾರದವರಾದರೂ ಈ ಮುಖ್ಯ ಬೇಡಿಕೆಯನ್ನು ಮನ್ನಿಸುವರೆಂದು ನಂಬುತ್ತೇವೆ.

ಹಿಂದುಸ್ತಾನದಲ್ಲಿ ನಡುಗಾಲ ಸರಕಾರದ ಸ್ಥಾಪನೆ

ದೇಶ ವಿದೇಶಗಳಿಂದ ಅಭಿನಂದನೆ; ಮಹಾತ್ಮರ ಶುಭಾಶೀರ್ವಾದ

ರಾಷ್ಟ್ರೀಯ ಸರಕಾರದ ಧೋರಣದ ಬಗ್ಗೆ ಪಂಡಿತ ಜವಾಹರಲಾಲರ ಘೋಷಣೆ

ರಾಷ್ಟ್ರೀಯ ಸರಕಾರ

ಭಾರತೀಯರು ಅನೇಕ ದಿನಗಳಿಂದ ನಿರೀಕ್ಷಿಸುತ್ತಿದ್ದ ರಾಷ್ಟ್ರೀಯ ನಡುಗಾಲ ಸರಕಾರ ಇದೇ ಸಪ್ಟಂಬರ ೨ ನೇ ತಾರೀಕಿನ ದಿನ ಹಿಂದುಸ್ತಾನದಲ್ಲಿ ಸ್ಥಾಪಿತವಾಯಿತು. ಮುಸ್ಲಿಂ ಲೀಗಿನವರು ಇದರಲ್ಲಿ ಸೇರಲು ಒಪ್ಪಲಿಲ್ಲಾದ್ದರಿಂದ ಉಳಿದ ಮುಸಲ್ಮಾನರನ್ನು ತೆಗೆದುಕೊಂಡು ಪಂಡಿತ ಜವಾಹರಲಾಲರು ತಮ್ಮ ಮಂತ್ರಿಗಳನ್ನು ಆರಿಸಿಕೊಂಡಿದ್ದಾರೆ. ಬ್ರಿಟಿಶ ಸರಕಾರದವರು ಈ ನಡುಗಾಲ ಸರಕಾರಕ್ಕೆ ಮನ್ನಣೆ ಕೊಟ್ಟಿರುವರು. ವ್ಹಾಯಿಸರಾಯರ ಭವನದಿಂದ ಸಪ್ಟಂಬರ ೧ ಕ್ಕೆ ಈ ಪ್ರಕಟನೆ ಹೊರಟಿದೆ. ಹೊಸ ನಡುಗಾಲ ಸರಕಾರದ ಮಂತ್ರಿಗಳಿಗೆ ವ್ಹಾಯಿಸರಾಯರು ಈ ಕೆಳಗಿನಂತೆ ಖಾತೆಗಳನ್ನು ಹಂಚಿದ್ದಾರೆ.

೧ **ಪಂಡಿತ ಜವಾಹರಲಾಲ ನೆಹರು**
ವಿದೇಶ, ಕಾಮನ್‌ವೆಲ್ಥ, ಹಿತಸಂಬಂಧ

೨ **ಸರದಾರ ಬಲದೇವಸಿಂಗ**
ಸಂರಕ್ಷಣ ಖಾತೆ

೩ **ಸರದಾರ ವಲ್ಲಭಭಾಯಿ ಪಟೇಲ**
ಗೃಹಖಾತೆ, ಸುದ್ದಿ ಆಕಾಶವಾಣಿ

೪ **ಡಾ. ಜಾನ ಮಥಾಯಿ**
ಹಣಕಾಸು

೫ **ಶ್ರೀ ಅಸಫ ಅಲ್ಲಿ**
ಸಂಪರ್ಕ, (ಯುದ್ಧ ಸಾರಿಗೆ ರೇಲ್ವೆ ಕೂಡಿ

೬ **ಡಾ. ರಾಜೇಂದ್ರ ಪ್ರಸಾದ**
ಒಕ್ಕಲತನ ಮತ್ತು ಆಹಾರ

೭ **ಶ್ರೀ ಜಗಜೀವನರಾಮ**
ಕೂಲಿಕಾರ

೮ **ಸರ್ ಶಫತ ಅಹಮ್ಮದಖಾನ**
ಆರೋಗ್ಯ ಶಿಕ್ಷಣ ಮತ್ತು ಕಲೆ

೯ **ಸಯ್ಯದ ಅಲ್ಲಿ ಜಹೀರ**
ಶಾಸನ ನಿರ್ಮಾಣ ಅಂಚೆ ಮತ್ತು ವಿಮಾನ

೧೦ **ಶ್ರೀ ರಾಜಗೋಪಾಲಾಚಾರ್ಯ**
ಉದ್ಯೋಗಿಕ ಮತ್ತು ಪೂರೈಕೆ

೧೧ **ಶ್ರೀ ಶರಚ್ಚಂದ್ರ ಬೋಸ**
ಲೋಕೋಪಯೋಗಿ ಗಣಿ ವಿದ್ಯುತ್‌ಶಕ್ತಿ

೧೨ **ಶ್ರೀ ಸಿ ಎಚ್ ಭಾಭಾ**
ವಾಣಿಜ್ಯ

ಉಳಿದಿಬ್ಬರು ಮಂತ್ರಿಗಳು ನೇಮಿಸಲ್ಪಟ್ಟಾಗ ಅವರಲ್ಲೊಬ್ಬರಿಗೆ ಅಂಚೆ ವಿಮಾನ ಖಾತೆಯನು ಹಾಗು ಇನ್ನೊಬ್ಬರಿಗೆ ಸುದ್ದಿ ಆಕಾಶವಾಣಿ ಖಾತೆ ಇಲ್ಲವೆ ಯೋಜನೆ ಅಭಿವೃದ್ಧಿ ಖಾತೆಯನ್ನು ಕೊಡಲಾಗುವದೆಂದು ತಿಳಿಯುತ್ತದೆ.

ಹೊಸ ಮಂತ್ರಿಗಳ ಪರಿಚಯ

ಕಾಂಗ್ರೆಸ ವರಿಷ್ಠರು ಆರಿಸಿದ ಈ ನಡುಗಾಲ ಸರಕಾರವು ಬ್ರಿಟಿಶ ಮಂತ್ರಿತ್ರಯವು ಹಾಗು ವ್ಹಾಯಿಸರಾಯರು ತಮ್ಮ ಜೂನ ೧೬ ನೇ ತಾರೀಖಿನ ಪ್ರಕಟನೆಯಲ್ಲಿ ಕಾಣಿಸಿದ ಪ್ರಕಾರ ಒಳ್ಳೆ ಬಲಿಷ್ಠವೂ ಪ್ರಾತಿನಿಧಿಕವೂ ಆದುದು ಇರುವದು. ಅದರಲ್ಲಿ ದೇಶದ ಸಾರ್ವಜನಿಕ ಜೀವನದಲ್ಲಿ ಪ್ರಖ್ಯಾತಿ ಪಡೆದವರೂ ಬುದ್ಧಿವಂತರೂ ಆಡಳಿತೆಯ ಅನುಭವವುಳ್ಳವರೂ ವ್ಯವಹಾರ ಕುಶಲರೂ ಅರ್ಥವಿಶಾರದರೂ ಒಕ್ಕಲತನ ನಿಪುಣರೂ ಇರುವರು.

ಈ ೧೨ ಜನರಲ್ಲಿ ೮ ಜನರು ರಾಜಕೀಯ ಕಾರಣಗಳಿಗಾಗಿ ಶಿಕ್ಷೆ ಅನುಭವಿಸಿದವರಿದ್ದಾರೆ. ಕಾಂಗ್ರೆಸ್ಸಿನ ೭ ಜನರಂತೂ ಅನೇಕ ಸಾರೆ ಕಾರಾಗೃಹ ಕಂಡಿರುವರು ಸಯ್ಯದಅಲ್ಲಿ ಝಹೀರರು [illegible] ಸಭಾ ಚಳವಳಿಯಲ್ಲಿ ಸ್ವಲ್ಪಕಾಲ ಕಾರಂಗ ಕಂಡು ಬಂದಿರುವರು.

ನಮ್ಮ ಈ ಹೊಸ ಮಂತ್ರಿಗಳಲ್ಲಿ ಪಂ. ಜವಾಹರಲಾಲ ನೆಹರೂ, ಸರದಾರ ಪಟೇಲ, ಶರಚ್ಚಂದ್ರ ಬೋಸ, ಸಯ್ಯದಅಲ್ಲಿ ಝಹೀರ ಅವರು ಬ್ಯಾರಿಸ್ಟರರಿದ್ದು ಡಾ. ರಾಜೇಂದ್ರ ಪ್ರಸಾದ, ರಾಜಗೋಪಾಲಾರ್ಯ ಹಾಗು ಡಾ. ಜಾನ ಮಥಾಯಿ ಅವರು ಕಾಯದೆ ಪದವೀಧರರಿರುವರು ಆದರೆ ಇವರಲ್ಲಿ ಅನೇಕರು ೧೯೨೦ ರಲ್ಲಿಯೆ ಅಸಹಕಾರ ಮೂಲಕ ವಕೀಲಿಗೆ ಶರಣು ಹೊಡೆದಿರುವರು.

ಈ ಮಂತ್ರಿಗಳಲ್ಲಿ ಸರದಾರ ಪಟೇಲರೇ ಎಲ್ಲರಿಗಿಂತ ಹಿರಿಯರಿರುವರು. ಅವರಿಗೆ ಈಗ ೭೦ ವರ್ಷಗಳು. ಜಗಜೀವನ ರಾಮರು ಎಲ್ಲರಿಗಿಂತ ಚಿಕ್ಕವರು. ಸಿ. ಎಚ್. ಭಾಭಾ ಅವರೂ ಹೆಚ್ಚು ಕಡಿಮೆ ಜಗಜೀವನ ರಾಮರಷ್ಟೇ ವಯಸ್ಸಿನವರಿರುವರು.

ಪಂಡಿತ ಜವಾಹರಲಾಲರು ತಮ್ಮ ಅರ್ಧ ರಾಜಕೀಯ ಆಯುಷ್ಯವನ್ನು ಜೇಲಿನಲ್ಲಿ ಕಳೆದಿರು ನಾಲ್ಕು ಸಲ ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾದ್ದುದೇ ಅವರ ಲೋಕಪ್ರಿಯತೆಯನ್ನು ತೋರುತ್ತದೆ ಇವರು ಕೆಲವು ವರ್ಷ ಎ. ಆಯ. ಸಿ. ಸಿ. ಯ ಜನರಲ್ ಸೆಕ್ರೆಟರಿಗಳೂ ಆಗಿದ್ದುಕೊಂಡು ಆಡಳಿತೆಯ ತಮ್ಮ ನೈಪುಣ್ಯ ತೋರಿಸಿದರು.

ಕಾಂಗ್ರೆಸ್ಸಿನಲ್ಲಿ ಇವರು ಬಂಡುಖೋರ ವೃತ್ತಿಯವರಾಗಿದ್ದರೂ ಗಾಂಧೀಜಿ ಇಲ್ಲವೆ ಕಾಂಗ್ರೆಸ್ಸಿನ ಕಾರ್ಯಕ್ರಮದಂತೆಯೆ ನಡೆದುಕೊಳ್ಳುತ್ತ ಬಂದಿದ್ದಾರೆ. ಸಿಡಿದು ಹೋಗುವ ವಿಚಾರವನ್ನು ಅವರು ಮನಸ್ಸಿನಲ್ಲಿಯೂ ತಂದಿಲ್ಲ ಇವರು ಅಂತರರಾಷ್ಟ್ರೀಯ ಪ್ರಖ್ಯಾತಿ ಪಡೆದವರಿದ್ದು ಪರರಾಷ್ಟ್ರ ಹಾಗು ಕಾಮನವೆಲ್ಥ ರಿಲೇಶನ್ಸ ಖಾತೆಗಳನ್ನು ಇವರು ವಹಿಸಿದ್ದುದು ರತ್ನಕ್ಕೆ ಕುಂದಣ ಕೂಡಿಸಿದಂತಾಗಿದೆ.

ಸರದಾರ ವಲ್ಲಭಭಾಯಿಯವರು ಕಾಂಗ್ರೆಸ್ಸಿನ ಉಕ್ಕಿನ ಮನುಷ್ಯರಿದ್ದು ಬಾರ್ಡೋಲಿ ಕರ ನಿರಾಕರಣ ಚಳವಳಿಯಲ್ಲಿ ಇವರು ಅಖಿಲ ಭಾರತದ ದೃಷ್ಟಿಯನ್ನು ತಮ್ಮ ಕಡೆಗೆ ಎಳೆದುಕೊಂಡು ಜನರ ಸರದಾರರಾದರು ಅಂದಿನಿಂದ ಇವರ ಕೀರ್ತಿ ಹೆಚ್ಚೆಚ್ಚೇ ಬೆಳೆಯಹತ್ತಿದ್ದು ಕಾಂಗ್ರೆಸ ಪಾರ್ಲಮೆಂಟರಿ ಕಮೀಟಿಯ ಚೇರಮನ್ನರಾಗಿದ್ದುಕೊಂಡು ಅವರು ದೇಶದ ರಾಜಕೀಯ ಜೀವನಕ್ಕೆ ಈಗ ಮಾರ್ಗ ತೋರಿಸುತ್ತಿರುವರು. ಕರಾಚಿ ಕಾಂಗ್ರೆಸ್ಸಿನಲ್ಲಿ ಇವರ ಅಧ್ಯಕ್ಷತೆಯಲ್ಲಿಯೆ ಮೂಲಭೂತ ಹಕ್ಕುಗಳ ಸನದು ತಯಾರಿಸಲ್ಪಟ್ಟಿತು. ಇವರು ಗಾಂಧೀಜಿಯವರ ಒಳ್ಳೆ ನಂಬಿಗೆಯ ಶಿಷ್ಯರಾಗಿದ್ದು ಇತ್ತೀಚಿನ ರಾಜಕೀಯ ಮಾತುಕತೆಗಳಲ್ಲಿ ಜಿನ್ನಾರವರ ಸಮಪ್ರಾತಿನಿಧ್ಯ ಬೇಡಿಕೆಯನ್ನು ಯಶಸ್ವಿಯಾಗಿ ಪ್ರತಿಭಟಿಸಿದ ಶ್ರೇಯಸ್ಸು ಇವರಿಗೇ ಸಲ್ಲುವದು. ರಾಜಕೀಯ ಗಂಡಾಂತರ ಈ ಸಂಧಿಕಾಲದಲ್ಲಿ ಮಹತ್ವದ ಗೃಹ ಖಾತೆ ಹಾಗು ಸುದ್ದಿ ಆಕಾಶವಾಣಿ ಖಾತೆಗಳನ್ನು ಕಾಂಗ್ರೆಸ್ಸಿನ ಈ ಗಟ್ಟಿ ಮನುಷ್ಯರು ವಹಿಸಿಕೊಂಡುದು ಯಥೋಚಿತವೇ ಆಗಿದೆ.

ಡಾ. ರಾಜೇಂದ್ರ ಪ್ರಸಾದರು ಬಿಹಾರದ ಅನಭಿಷಿಕ್ತ ಅರಸರಿದ್ದು ಒಳ್ಳೆ ಸಂಘಟನ ಕುಶಲರಿರುವರು ಬಿಹಾರ ಹಾಗು ಕ್ವೆಟ್ಟಾ ಭೂಕಂಪ ಕಾಲದ ಇವರು ಮಾಡಿದ ಕಾರ್ಯವು ಸಂಸ್ಮರಣೀಯವಾಗಿದೆ ೧೯೧೭ ರಲ್ಲಿ ಚಂಪಾರಣ್ಯದಲ್ಲಿ ಇವರು ರೈತರೊಡನೆ ಸಮರಸ ಹೊಂದಿ ಮಾಡಿದ ಕಾರ್ಯದಿಂದ ಮಹಾತ್ಮರ ಮೆಚ್ಚಿಗೆ ಸಂಪಾದಿಸಿಕೊಂಡರು. ಕಾಂಗ್ರೆಸ ಅಧ್ಯಕ್ಷರಾಗಿದ್ದಾಗ ಇವರು ಜಿನ್ನಾರವರೊಡನೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಯತ್ನಿಸಿದರು. ಆಗಲೆ ಜಿನ್ನಾರವರು ದುರಾಗ್ರಹಿಗಳಿರುವರೆಂಬುದು ದೇಶಕ್ಕೆ ಮನವರಿಕೆಯಾಯಿತು. ಆಹಾರ ಹಾಗು ಒಕ್ಕಲತನ ಖಾತೆ ಇವರಿಗೆ ಬಂದಿದ್ದು. ರೈತರಲ್ಲಿ ದುಡಿದು ಅನುಭವ ಪಡೆದವರಾದ್ದರಿಂದ ರೈತರಿಗೆ ಅವರ ಕೈವಾರಿಗಳೇ ಸಿಕ್ಕಂತಾಗಿರುವದು.

ರಾಜಗೋಪಾಲಾಚಾರ್ಯರು ಶ್ರೇಷ್ಠ ಕಾಯದೆ ಪಂಡಿತರೂ ಹೆಸರಾದ ತತ್ವಜ್ಞಾನಿಗಳೂ ಆಗಿದ್ದು ಮದ್ರಾಸದ ಮುಖ್ಯ ಮಂತ್ರಿಗಳಾಗಿದ್ದಾಗ ತಮ್ಮ ಆಡಳಿತದ ಕೌಶಲ್ಯದಿಂದ ಶ್ವೇತಭವನದ ಮೆಚ್ಚಿಗೆಯನ್ನು ಪಡೆದುಕೊಂಡರು. ಅಸಹಕಾರ ಚಳವಳಿಯಲ್ಲಿ ಇವರು ಧುಮುಕಿ ಮಹಾತ್ಮರ ಬಲಗೈಯಾಗಿ ದೇಶದಲ್ಲಿ ಅಪೂರ್ವವಾದ ರಾಜಕೀಯ ಜಾಗ್ರತಿಯನ್ನು ಉಂಟುಮಾಡಿದರು ಮತ್ತು ಮಹಾತ್ಮರು ಜೇಲಿಗೆ ಹೋದಾಗ ಹರಿಜನದ ಸಂಪಾದಕರಾಗಿ ಕೆಲಸ ಮಾಡಿದರು. ಆದರೆ ಜಿನ್ನಾರವರೊಡನೆ ಒಪ್ಪಂದ ಮಾಡಿಕೊಳ್ಳಲು ಇವರು ಕಾಂಗ್ರೆಸ್ಸಿನ ಅಧಿಕೃತ ಧೋರಣದಿಂದ ಭಿನ್ನವಾದ ಧೋರಣವನ್ನು ಪ್ರತಿಪಾದಿಸಹತ್ತಿದ ಕೂಡಲೆ ಕಾಂಗ್ರೆಸ್ಸಿಗರ ಮೇಲಿನ ಇವರ ವರ್ಚಸ್ಸು ಕಡಿಮೆಯಾಗಹತ್ತಿತು. ಮತ್ತು ಕಾಂಗ್ರೆಸ್ಸಿನ ಪರಲನ್ನು ಸ್ವಲ್ಪ ಕಾಲ ಅವರು ಹರಿದುಕೊಳ್ಳಬೇಕಾಯಿತು. ಈಗ ಅವರು ಪುನಃ ಕಾಂಗ್ರೆಸ್ಸಿನಲ್ಲಿ ತಿರುಗಿ ಬಂದು ನಡುಗಾಲ ಸರಕಾರದಲ್ಲಿ ಪೂರೈಕೆ ಹಾಗು ಉದ್ಯೋಗ ಖಾತೆಗಳನ್ನು ವಹಿಸಿಕೊಂಡಿರುವರು.

ಶರಚ್ಚಂದ್ರ ಬೋಸ ಹಾಗು ಅಸಫ ಅಲ್ಲಿಯವರು ಅನುಕ್ರಮವಾಗಿ ಕೇಂದ್ರ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಧುರೀಣ ಹಾಗು ಉಪಧುರೀಣರಿದ್ದು ಕಟ್ಟಾ ಕಾಂಗ್ರೆಸ ವಾದಿಗಳೂ ಸಾರ್ವಜನಿಕ ಕಾರ್ಯದಲ್ಲಿ ನುರಿತವರೂ ಇರುವರು. ಇವರಿಗೆ ಅನುಕ್ರಮವಾಗಿ ಲೋಕೋಪಯೋಗಿ ಖಾತೆ, ಸಂಪರ್ಕ ಖಾತೆ (ಯುದ್ಧ ಸಾರಿಗೆ ಹಾಗು ರೇಲ್ವೆ ಕೊಡಲ್ಪಟ್ಟಿವೆ.

ಡಾ. ಜಾನ ಮಥಾಯಿಯವರು (ಕ್ರಿಶ್ಚಿಯನ್) ಸಾರ್ವಜನಿಕ ಜೀವನದಲ್ಲಿ ಹೊಸಬರಾಗಿದ್ದರೂ ಆಡಳಿತೆಗೇನೂ ಹೊಸಬರಲ್ಲ. ಇವರು ವಾಣಿಜ್ಯ ಹಾಗು ಉದ್ದಿಮೆ ವಿಷಯಗಳಲ್ಲಿ ಕುಶಲರಿದ್ದು ಟ್ಯಾರಿಫ ಬೋರ್ಡಿನ ಅಧ್ಯಕ್ಷರೂ ಕಮರ್ಶಿಯಲ್ ಇಂಟಲಿಜನ್ಸ ಡಾಯರೆಕ್ಟರ ಜನರಲ್‌ರೂ ಆಗಿದ್ದರು. ಹಣಕಾಸಿನ ಖಾತೆಯು ಇವರಿಗೆ ಕೊಡಲ್ಪಟ್ಟದ್ದು ಯೋಗ್ಯವೇ ಆಗಿದೆ.

ಸರದಾರ ಬಲದೇವಸಿಂಗರು (ಸೀಖ) ಮೊದಲು ಕಾಂಗ್ರೆಸದಲ್ಲಿದ್ದವರೇ ಇರುವರು. ಸೀಖ ಪಾಂಥಿಕ ಮಂಡಲದವರು ನಡುಗಾಲ ಸರಕಾರದಲ್ಲಿ ಇವರನ್ನು ತಮ್ಮ ಪ್ರತಿನಿಧಿಗಳನ್ನಾಗಿ ಆರಿಸಿದ್ದು, ಪಂಜಾಬದಲ್ಲಿ ಇವರು ಮಂತ್ರಿಗಳಾಗಿದ್ದುದರಿಂದ ತಮ್ಮ ಅನುಭವದ ಲಾಭವನ್ನು ಹಿಂದುಸ್ತಾನಕ್ಕೆ ಮಾಡಿಕೊಡುವರೆಂಬಲ್ಲಿ ಸಂದೇಹವಿಲ್ಲ. ಸೀಖರಿಗೆ ತಕ್ಕುದಾದ ಸಂರಕ್ಷಣೆ ಖಾತೆ ಇವರಿಗೆ ಕೊಡಲಾಗಿದೆ.

ಜಗಜೀವನರಾಮರು ಬಿಹಾರದ ಹರಿಜನ ಧುರೀಣರಿದ್ದು ಬಿಹಾರ ಕಾಂಗ್ರೆಸ ಕಮೀಟಿಯಲ್ಲಿ ಅಧಿಕಾರಿಗಳೂ ಪಾರ್ಲಮೆಂಟರಿ ಸೆಕ್ರೆಟರಿಗಳೂ ಆಗಿದ್ದುಕೊಂಡು ಸಾರ್ವಜನಿಕ ಆಡಳಿತೆಯ ಒಳ್ಳೆ ಜ್ಞಾನ ಪಡೆದುಕೊಂಡಿರುವರು. ಅಖಿಲ ಭಾರತ ಅಸ್ಪೃಶ್ಯ ಲೀಗಿನ ಅಧ್ಯಕ್ಷರು ಇವರಿದ್ದು ಕಳೆದ ಚುನಾವಣೆಯಲ್ಲಿ ಎಲ್ಲರಿಗಿಂತ ಹೆಚ್ಚು ಮತ ಪಡೆದು ಇವರು ಆರಿಸಿ ಬಂದಿರುವರು ಇವರಿಗೆ ಕೂಲಿಕಾರ ಖಾತೆ ದೊರೆತಿದೆ.

ಸರ್ ಶಫತ ಅಹಮ್ಮದಖಾನರು ಸರ್ವಪಕ್ಷೀಯ ಮುಸಲ್ಮಾನ ಪರಿಷತ್ತಿನ ಓರ್ವ ಸಂಸ್ಥಾಪಕರು ಇರುವರಲ್ಲದೆ ದುಂಡುಮೇಜಿನ ಪರಿಷತ್ತಿಗೆ ಮುಸಲ್ಮಾನ ಪ್ರತಿನಿಧಿಗಳಾಗಿ ಹೋಗಿದ್ದರು. ಇದಲ್ಲದೆ ಇವರು ದಕ್ಷಿಣ ಆಫ್ರಿಕೆಯಲ್ಲಿ ಹಿಂದುಸ್ತಾನದ ಹಾಯಕಮೀಶನರರು ಆಗಿದ್ದರು. ಕಾಂಗ್ರೆಸ್ಸಿನ ಆರ್ಥಿಕ ಕಾರ್ಯಕ್ರಮದಲ್ಲಿ ಇವರು ಬಲವಾದ ವಿಶ್ವಾಸವುಳ್ಳವರಾಗಿದ್ದಾರೆ. ಲೀಗಿಗೆ ರಾಜೀನಾಮೆ ಕೊಟ್ಟು ಇವರು ಮಂತ್ರಿಮಂಡಳದಲ್ಲಿ ಸೇರಿದ್ದರಿಂದ ತಲೆತಿರುಕನೊಬ್ಬನಿಂದ ಇರಿಯಲ್ಪಟ್ಟು ಈಗ ಆಸ್ಪತ್ರೆಯಲ್ಲಿ ಗುಣಮುಖ ಹೊಂದುತ್ತಿದ್ದಾರೆ. ಆರೋಗ್ಯ, ಶಿಕ್ಷಣ, ಕಲೆ ಖಾತೆಗಳು ಇವರ ಕಡೆಗೆ ಬಂದಿವೆ.

ಸಯ್ಯದಅಲ್ಲಿ ಝಹೀರರು ಸರ್ ವಜೀರ ಹುಸೇನರ ಚಿರಂಜೀವರಾಗಿದ್ದು ಸರ್ವಪಕ್ಷೀಯ ಶಿಯಾ ಪರಿಷತ್ತಿನ ಅಧ್ಯಕ್ಷರಿರುವರು. ಅವರ ಬಂಧುಗಳಲ್ಲಿ ಒಬ್ಬರು ಆಯ. ಸಿ. ಎಸ್. ರು, ಇನ್ನೊಬ್ಬರು ಕಾಂಗ್ರೆಸ್ಸಿಗರು, ಮತ್ತೊಬ್ಬರು ಕಮ್ಯುನಿಸ್ಟರು ಇರುವರು ಅಯೋಧ್ಯಾ ಚೀಫ ಕೋರ್ಟಿನಲ್ಲಿ ಇವರು ವಕೀಲಿ ಪಾಂಡಿತ್ಯದಿಂದ ಕೀರ್ತಿ ಸಂಪಾದಿಸಿದ್ದಾರೆ. ಶಾಸನ ನಿರ್ಮಾಣ, ಅಂಚೆ ಹಾಗು ತಂತಿ ಖಾತೆ ಇವರಿಗೆ ಸಿಕ್ಕಿವೆ.

ಸಿ. ಎಚ್. ಭಾಭಾರವರು ಸಾರ್ವಜನಿಕ ಜೀವನದಲ್ಲಿ ಈ ವರೆಗೆ ಮುಂದೆ ಬಂದಿರದಿದ್ದರೂ ವಾಣಿಜ್ಯದ ವ್ಯವಹಾರಗಳಲ್ಲಿ ಕುಶಲರಾಗಿರುವರು. ಇವರು ಮುಂಬಯಿಯಲ್ಲಿ ಅನೇಕ ಸಂಸ್ಥೆಗಳ ಡಾಯರೆಕ್ಟರರಾಗಿದ್ದುಕೊಂಡು ಯಶಸ್ವಿ ಕಾರ್ಯನಿರ್ವಾಹಕರೆಂಬ ಮೆಚ್ಚಿಗೆ ಪಡೆದಿದ್ದಾರೆ. ಇವರಿಗೆ ತಕ್ಕ ವಾಣಿಜ್ಯ ಖಾತೆಯೆ ಇವರಿಗೆ ದೊರೆತಿರುವದು.

ಮೂಲದಲ್ಲಿಯೇ ಕೊಳೆತು ಹೋದ ಆಡಳಿತೆಯನ್ನು ಪಂಡಿತ ನೆಹರೂ ಹಾಗು ಅವರ ಜೊತೆಗಾರರು ಈಗ ವಹಿಸಿದ್ದು ಧೈರ್ಯ ಹಾಗು ಪ್ರಾಂಜಲತೆಯಿಂದ ಅವರು ಮುಂದೆ ಸಾಗಿದಲ್ಲಿ ಅದೇ ರಾಷ್ಟ್ರೀಯ ಹಿತದ ಸಾಧನವಾಗಿ ಪರಿಣಮಿಸಬಹುದು. ಕಾರ್ಯವು ದೊಡ್ಡದಿದೆ. ಆದರೆ ಅದನ್ನು ವಹಿಸಿಕೊಂಡವರೂ ದೊಡ್ಡವರೇ ಇರುವರು.

ಪಂಡಿತ ಜವಾಹರಲಾಲರ ಘೋಷಣೆ

ನಡುಗಾಲ ಸರಕಾರದ ಧುರೀಣರಾದ ಪಂಡಿತ ಜವಾಹರಲಾಲ ನೆಹರು ಇವರು ಅಧಿಕಾರ ಸೂತ್ರ ವಹಿಸಿಕೊಂಡ ದಿನ ಸಾಯಂಕಾಲ ಸುದ್ದಿಗಾರ ಸಭೆಯಲ್ಲಿ ಮಾತಾಡುತ್ತ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಂಪಾದಿಸುವುದೆ ಮುಖ್ಯ ಗುರಿಯೆಂದು ಹೇಳಿದರು. ಆಯಾ ಮಂತ್ರಿಗಳು ತಮ್ಮ ತಮ್ಮ ಖಾತೆಗಳ ವಿಷಯಗಳನ್ನು ವಿಚಾರಿಸುವದಲ್ಲದೆ ಎಲ್ಲರೂ ಸುಸಂಬದ್ಧ ಒಕ್ಕಟ್ಟಿನಿಂದ ಮಹತ್ವದ ಎಲ್ಲ ವಿಷಯಗಳು ವಿಚಾರ ಮಾಡಿ ನಿರ್ಣಯಕ್ಕೆ ಬರುವುದಾಗಿ ಅವರು ಸಾರಿದರು. ವಿದೇಶೀಯರೀಗ ಹಿಂದುಸ್ತಾನವನ್ನು ಬಿಟ್ಟು ಹೋಗುವ ಪ್ರಸಂಗ ಬಂದಿದ್ದರೂ ಅವರು ಈ ದೇಶವನ್ನು ಪೂರ್ಣ ತೆರವು ಮಾಡಬೇಕಾಗಿಲ್ಲ. ಅಧಿಕಾರವನ್ನಷ್ಟು ಬಿಟ್ಟುಗೊಟ್ಟರೆ ಸಾಕೆಂದು ಜವಾಹರರು ಹೇಳಿದರು.

ಇನ್ನು ಮೇಲೆ ಬಿರುದಾವಲಿಗಳನ್ನು ಕೊಟ್ಟು ಜನತೆಯನ್ನು ಗೌರವಿಸುವುದನ್ನು ನಿಲ್ಲಿಸಲಾಗುವದು. ಸಾಹಿತ್ಯದಲ್ಲಿ ವೇಲ್ಮೆ ಇಲ್ಲವೆ ವ್ಯವಸಾಯಿಕ ಕೌಶಲ್ಯಗಳಿಗೆ ಸಂಬಂಧಿಸಿದ ಬಿರುದುಗಳಿಗೆ ಆಕ್ಷೇಪಣೆಯಿಲ್ಲ. ಬಿರುದಾವಲಿಗಳ ಈ ಪದ್ಧತಿ ೨೦ ನೇ ಶತಮಾನದಲ್ಲಿ ಸರಿಹೋಗದು.

ನಮಗೀಗ ವ್ಯವಹಾರಿಕ ದೃಷ್ಟಿ ಬೇಕು. ನಮ್ಮ ಮುಖ್ಯ ಗುರಿ ಸ್ವಾತಂತ್ರ್ಯ ಆದರೂ ೪೦ ಕೋಟಿ ಹಿಂದೀಯರಿಗೆ ತಿನ್ನಲು ಆಹಾರ ಹೊದೆಯಲು ಬಟ್ಟೆ ವಾಸಿಸಲು ಮನೆ ಶಿಕ್ಷಣ ಮೊದಲಾದ ಅನುಕೂಲತೆಗಳನ್ನು ಒದಗಿಸಿ ಕೊಡಲು ಶಕ್ತಿಮೀರಿ ಪ್ರಯತ್ನಿಸುವುದಾಗಿ ಪಂಡಿತರು ಸಾರಿದರು. ಒಮ್ಮನಸಿನಿಂದ ಕೆಲಸ ಮಾಡಿದ ನಿರ್ದಿಷ್ಟ ಅವಧಿಯಲ್ಲಿ ಇವನ್ನು ಸಾಧಿಸಬಹುದು.

ಪ್ರತಿಯೊಬ್ಬ ಹಿಂದೀಯನೂ ನಮ್ಮೊಡನೆ ಸಹಕರಿಸಬೇಕಾಗಿದೆ. ನಾವೆಲ್ಲ ಕೊನೆಯ ವರೆಗೆ ಹಿಂದುಸ್ತಾನದಲ್ಲಿಯೆ ಇರತಕ್ಕವರು. ನಮ್ಮೊಳಗೆ ಎಷ್ಟೇ ವೈಮನಸ್ಸು ಭಿನ್ನಾಭಿಪ್ರಾಯಗಳಿರಲಿ ನಾವೆಲ್ಲ ಒಟ್ಟುಗೂಡಿ ಪರಸ್ಪರ ಸಹಕಾರದಿಂದ ನಡೆದುಕೊಂಡು ಹೋಗಬೇಕಾಗಿದೆ. ಈ ಸಹಕಾರವನ್ನು ಸಾಧಿಸದೆ ಗತ್ಯಂತರವಿಲ್ಲ. ಜಗತ್ತಿನೊಡನೆ ನಾವು ನಿಕಟ ಸಂಬಂಧವನ್ನಿಟ್ಟುಕೊಳ್ಳುತ್ತೇವೆ. ಪತ್ರಿಕೆಗಳೊಡನೆ ನಾವು ಹೆಚ್ಚು ಸಂಬಂಧ ಇವಕ್ಕಾಗಿಯೆ ಇಟ್ಟುಕೊಳ್ಳುವೆವು. ಹೊಸದಿಲ್ಲಿಯ ವಾತಾವರಣ ಬದಲು ಆಗಲಿ ಆಗದಿರಲಿ ದೇಶದಲ್ಲಿಯ ಉಳಿದ ಹಳ್ಳಿ ಪಟ್ಟಣಗಳ ಕಾರಖಾನೆ ಹಾಗೂ ಪೇಟೆ ಸ್ಥಳಗಳ ಕಡೆಗೆ ನಾವು ವಿಶೇಷ ಲಕ್ಷ ಕೊಡಬೇಕಾಗಿದೆ. ಜನತಾ ಸರಕಾರ ಜನತೆಯಂತೆ ನಡೆಯಬೇಕು ಎಂದು ಮುಕ್ತಾಯದಲ್ಲಿ ಹೇಳಿದರು.

ಮಹಾತ್ಮರ ಶುಭಾಶೀರ್ವಾದ

ಮಹಾತ್ಮಾ ಗಾಂಧಿಯವರು ಈ ಪ್ರಸಂಗದಲ್ಲಿ ಪಂಡಿತ ನೆಹರುರವರಿಗೆ ಶುಭಾಶೀರ್ವಾದಗಳನ್ನು

—೧೩ನೇ ಪುಟಕ್ಕೆ

ಕಾಳಗದ ಕಳ

ಪ್ಯಾರೀಸಿನಲ್ಲಿ ಸೇರಿರುವ ಶಾಂತಿ ಪರಿಷತ್ತು ರಾಷ್ಟ್ರಗಳ ಕಾಳಗದ ಕಳನಾಗಿ ರೂಪಿಸತೊಡಗಿದೆ. ನಿಜ, ಹಿಂದಿನ ಶತ್ರು ರಾಷ್ಟ್ರಗಳ ಮೇಲೆ ಹೊರಿಸಬೇಕಾದ ಶಾಂತಿ ಕರಾರುಗಳ ವಿಷಯದಲ್ಲಿ ಕೆಲಮಟ್ಟಿನ ಪ್ರಗತಿಯಾಗಿದೆ. ರುಮೇನಿಯಾ, ಫಿನ್ಲಂಡ್, ಇಟಲಿ ಒಪ್ಪಂದಗಳ ಕರಾರುಗಳನ್ನು ಕಲಮು ಕಲಮಾಗಿ ಓದಿ ಮಹಾಸಭೆ ಪಾಸು ಮಾಡುತ್ತಲೂ ಇದೆ. ಆದರೆ ಸಿಟ್ಟುಸಿಟ್ಟಿಗೂ ಆಟ್ಟು, ವಾಗ್ಯುದ್ಧ- ಎಷ್ಟೋ ವೇಳೆ ಅಮರ್ಯಾದಸ, ಅಸಭ್ಯ ರೀತಿಯಲ್ಲಿ— ನಡೆಯುತಿವೆ. ಪ್ರತಿ ಕಲಮಿನ ಮೇಲೂ ಹಲವಾರು ತಿದ್ದುಪಡಿಗಳನ್ನು ಮಂಡಿಸಲಾಗುತಿದೆ. ಈ ತಿದ್ದುಪಡಿಗಳ ಮುಖ್ಯವಾಗಿ ರಶಿಯಾದ ವಿರುದ್ಧ ಗುರಿಯಲ್ಪಟ್ಟವುಗಳು. ಇದರಿಂದ ಅನವಶ್ಯಕ ಚರ್ಚೆ ಬೆಳೆದು ಪರಿಷತ್ತಿನ ಹೊತ್ತಿನ ಅಪವ್ಯಯವಾಗುತ್ತ ಇದೆ ಹೀಗೆಂದು ರಶಿಯನ್ ವಿದೇಶ ಖಾತೆಯ ವಿಶಿಂಸ್ಕಿಯವರು ಕಳೆದ ವಾರ ನಿಷೇಧವನ್ನು ವ್ಯಕ್ತಗೊಳಿಸಿದಾಗ ಆಸ್ಟ್ರೇಲಿಯನ್ ಪ್ರತಿನಿಧಿಗೂ ಅವರಿಗೂ ಒಂದು ದೊಡ್ಡ ಕಾಳಗವೇ ಜರಗಿ ಸಭೆಯ ಕಾರ್ಯಕಲಾಪದಲ್ಲಿ ಗೊಂದಲವೆದ್ದು ಹೋಯಿತು. "ಹತ್ತು ಸಾವಿರ ಮೈಲು ದೂರದಿಂದ ಬಂದು ನಾವು ಯುರೋಪಿನ ರಣರಂಗದಲ್ಲಿ ಹೋರಾಡಿದ್ದೇವೆ. ನಾವು ಬೇಕಾದಷ್ಟು ತಿದ್ದುಪಡಿಗಳನ್ನು ಸೂಚಿಸತ್ತೇವೆ. ನಮ್ಮನ್ನು ಕೇಳುವವರು ನೀವಾರು?" ಎಂದು ಆಸ್ಟ್ರೇಲಿಯನ್ ಪ್ರತಿನಿಧಿ ಕೇಳಿದನು. ಹೆಚ್ಚಾಗಿ ಆಸ್ಟ್ರೇಲಿಯನ್ ಪ್ರತಿನಿಧಿಯೇ ಈ ಸೋವಿಯೆಟ್ ವಿರೋಧಿ ಪೀಕಲಾಟದ ನೇತೃತ್ವವನ್ನು ವಹಿಸಿದ್ದಾನೆ. ಈ ಆಸ್ಟ್ರೇಲಿಯನ್ ಪೀಕಲಾಟದಲ್ಲಿ ಬ್ರಿಟಿಶ ಸಾಮ್ರಾಜ್ಯದ ಆಪಕ್ಕಪಟ್ಟ ರಾಜ್ಯಗಳಾದ ಕೆನಡಾ, ದಕ್ಷಿಣ ಆಫ್ರಿಕೆ, ನ್ಯೂಝೀಲಂಡ ಮೊದಲಾದವುಗಳೂ ಬ್ರೇಝಿಲ (ದ. ಅಮೇರಿಕಾ)ವೂ ಪಕ್ಕವಾದ್ಯ ಬಾರಿಸುತ್ತವೆ. ಆದರೆ ಬ್ರಿಟಿಶ ಪ್ರತಿನಿಧಿ ಮಾತ್ರ ಬಹಳ ಸಂಭಾವಿತನಂತೆ ಈ ತನ್ನ ಮರಿಗಳ ಉಡಾಳತನ ತನಗೆ ಗೊತ್ತೇ ಇಲ್ಲೇನೊ ಎನ್ನುವಂತೆ ಕಿಮ್ಮನೆ ಕುಳಿತಿರುತ್ತಾನೆ. ಸೋವಿಯಟ್ಟರಿಗೆ ಇದರಿಂದ ಇನ್ನಷ್ಟು ಮನನೊಂದಿದೆ. ಶಾಂತಿ ಪರಿಷತ್ತಿನಲ್ಲುಂಟಾದ ತೊಡಕುಗಳು ಎಷ್ಟು ಜಟಿಲವಾಗಿವೆಯೆಂದರೆ ವಿದೇಶ ಮಂತ್ರಿಚತುಷ್ಟಯದ ಸಭೆ ಸೇರಿ ಪುನಃ ವಿಧ್ಯಮಾನಗಳನ್ನು ಪರಿಶೀಲಿಸಿದ ಹೊರತು ಶಾಂತಿ ಪರಿಷತ್ತಿನ ಕೆಲಸ ಮುಂದೆ ಸಾಗುವದೇ ಅಸಾಧ್ಯವೆನಿಸಿತು. ಅದಕ್ಕಾಗಿ ಮೊನ್ನೆ ಸೋಮವಾರ ವಿದೇಶ ಮಂತ್ರಿ ಸಭೆ ಸೇರಬೇಕೆಂದು ನಿಶ್ಚಯವಾಗಿತ್ತು. ಆದರೆ ಅನಿರೀಕ್ಷಿತವಾಗಿ ವಿದೇಶ ಮಂತ್ರಿ ಮೊಲಟೋವರು ಮಾಸ್ಕೋಕ್ಕೆ ತೆರಳಿಬಿಟ್ಟುದರಿಂದ ಆ ಸಭೆ ಮುಂದೆ ಬಿದ್ದಿದೆ. ಮೊಲಟೋವರ ರಶಿಯಾಗಮನ ತಮ್ಮ ಸರಕಾರದೊಡನೆ ಚರ್ಚಿಸಿ ಹೊಸ ಹಾದಿಯನ್ನು ಅವಲಂಬಿಸುವ ದೃಷ್ಟಿಯಿಂದವೋ ಅಲ್ಲವೋ ಗೊತ್ತಿಲ್ಲ.

ಗಂಟಿನೊಳಗಿನ ಗಂಟು

ಶಾಂತಿ ಪರಿಷತ್ತಿನ ತಿಕ್ಕಾಟವಿದು ನಿಜವಾಗಿ ದೊಡ್ಡ ಜಾಗತಿಕ ಜಗ್ಗಾಟದ ಒಂದು ಅಂಶ ಮಾತ್ರ. ಆಂಗ್ಲೋ-ಅಮೇರಿಕನರಿಗೂ ಸೋವಿಯಟ್ ಯೂನಿಯನ್ನಿಗೂ ನಡೆದ ವಿಶಾಲ ಸಂಘರ್ಷ ಹಲವು ಬಗೆಯಲ್ಲಿ ಅಭಿವ್ಯಕ್ತವಾಗುತ್ತದೆ. ಶಾಂತಿ ಪರಿಷತ್ತಿನಲ್ಲಿ ಬ್ರಿಟಿಶ ಸಿಂಹದ ಮರಿಗಳು ರಶಿಯನ್ ಕರಡಿಯನ್ನು ಪೀಡಿಸುತ್ತಿರುವಾಗ ಬ್ರಿಟನ್ನು ಏನೂ ಅರಿಯದವನಂತೆ ಕುಳಿತಿರಲು ಕಾರಣವಿದ್ದೆ: ಈಗ ಪರಿಷತ್ತಿನ ಮುಂದೆ ಬಂದಿರುವ ಶಾಂತಿ ಕರಾರಿನ ನಿರ್ಮಾಣದಲ್ಲಿ ಆದರ ಕೈಯೂ ಇದ್ದು ಈಗ ಸೋವಿಯೆಟ್ಟಿಗೆ ಅನನುಕೂಲವಾಗುವಂತೆ ಅದನ್ನು ತಿದ್ದುವಲ್ಲಿ ತಾನು ಮುಂದಾಳ್ತನ ವಹಿಸಿದರೆ ಚನ್ನಾಗಿರುವದಿಲ್ಲ. ಮೊಲಟೋವರಾದರೂ ಶಾಂತಿ ಪರಿಷತ್ತಿನಲ್ಲಿ ಉದ್ಭೂತವಾದ ಕಗ್ಗಂಟುಗಳ ಕಾರಣದಿಂದಲೇ ಮಾಸ್ಕೋಕ್ಕೆ ಹೋಗಿದ್ದಾರೆನ್ನಬರುವದಿಲ್ಲ. ಇಡಿ ಯುರೋಪಿನಲ್ಲಿಯೇ ರಶಿಯಾದ "ಕಬ್ಬಿಣದ ಪಡದೆ" ಯನ್ನು ಒಡೆಯಲು ಆಂಗ್ಲೋ-ಅಮೇರಿಕನ್ನರು ನಡಸಿರುವ ಸಂಚು ಮತ್ತು ಅದರ ವಿರುದ್ಧ ಸೋವಿಯಟ್ಟರು ಕೈಕೊಂಡ, ಕೈಕೊಳ್ಳಬೇಕಾದ ಕ್ರಮಗಳು ಅದಕ್ಕೆ ಕಾರಣವೆನ್ನಬೇಕು

ಅಂತರ್ ರಾಷ್ಟ್ರೀಯ

ಕೆಲವು ಸಂಜ್ಞೆಗಳು

ಡಾರ್ಡನೆಲ್ಸ ಬಂದರದ ರಕ್ಷಣೆಯಲ್ಲಿ ಪಾಲು ಕೇಳಿ ರಶಿಯನ್ನರು ತುರ್ಕಿಗೆ ರಾಯಸ ಕಳಿಸಿದಾಗಿಂದ ಅಂತರ್ ರಾಷ್ಟ್ರೀಯ ಪರಿಸ್ಥಿತಿ ದಿನ ದಿನಕ್ಕೆ ಕೆಡುತಿದೆ. ಪೂರ್ವ ಯುರೋಪಿನಲ್ಲೆಲ್ಲ ಶಾಸನವಾಗಿ ಮೆರೆಯುತಿರುವ ರಶಿಯನ್ ಪ್ರಭಾವಕ್ಕೆ ತಡೆ ಹಾಕಬೇಕೆಂದು ಆಂಗ್ಲೋ-ಅಮೇರಿಕನ್ನರು ನಿರ್ಧರಿಸಿದ್ದರು. ಅದಕ್ಕೆ ಈ ರಾಯಸವೊಂದ ಸಂಕೇತ ಕೊಟ್ಟಿತೆನ್ನಬಹುದು. ಅಂದಿನಿಂದ ಪರಮಾಣುವಿಚ್ಛೇದದ ಜ್ಞಾನದಿಂದ ಉನ್ಮತ್ತವಾದ ಅಮೇರಿಕೆಯ ಯುದ್ಧ ಖಾತೆ ತನ್ನ ಶಕ್ತಿ ಪ್ರದರ್ಶನದಿಂದ ರಶಿಯನ್ನರನ್ನು ಬೆದರಿಸತೊಡಗಿದೆ. ಅಮೇರಿಕೆಯ ಬಲಿಷ್ಠ ನೌಕೆಗಳು ಭೂಮಧ್ಯ ಸಮುದ್ರದಲ್ಲಿ ಗಸ್ತಿ ತಿರುಗುತಿವೆ. ಅದೇ ಸಮಯದಲ್ಲಿ ಅಮೇರಿಕೆ ರಶಿಯಾದ ಮರಿ ಯುಗೋಸ್ಲಾವಿಯಾದ ಕೈಲೊಂದು ಜಗಳ ಗಂಟು ಹಾಕಿಕೊಂಡಿತು. ಎರಡು ಅಮೇರಿಕನ್ "ನಿರಪಾಯಿ" ವಿಮಾನಗಳನ್ನು ಯುಗೊಸ್ಲಾವಿಯಾದ ಅಪ್ಪಣೆಯಿಲ್ಲದೆ ಅದರ ಆಕಾಶದಲ್ಲಿ ಪ್ರವೇಶಿಸಿದ್ದಕ್ಕಾಗಿ ಹೊಡೆದು ಕೆಡವಿದುದನ್ನು ದೊಡ್ಡದು ಮಾಡಿ ಯುಗೊಸ್ಲಾವಿಯಾಕ್ಕೆ ೪೮ ತಾಸಿನ "ಕೊನೆಯ ಎಚ್ಚರಿಕೆ" ಕಳಿಸಲಾಯಿತು. ಇಲ್ಲದಿದ್ದರೆ ಯುಗೊಸ್ಲಾವಿಯಾದ ವಿರುದ್ಧ ಯುಕ್ತ ರಾಷ್ಟ್ರ ಭದ್ರತಾ ಮಂಡಲದಲ್ಲಿ ದೂರಿಡುವುದಾಗಿ ಅಮೇರಿಕೆ ಹೆದರಿಸಿತು. ತತ್ಕಾಲಕ್ಕೆ ಯುಗೊಸ್ಲಾವಿಯಾ ಬಾಗಿ ಕೆಳಗುರುಳಿಸಿದ ವಿಮಾನಗಳಲ್ಲಿದ್ದವರನ್ನು ಬಿಡುಗಡೆ ಮಾಡಿತು. ಆದರೆ ತನ್ನ ಆಕಾಶದಲ್ಲಿ ಅಕಾರಣವಾಗಿ ಸುಳಿಯುವ ಕೆಲಸ ಅಮೇರಿಕನ್ ವಿಮಾನಗಳಿಗೇಕೆಂದು ಅದು ಅಮೇರಿಕನ್ ವಿದೇಶ ಖಾತೆಗೆ ದೂರಿಕೊಂಡದ್ದಕ್ಕೆ ಉತ್ತರವೇ ಇಲ್ಲ! ಯುಗೋಸ್ಲಾವಿಯಾದ ಮೇಲೆ ಪರಮಾಣು ಬಾಂಬನ್ನು ಒಗೆದು ನಾಶ ಮಾಡಿಬಿಡಬೇಕೆಂದು ಅಮೇರಿಕನ್ ಪತ್ರಿಕೆಗಳು ಉದ್ಧಟತನದಿಂದ ಬರೆಯಲು ಕೂಡ ಹಿಂಜರಿಯಲಿಲ್ಲ. ನಿಜವಾಗಿ ರೂಜವೆಲ್ಟರು ಪ್ರಾರಂಭಿಸಿದ ಸ್ನೇಹಪರ ರಶಿಯನ್ ಧೋರಣೆಯ ದೆಸೆಯನ್ನು ಬದಲಿಸಿ ಅಧ್ಯಕ್ಷ ಟ್ರೂಮನ್ನರು ಉಗ್ರ ರಶಿಯಾ-ವಿರೋಧಿ ಧೋರಣೆಯನ್ನು ಕೈಕೊಂಡಿದ್ದಾರೆಂಬಲ್ಲಿ ಸಂದೇಹವೇ ಇಲ್ಲ. ಪೋಲಂಡಿನಲ್ಲಿ ಕಮ್ಯುನಿಸ್ಟ ವಿರೋಧಿಗಳ ಮೇಲೆ ದಬ್ಬಾಳಿಕೆ ನಡೆದಿದೆಯೆಂಬ ಪ್ರಚಾರದಲ್ಲಿಯೂ ಅಮೇರಿಕೆಯ ಕೈಯಿದೆ. ಪರಮಾಣು ಬಾಂಬಿನ ಔದ್ಧತ್ಯದ ಹೊಸ ಉದಾಹರಣೆಯಾಗಿ, ಸ್ವೀಡನ್ ದೇಶ ರಶಿಯಾದೊಡನೆ ಮಾಡಿಕೊಳ್ಳಬೇಕೆಂದಿರುವ ವ್ಯಾಪಾರಿ ಒಪ್ಪಂದವನ್ನು ಅಮೇರಿಕೆ ನಿಷೇಧಿಸಿದ್ದನ್ನು ಉಲ್ಲೇಖಿಸಬಹುದು. ಈ ಎಲ್ಲದರಲ್ಲಿ ಇಂಗ್ಲಂಡು ಅಮೇರಿಕೆಗೆ ಹಿಮ್ಮೇಳ ಬಾರಿಸುತ್ತದೆ.

ರಶಿಯಾದ ಪ್ರತೀಕಾರ

ಬೆಳೆಯುತಿರುವ ರಶಿಯನ್ ಶಕ್ತಿಯಿಂದ ಬೆಚ್ಚಿದ ಆಂಗ್ಲೋ ಅಮೇರಿಕನ್ನರು ಅದರ "ಕಬ್ಬಿಣದ ಪಡದೆ" ಯನ್ನು ಒಡೆಯಲು ಪ್ರಯತ್ನಿಸುತಿರುವದರಿಂದ ಮತ್ತು ಪರಮಾಣು ಬಾಂಬಿನ ಗುಟ್ಟನ್ನು ಹೊರಗೆಡಹದಿರುವದರಿಂದ ರಶಿಯನ್ನರು ತಮ್ಮ ಕಠೋರ ಧೋರಣೆಗೆ ಇನ್ನಷ್ಟು ಬಿಗಿಯಾಗಿ ಅಂಟಿಕೊಳ್ಳುವಂತಾಗಿದೆ. ಪರಿಸ್ಥಿತಿ ಸುಧಾರಿಸದೆ ಹೋದರೆ ಮತ್ತು ಯುಕ್ತ ರಾಷ್ಟ್ರ ಸಭೆ ಜಗತ್ತಿನಲ್ಲಿ ನ್ಯಾಯವನ್ನು ರಕ್ಷಿಸಲಾರದ ಹೋದರೆ ಹೊಸ, ಭೀಕರ ಪರಮಾಣು ಬಾಂಬುಗಳನ್ನು ರಚಿಸುವದೊಂದೇ ಅಮೇರಿಕೆಗೆ ಉಳಿಯುವ ಏಕಮಾತ್ರ ಉಪಾಯ, ಎಂಬದಾಗಿ ಯುಕ್ತ ರಾಷ್ಟ್ರಗಳ ಪರಮಾಣು ಶಕ್ತಿನಿಯಂತ್ರಣ ಮಂಡಲದಲ್ಲಿ ಅಮೇರಿಕೆಯ ಪರವಾಗಿ ಹೇಳಲಾಯಿತು. ಇದು ರಶಿಯನ್ನರಲ್ಲಿ ಇನ್ನಷ್ಟು ಸಂಶಯ ಹಬ್ಬುವಂತೆ ಮಾಡುವಲ್ಲಿ ಸಂದೇಹವೇನು? ಅವರ ಪಾಡಿಗೆ ಅವರೂ ಹೊಸ ಹೊಸ ಯುದ್ಧಸಾಮುಗ್ರಿಗಳನ್ನು ಸಿದ್ಧಗೊಳಿಸುತಿರುವರು. ಕೆಲವು "ವಿ" ಆಕಾಶ ಬಾಣಗಳು ಹಾರುತಿರುವದು ಸ್ವೀಡನ್ನಿನಲ್ಲಿ ಕಾಣಸಿಕ್ಕಿದೆಯೆಂದೂ ಅವು ರಶಿಯನ್ ಪ್ರಯೋಗಗಳೆಂದೂ ಹೇಳಲಾಗಿದೆ. ಇದಲ್ಲದೆ ಪೂರ್ವ ಜರ್ಮನಿಯ ಕಾರಖಾನೆಗಳಲ್ಲಿ ರಶಿಯನ್ನರು ಭರದಿಂದ ಯುದ್ಧ ಸಾಮುಗ್ರಿಗಳನ್ನು ಸಿದ್ಧಗೊಳಿಸಿ ಸಂಗ್ರಹಿಸುತ್ತಿದ್ದಾರೆಂದು ಹೇಳಲಾಗಿದೆ. ಬಾಲ್ಕನ್ ರಾಷ್ಟ್ರಗಳಲ್ಲಿ ಏರುತಿರುವ ರಶಿಯನ್ ಪ್ರಭಾವಕ್ಕೆ ತಡೆಹಾಕಲು ಆಂಗ್ಲೋ-ಅಮೇರಿಕನ್ನರು ಪ್ರಯತ್ನಿಸುತಿದ್ದಂತೆ ಭೂಮಧ್ಯ ಸಮುದ್ರದಲ್ಲಿ ಕಾಲೂರುವ ರಶಿಯನ್ ಮಹತ್ವಾಕಾಂಕ್ಷೆ ಹೆಚ್ಚೆಚ್ಚು ಬಲವಾಗಿದೆ. ಗ್ರೀಸು ಈಗ ಈ ಕಾದಾಟದ ರಂಗವಾಗಿ ಪರಿಣಮಿಸಿದೆ. ಪ್ರತಿಗಾಮಿ ಸರಕಾರವನ್ನು ಸ್ಥಾಪಿಸಿ, ರಶಿಯನ್ ಪಕ್ಷಪಾತಿ ಪುರೋಗಾಮಿಗಳನ್ನು ಬಗ್ಗು ಬಡಿಯಲು ಬ್ರಿಟಿಶರು ತಮ್ಮ ಸೈನ್ಯಬಲವನ್ನು ರಾಜಪಕ್ಷಪಾತಿಗಳಿಗೆ ಕೊಟ್ಟುದರಿಂದಲೆ ಮೊನ್ನೆ ಸೆಪ್ಟೆಂಬರ ೧ ಕ್ಕೆ ನಡೆದ ಮತಗಣನೆಯಲ್ಲಿ ಅರಸೊತ್ತಿಗೆಯ ವಿರೋಧಿಗಳು ಸೋತು ರಾಜಸತ್ತೆಗೆ ಜನಮತ ದೊರೆತಂತಾಗಿದೆ. ಗ್ರೀಸದಲ್ಲಿ ಬ್ರಿಟಿಶ ಸೈನ್ಯವಿರುವದರಿಂದಲೇ ರಾಜಪಕ್ಷಪಾತಿಗಳಿಗೆ ಜಯವಾಯಿತೆಂಬಲ್ಲಿ ಸಂದೇಹವಿಲ್ಲ. ರಾಜ ವಿರೋಧಿಗಳು ಎಲ್ಲಾದರೂ ಅಧಿಕಾರಕ್ಕೆ ಬಂದರೆಂದರೆ ಗ್ರೀಸಕ್ಕೂ ರಶಿಯನ್ ಪ್ರಭಾವ ಹಬ್ಬುವದು ನಿಶ್ಚಯ.ವೆಂದು ಮನಗಂಡ ಬ್ರಿಟಿಶರು ಅದನ್ನು ತಡೆಯುವ ಸಲುವಾಗಿ ಗ್ರೀಕ ಜನರನ್ನು ಫ್ಯಾಸಿಸ್ಟ ಪಕ್ಷಪಾತಿಗಳ ಕೈಗೊಪ್ಪಿಸಲು ನೆರವಾದರು. ಗ್ರೀಕಕರಾವಳಿಯಿಂದ ಡಾರ್ಡನೆಲ್ಸಿಗೆ ಒಂದೇ ನೆಗೆತವೆಂದು ಮರೆಯಬಾರದು. ಬ್ರಿಟಿಶರು ಹೊರಟು ಹೋದರೆ ಇನ್ನಾದರೂ ರಾಜ್ಯವನ್ನು ಸಾಮ್ಯವಾದಿಗಳಿಂದ ಕಾಯ್ದುಕೊಳ್ಳುವದು ಗ್ರೀಕ ಪ್ರತಿಗಾಮಿಗಳಿಗೆ ಸಾಧ್ಯವಾಗದು ಸಂದೇಹ. ಇದನ್ನು ಮನಗಂಡ ರಶಿಯನ್ನರು ಬ್ರಿಟಿಶ ಸೈನ್ಯವನ್ನು ಗ್ರೀಸದಿಂದ ತೆಗೆಯಬೇಕೆಂದು ಚಳವಳಿ ಹೂಡಿದ್ದಾರೆ. ಅಲ್ಲದೆ ಹಿಂದಿನ ಶತ್ರುರಾಷ್ಟ್ರಗಳಲ್ಲದೆ ಇತರ ವಿದೇಶಿ ರಾಷ್ಟ್ರಗಳಲ್ಲಿ ಯಾವ ಯಾವ ರಾಜ್ಯ ತನ್ನ ಎಷ್ಟೆಷ್ಟು ಸೈನ್ಯವಿನ್ನಿಟ್ಟದೆಯೆಂದು ಯುಕ್ತ ರಾಷ್ಟ್ರ ಸಂಘಕ್ಕೆ ವರದಿ ಮಾಡಬೇಕೆಂದು ಸೂಚಿಸಿದ್ದಾರೆ. ಗ್ರೀಕ್ ಸರಕಾರದ ಜಾಗತಿಕ ಶಾಂತಿಗೆ ವಿಘಾತಕವಾಗುವ ರೀತಿಯಲ್ಲಿ ನಡೆದುಕೊಳ್ಳುತಿದೆಯೆಂದು ಯುಕ್ರೇನು ಭದ್ರತಾ ಮಂಡಲದಲ್ಲಿ ದೂರುಕೊಟ್ಟಿದೆ. ಆದರೆ ಈ ದೂರು ಕಾರ್ಯನಿಯಾಮಕ ಪಟ್ಟಿಯಲ್ಲಿ ಪ್ರವೇಶಿಸದಂತೆ ತಡೆಯಲು ಬ್ರಿಟಿಶರು ಶತಪ್ರಯತ್ನ ನಡೆಸಿರುವರು.

ಲಿಟ್ವಿನಾಫರ ನಿವೃತ್ತಿ

ಆಂಗ್ಲೋ-ಅಮೇರಿಕನ್ ಧೋರಣೆಯಿಂದ ನಿರಾಶರಾದ ರಶಿಯನ್ನರು ತಮ್ಮ ಆಂತರಿಕ ವ್ಯವಸ್ಥೆಯಲ್ಲಿಯೂ ಬದಲಾವಣೆಗಳನ್ನು ಮಾಡತೊಡಗಿದ್ದಾರೆ. ರಶಿಯಾದ ಉಪದೇಶಮಂತ್ರಿಗಳಾದ ಮ್ಯಾಕ್ಸಿಮ ಲಿಟ್ವಿನಾಫರನ್ನು ಕೆಲಸದಿಂದ ನಿವೃತ್ತಿಗೊಳಿಸಿದ್ದು ಈ ದೆಸೆಯಲ್ಲಿಟ್ಟ ಒಂದು ಹೆಜ್ಜೆ. ಲಿಟ್ವಿನಾಫರು ಆಂಗ್ಲೋ ಅಮೇರಿಕನ್ ಪಕ್ಷಪಾತಿಗಳು. ಅವರು ಹಿಂದೆ ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟಾಗಲೆಲ್ಲ ರಶಿಯನ್ ಧೋರಣೆ ಆಂಗ್ಲೋ-ಅಮೇರಿಕನ್ ವಿರೋಧಿ ದಾರಿಯನ್ನು ಹಿಡಿದಿತ್ತು. ಮತ್ತು ಅವರ ಪುನರಾಗಮನವಾದಾಗಲೆಲ್ಲ ಸೋವಿಯಟ್ ಧೋರಣೆ ಆಂಗ್ಲೋ-ಅಮೇರಿಕನ್ನರೊಡನೆ ಸ್ನೇಹ ಬೆಳೆಸತೊಡಗಿತ್ತು ಎಂಬುದು ಗಮನಾರ್ಹವಾಗಿದೆ

ಹೀಗೆ ಬಹಿರಂಗವಾಗಿ ಕುದಿಯುತ್ತಿರುವ ವೈಷಮ್ಯ ಯಾವಾಗ ಜಗತ್ತನ್ನು ಪುನಃ ಘೋರ ಯುದ್ಧದಲ್ಲಿ ತಳ್ಳುವದೋ ಹೇಳಲಾಸಲ್ಲ

ಬೆವಿನ್ನರು ಹೋಗುವರು ?

ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರು "ಅನಾರೋಗ್ಯದ ದೆಸೆಯಿಂದ" ನಿವೃತ್ತರಾಗುವರೆಂಬ ಸುದ್ದಿ ನಂಬಲರ್ಹವಾದ ಕಡೆಗಳಿಂದ ಬಂದಿವೆ. ಅವರ ವಿದೇಶ ಧೋರಣೆ ಬ್ರಿಟಿಶ ಕೂಲಿಕಾರ ಪಕ್ಷದಲ್ಲಿಯೆ ಬಹಳ ಅಸಂತುಷ್ಟಿಗೆ ಕಾರಣವಾಗಿದೆ. ಅವರು ರಶಿಯಾವನ್ನು ಬ್ರಿಟನ ಶತ್ರುಸ್ಥಾನಕ್ಕೆ ತಂದರೆಂಬ ಭಾವನೆ ಬೆಳೆಯುತಿದೆ. ಇದಲ್ಲದೆ ಅವರ ಪಾಲಿಸ್ತಾನ ಧೋರಣೆಯಿಂದಲೂ ಇಂಗ್ಲಂಡಿನ ವೈರಿಗಳ ಸಂಖ್ಯೆ ಬೆಳೆದಿದೆ. ಯಹೂದ್ಯ ಕ್ರಾಂತಿಕಾರರು ಬೆವಿನ್ನರನ್ನು ಕೊಲ್ಲುವ ಸಂಚಿಕೆ ನಡೆಸಿದ್ದಾರೆ. ಇವೆಲ್ಲ ಅವರ "ಅನಾರೋಗ್ಯ"ದ ಕಾರಣವಾಗಿದ್ದರೂ ಇರಬಹುದು. ಬೆವಿನ್ನರೊಡನೆ ಭಾರತ ಮಂತ್ರಿ ಪೆಥಿಕ ಲಾರೆನ್ಸರೂ ನಿವೃತ್ತರಾಗುವರಂತೆ. ವಿದೇಶ ಮಂತ್ರಿ ಪಟ್ಟಕ್ಕೆ ಆರ್ಥರ ಗ್ರೀನವುಡ್, ಹರ್ಬರ್ಟ ಮಾರಿಸನ್, ಆರ್ಥಿಕ ಮಂತ್ರಿ ಹ್ಯೂ ಡಾಲ್ಟನ್ ಇವರು ಮೂವರು ಪ್ರಯತ್ನಿಸುತ್ತಿದ್ದು ಮಾರಿಸನ್ನರಿಗೇ ಅದು ದೊರೆಯಬಹುದು. ಕ್ರಿಪ್ಸರು ಭಾರತ ಮಂತ್ರಿಗಳಾಗಬಹುದು.

ಪ. ಲಿಸ್ತಾನ ಪರಿಷತ್ತು

ಪಾಲಿಸ್ತಾನ ಪ್ರಶ್ನೆಯನ್ನು ಬಿಡಿಸುವ ಉಪಾಯಗಳ ಯೋಜನೆಗಾಗಿ ಅರಬ ರಾಷ್ಟ್ರಗಳ ಮತ್ತು ಯಹೂದ್ಯರ ಪರಿಷತ್ತನ್ನು ನಾಳೆ ಸೋಮವಾರ ಲಂಡನ್ನಿನಲ್ಲಿ ಕರೆಯಲಾಗಿದೆ. ಈ ಪರಿಷತ್ತಿಗೆ ಬಹಳ ವಿಚಾರ ಮಾಡಿದ ನಂತರ ಇತರ ಅರಬ ರಾಷ್ಟ್ರಗಳು ಪ್ರತಿನಿಧಿಗಳನ್ನು ಕಳಿಸಲೊಪ್ಪಿದರೂ ಪಾಲಿಸ್ತಾನ ಅರಬ ಸಮಿತಿ ಮಾತ್ರ ಅದನ್ನು ಬಹಿಷ್ಕರಿಸಿದೆ. ಯುದ್ಧ ಕಾಲದಲ್ಲಿ ಜರ್ಮನಿಗೆ ಹೋಗಿ ಹಿಟ್ಲರನೊಡನೆ ಸಹಕರಿಸಿ ಯುದ್ಧಾಪರಾಧಿಗಳ ಯಾದಿಯಲ್ಲಿ ಸೇರಿ ಫ್ರಾನ್ಸಿನಿಂದ ಪಾರಾಗಿ ಈಜಿಪ್ತದಲ್ಲಿ ಆಶ್ರಯ ಪಡೆದಿರುವ ಪಾಲಿಸ್ತಾನದ ಮುಫ್ತಿಯೇ ತಮ್ಮ ಶಿಷ್ಟಮಂಡಲದ ನಾಯಕನಾಗಬೇಕೆಂದು ಪಾಲಿಸ್ತಾನದ ಅರಬರ ಹಟ. ಈ "ಶತ್ರುಪಕ್ಷಪಾತಿ"ಯ ಮುಂದಾಳ್ತನಕ್ಕೆ ಬ್ರಿಟಿಶರ ಸಮ್ಮತಿಯಿಲ್ಲ. ಈ ಪ್ರಕಾರ ಯಾರ ಪ್ರಶ್ನೆ ಚರ್ಚಿಸಲ್ಪಡುವದೊ ಅವರೇ ಪರಿಷತ್ತಿನಿಂದ ಹೊರಗುಳಿಯುವರು. ಯಹೂದ್ಯರಾದರೂ ಪರಿಷತ್ತಿಗೆ ಬಹಿಷ್ಕಾರ ಹಾಕಿದ್ದಾರೆ. ಹೀಗೆ ಪರಿಷತ್ತಿನ ಸಾಫಲ್ಯದ ಬಗ್ಗೆ ಆಶೆ ಉಳಿದಿಲ್ಲ.

ಮರಣ ದಂಡನೆಗೆ ಗುರಿಯಾಗಿದ್ದ ೧೮ ಜನ ಯಹೂದ್ಯ ಕ್ರಾಂತಿಕಾರರ ಶಿಕ್ಷೆಯನ್ನು ಆಮರಣ ಶಿಕ್ಷೆಗೆ ಇಳಿಸಲಾಗಿದೆ.

ಕೊನೆಯ ಪ್ರಯತ್ನ

ಬ್ರಿಟಿಶರು ಇಂಡೊನೇಶಿಯಾದಿಂದ ಈ ವರ್ಷದ ಅಂತ್ಯದೊಳಗೆ ಹೊರಟು ಹೋಗುವರೆಂದು ಸಂಬಲಾಗಿದೆ. ಅದಕ್ಕೆ ಮೊದಲು ಇಂಡೊನೇಶಿಯನ್ ಪ್ರಜಾರಾಜ್ಯಕ್ಕೂ ಹಾಲಂಡಿನ ಸಾಮ್ರಾಜ್ಯವಾದಿಗಳಿಗೂ ಒಪ್ಪಂದವಾಗುವಂತೆ ಕೊನೆಯ ಪ್ರಯತ್ನವನ್ನು ನಡೆಸಲು ಲಾರ್ಡ ಕಿಲರೀನರು ಜಾವಾಕ್ಕೆ ಹೋಗುವರೆಂದು ತಿಳಿಯುತ್ತದೆ.

ಗ್ರೀಕ ಅರಸನ ಪುನರಾಗಮನ

ಗ್ರೀಸಕ್ಕೆ ಅರಸೊತ್ತಿಗೆ ಬೇಕೇ ಬೇಡವೆ ಎಂಬುದರ ನಿರ್ಧಾರಕ್ಕಾಗಿ ಗ್ರೀಕ ಜನಾಭಿಪ್ರಾಯ ಸಂಗ್ರಹ ಮೊನ್ನೆ ಸೆಪ್ಟೆಂಬರ ೧ಕ್ಕೆ ನಡೆಯಿತು. ಸದ್ಯಕ್ಕಂತೂ ಗ್ರೀಕ ಅರಸು ಜಾರ್ಜನು ಇಟಲಿಯ ಅಂಬರ್ಟೋರಿಗಿಂತ ಸುದೈವಿಯೆಂದು ತೋರುತ್ತದೆ. ಅರಸೊತ್ತಿಗೆ ಬೇಕೆಂದು ೧೩೯೪೬೭೭ ಜನರೂ ವಿರುದ್ಧವಾಗಿ ೧೦೧೯೪೮೧ ಜನರೂ ಮತವಿತ್ತುದರಿಂದ ಅರಸು (ಈಗ ಇಂಗ್ಲಂಡಿನಲ್ಲಿರುವ) ಮರಳುವನು. ಆದರೆ ಈ ಮತಗಣನೆ ಅರಸು ಪಕ್ಷಪಾತಿಯಾದ ಸರಕಾರ ಅನೇಕ ಕುಯುಕ್ತಿಗಳನ್ನು ಮಾಡಿತೆಂದೂ ಅದರಿಂದ ಈ ಮತಗಣನೆಯನ್ನು ಅಕ್ರಮವೆಂದು ಸಾರಬೇಕೆಂದೂ "ಈಮ್" ಸಾಮ್ಯವಾದಿ ಪಕ್ಷ ಪರಿಷ್ಕ ನ್ಯಾಯಸ್ಥಾನಕ್ಕೆ ಅರ್ಜಿ ಮಾಡಿಕೊಳ್ಳಲಿದೆ.

ಜಪಾನದ ರಾಜಕಾರಣ

ಜಪಾನದ ರಾಜಕಾರಣ ಕವಲುದಾರಿಯಲ್ಲಿ ನಿಂತಿದೆಯೆಂದು ಜನರಲ್ ಮೆಕಾರ್ಥರರು ಹೇಳುತ್ತಾರೆ. ಫ್ಯಾಸಿಸ್ಟ ಸರ್ವಾಧಿಕಾರಕ್ಕೆ ಒಳಗಾಗಿದ್ದ ಜಪಾನಿ ಜನರು ಕಮ್ಯುನಿಸ್ಟ ಸರ್ವಾಧಿಕಾರವನ್ನು ಮೆಚ್ಚುವ ಸಂಭವವಿದೆಯೆಂಬ ಭಯವನ್ನು ಅವರು ವ್ಯಕ್ತಗೊಳಿಸಿದ್ದಾರೆ. ಕಳೆದ ಚುನಾವಣೆಗಳಲ್ಲಿ ಕಮ್ಯುನಿಸ್ಟರಿಗೆ ಬಹಳ ಸ್ಥಾನಗಳು ದೊರೆಕಿದ್ದರೂ ಮೆಕಾರ್ಥರರು ಈ ಭೀತಿಯಿಂದ ನರಳುತಿದ್ದಾರೆ. ಇದನ್ನು ನಿವಾರಿಸುವ ಸಲುವಾಗಿ ಗ್ರೀಸದಲ್ಲಿ ಮಾಡಿದಂತೆ ಅಮೇರಿಕನ್ನರು ಪ್ರತಿಗಾಮಿಗಳಿಗೆ ಬೆಂಬಲ ಕೊಡುವ ಧೋರಣ ವಹಿಸಿರುವರು.

ಭಾರತಕ್ಕೆ ಸ್ವಾತಂತ್ರ್ಯದಂತೆ ಕರ್ನಾಟಕಕ್ಕೆ ಸ್ವಾಯತ್ತತೆ

(೨ನೇ ಪುಟದಿಂದ ಮುಂದರಿದುದು)

ಬೇಕೆಂದು ಏಕೀಕರಣ ಪರಿಷತ್ತಿನಲ್ಲಾದ ಹಿಂದಿ ಯದವರೆಗಿನ ಘಟನೆಗಳ ಸಿಂಹಾವಲೋಕನ ಮಾಡಿದರು.

ಸುಲಭ ಸಾಧ್ಯ---ಆದರೂ ಪ್ರಯತ್ನ ಬೇಕು

ಪ್ರಜಾಪ್ರಭುತ್ವದ ಯಶಸ್ಸು ಬಹುಮಟ್ಟಿಗೆ ಭಾಷಾನುಗುಣ ಪ್ರಾಂತರಚನೆಯನ್ನೆ ಅವಲಂಬಿಸಿದೆ ಎಂಬುದು ನಿರ್ವಿವಾದವಾಗಿದೆ. ಪ್ರಭುತ್ವದ ಪ್ರತಿಯೊಂದು ಕಾರ್ಯದಲ್ಲಿ ಜನತೆ ಆಸ್ಥೆ ಆಸಕ್ತಿಯನ್ನು ವಹಿಸಬೇಕಾದರೆ ಭಾಷಾವಾರು ಪ್ರಾಂತಗಳು ಅನಿವಾರ್ಯವೆಂಬುದು ಖಂಡಿತವಾದ. ಬ್ರಿಟಿಶ ಸರಕಾರದವರು ಕೂಡ ಈ ತತ್ವದ ಮೇಲೆ ಕೆಲವು ಪ್ರಾಂತಗಳನ್ನು ರಚಿಸಿದ್ದಾರೆ. ಬಂಗಾಲ, ಬಿಹಾರ, ಓಡಿಸಾ, ಸಿಂಧ ಮುಂತಾದ ಪ್ರಾಂತಗಳು ಆ ತಳಹದಿಯ ಮೇಲೆ ರಚಿತವಾಗಿವೆ.

ಹೀಗೆ ಕೆಲವು ಭಾಗಗಳು ಭಾಷಾವಾರು ಪ್ರಾಂತರಚನೆಯ ತತ್ವವನ್ನು ಅನುಸರಿಸಿ ನಿರ್ಮಾಣವಾಗಿದ್ದರೂ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳು, ಕೇರಳ, ಗುಜರಾತ ಮುಂತಾದವುಗಳು ಮಾತ್ರ ದುರ್ದೈವದಿಂದ ಹಾಗೆಯೆ ಉಳಿದುಕೊಂಡಿವೆ. ...

ಆಕ್ರಮಣ ನಮಗೆ ಬೇಡ

...

ಸಂಸ್ಥಾನಿಕರ ವಿರೋಧ ಬರಲಾರದು

...

ಒಂದು ಆಕ್ಷೇಪ

...

ಕರ್ನಾಟಕದ ಸಂಪತ್ಸಮೃದ್ಧಿ

...


ಗುರಿಯನ್ನು ನಾವು ಮರೆತಿಲ್ಲ

...

ರಾಷ್ಟ್ರಕ್ಕೆ ಏಕೀಕರಣ ವಿಘಾತಕವಲ್ಲ

...

—೧೨ ನೇ ಪುಟ ನೋಡಿರಿ



ಕರ್ಮವೀರ ಹರಿಜನ ಪುರವಣಿ

ಪಡಿಮದ್ದು

ಕಲಕತ್ತೆಯಲ್ಲಿ ಇತ್ತೀಚೆಗೆ ಸಂಭವಿಸಿದ ದುರ್ದೈವೀ ಮತ್ತು ಅಪಕೀರ್ತಿಕರ ಘಟನೆಗಳನ್ನು ವಿವರವಾಗಿ ಚಿತ್ರಿಸಿ ಪತ್ರಲೇಖಕನೊಬ್ಬನು ಕೇಳುತ್ತಾನೆ "ಇಂಥ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವೇನು? ಇಂಥ ಗಂಡಾಂತರ ಪರಿಸ್ಥಿತಿಯಲ್ಲಿ ಜನಸಾಮಾನ್ಯರು ಎಂತು ನಡೆಯಬೇಕೆಂಬ ಬಗ್ಗೆ ಕಾಂಗ್ರೆಸ್ಸು ಸುಸ್ಪಷ್ಟ ಸೂಚನೆಗಳನ್ನು ಕೊಟ್ಟಿದೆ. ಅಹಿಂಸಾತ್ಮಕ ಪ್ರತೀಕಾರ ಮಾಡುವುದೆಂದರೆ ಎಲ್ಲ ಆಸ್ತಿಯನ್ನು ನಾಶಗೊಳಿಸಲು ಅವಕಾಶ ಕೊಟ್ಟಂತೆಯೆ ಮತ್ತು ಪ್ರತಿಯೊಬ್ಬ ಹಿಂದುವು ಕೊಲ್ಲಲ್ಪಡಲು ಅವಕಾಶ ಕೊಟ್ಟಂತೆಯೆ."

ಕಾಂಗ್ರೆಸ್ ಕಾರ್ಯಸಮಿತಿಯು ಪಾಸು ಮಾಡಿದ ಗೊತ್ತುವಳಿಯ ಕೊನೆಯ ವಾಕ್ಯದಲ್ಲಿ ಸ್ಪಷ್ಟ ಶಬ್ದಗಳಲ್ಲಿ ಜನತೆಯ ಕರ್ತವ್ಯ ಹೇಳಿದೆ. ಪತ್ರಿಕೆಗಳಲ್ಲಿ ಇದು ಪ್ರಸಿದ್ಧವಾಗಿದೆ. ಧೈರ್ಯಗೆಡಿಸುವದರಿಂದ ಮತ್ತು ಹಿಂಸೆಯಿಂದ ಭ್ರಾತೃಹತ್ಯೆ ನಿಲ್ಲುವುದಿಲ್ಲ. "ಆದರೆ ಪರಸ್ಪರ ತಿಳಿವಳಿಕೆಯಿಂದ ಮಿತ್ರತ್ವದ ಮಾತುಕತೆಗಳಿಂದ ಅವಶ್ಯವೆನಿಸಿದರೆ ಉಭಯ ಸಮ್ಮತ ಪಂಚಾಯತಿಯಿಂದ" ಅದು ನಿಲ್ಲುವದು. ಈ ವ್ಯವಹಾರ್ಯ ಪ್ರಮೇಯದ ಸತ್ಯತೆಯನ್ನು ಕಂಡುಕೊಳ್ಳಲು ಅಹಿಂಸೆಯನ್ನು ಧ್ಯೇಯವನ್ನಾಗಿ ಇಟ್ಟುಕೊಳ್ಳುವ ಅವಶ್ಯಕತೆಯಿಲ್ಲ. ಅತ್ಯಂತ ಧೈರ್ಯ...

...

ಸ್ವಚ್ಛತೆಯನ್ನು ಹೇಗೆ ಇಡಬೇಕೆಂಬುದು ಅವರಿಗೆ ಗೊತ್ತಿದೆ. ಎರಡನೆಯವರನ್ನು ಹೇಗೆ ಕೊಲ್ಲಬೇಕು ಮತ್ತು ಹೇಗೆ ಕೊಲ್ಲಲ್ಪಡಬೇಕೆಂಬುದೂ ಅವರಿಗೆ ಗೊತ್ತಿದೆಂಬಲ್ಲಿ ಸಂದೇಹವಿಲ್ಲ. ಅವರ ಕೆಲಸದ ಪರಿಚಯ ಸಾರ್ವಜನಿಕರಿಗೆ ಸಂಪೂರ್ಣ ಇರುವುದು. ಆದರೆ ಇದೇನು ಅವರು ಮಾಡತಕ್ಕ ಅತಿ ಮುಖ್ಯ ಕೆಲಸವಲ್ಲೆಂಬುದು ನಿಸ್ಸಂದೇಹ. ಅದು ಪ್ರಾಸ್ತಾವಿಕ. ಅದಕ್ಕೆ ಬೆಲೆ ಕೊಡತಕ್ಕದ್ದು, ಪ್ರಕಟಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು. ಅದರಲ್ಲಿಯ ಪಾಶವೀ ಭಾಗವು ಮಾನವೀಯವಾಗಿರುವುದಿಲ್ಲ. ಎರಡನೆಯ ಭಾಗವು ಮುಖ್ಯವಾಗಿ ಮಾನವೀ ಮತ್ತು ವಿಶುದ್ಧವಾಗಿದೆ. ಅದನ್ನನುಸರಿಸಿ ಶಕ್ಯವಿದ್ದರೆ ಆ ಸೈನಿಕರನ್ನು ಮನುಷ್ಯತ್ವಕ್ಕೆ ತರುವಾ. ಈ ಪ್ರಯತ್ನ ಮಾಡುವದುಚಿತವಾಗಿದೆ. ಅವರ ಮಾಯಾಶಕ್ತಿ ಮತ್ತು ಭಯೋತ್ಪಾದನ ಶಕ್ತಿಯಿಂದ ಮೋಹಿತರಾಗದಿದ್ದವರು ಮಾತ್ರ ಇದನ್ನು ಮಾಡಬಲ್ಲರು. ಮನಸ್ಸಿನಲ್ಲಿ ಇಲ್ಲವೆ ಕೃತಿಯಲ್ಲಿ ಪ್ರತೀಕಾರ ಇಲ್ಲವೆ ಸೇಡು ತೀರಿಸಿಕೊಳ್ಳುವ ಪ್ರವೃತ್ತಿಯನ್ನು ತಾಳದೆ ಮರಣವನ್ನಪ್ಪಿಕೊಳ್ಳಲು ನಮ್ಮಲ್ಲಿ ಧೈರ್ಯವಿದ್ದಾಗಲೆ ಇದು ಶಕ್ಯವಾಗುವದು.

ಹೊಸದಿಲ್ಲಿ — ಮೋ. ಕ. ಗಾಂಧಿ

೨-೯-೪೬

ಟೀಕೆ ಟಿಪ್ಪಣಿಗಳು

ವಿದೇಶಕ್ಕೆ ಹೋಗುವುದೇಕೆ?

...

ವಾಗುತ್ತದೆ. ಅದರಿಂದು ವಿದೇಶಕ್ಕೆ ಹೋಗುವ ಉನ್ಮಾದ ವಿದ್ಯಾರ್ಥಿಗಳಿಗೆ ವ್ಯರ್ಥವಾಗಿ ಅಂಟಿಕೊಂಡಿದೆ. ಮೇಲೆ ಉಲ್ಲೇಖಿಸಿದ ಅಂಕಿಗಳು ಎಚ್ಚರಿಕೆಯಾಗಿ ಪರಿಣಮಿಸುವದೊ?

ಹೊಸದಿಲ್ಲಿ — ಮೋ. ಕ. ಗಾಂಧಿ

೨-೯-೪೬

ವಾಚಕರಿಗೆ

'ಪ್ರಶ್ನಪೆಟ್ಟಿಗೆ' 'ಹರಿಜನ'ದಲ್ಲಿ ಖಾಯಮಾದ ಒಂದು ಲಕ್ಷಣ. ಪ್ರಶ್ನೆ ಕೇಳುವವರ ಸಂದೇಹಗಳನ್ನು ಶಕ್ಯವಿದ್ದಮಟ್ಟಿಗೆ ನಿವಾರಿಸಲು ಅದು ಪ್ರಯತ್ನಿಸುತ್ತದೆ. ಆದರೆ ಬರುವ ಪತ್ರಗಳಲ್ಲಿ ಅನೇಕಸಲ ಒಮ್ಮೆಲ್ಲ ಹಲವಾರುಸಲ ಉತ್ತರಿಸಿದ ಪ್ರಶ್ನೆಗಳನ್ನೆ ಕೇಳಿದ್ದು ಕಂಡು ಬರುತ್ತದೆ. ವಾಚಕರು ಪ್ರಶ್ನೆಪೆಟ್ಟಿಗೆಯಲ್ಲಿಯ ವಿಷಯವನ್ನು ಮನಮುಟ್ಟಿ ಅಭ್ಯಸಿಸಬೇಕು.

ರೋಗಿಗಳಿಗಾಗಿ ವೈದ್ಯಕೀಯ ಸಲಹೆ ಕೋರುವ ಪತ್ರಗಳೂ ಬರುತಿವೆ. ಇಂಥ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂಬ ಇಚ್ಛೆ ನನಗಿದೆ. ಆದರೆ ಇದಕ್ಕಾಗಿ ಸಮಯ ತೆಗೆದುಕೊಳ್ಳಬೇಕಾಗುವದು. ಅಂಚೆ ಮೂಲಕ ಕೇಳಲ್ಪಟ್ಟ ಅಪೂರ್ಣ ಪ್ರಶ್ನೆಗಳಿಗೆ ...

ಹೊಸದಿಲ್ಲಿ — ಮೋ. ಕ. ಗಾಂಧಿ

೨-೯-೪೬

ಮಾರಾಟ ಕರ

...

(೫ ನೇ ಪುಟ ನೋಡಿರಿ)

ಗೋವಾ

ಗೋವೆಯಲ್ಲಿ ನಾಗರಿಕ ಸ್ವಾತಂತ್ರ್ಯಪ್ರೇಮಿಗಳನ್ನು ಹೀಳೆಯಾಡುವದು ಯಥಾ ಪ್ರಕಾರ ನಡೆದಿದೆ. ಸಣ್ಣ ಸರಕಾರ ಸಣ್ಣದಿದ್ದುದರಿಂದಲೆ ದೊಡ್ಡ ಸರಕಾರ ನಡೆಯುದಿದ್ದ ಅನಪಾಯ ರೀತಿಯಲ್ಲಿ ಯಾವಾಗಲೂ ನಡೆಯುತಿದೆ. ನನ್ನ ಕಡೆಗೆ ಬಂದಸುದ್ದಿಗಳು ನಿಜವಿದ್ದರೆ ಶ್ರೀಪುರುಷೋತ್ತಮ ಕಾಕೋಡಕರರು ಕಾರಂಗದಲ್ಲಿ ಉಪೋಷಣಮಾಡುತಿರುವರು. ಮತ್ತು ಬೇಗನೆ ಬಹುಸಂಖ್ಯಾಕರನ್ನು ಕೂಡಬಹುದು. ಮರಣಾಂತಿಕ ಸತ್ಯಾಗ್ರಹದಲ್ಲಿ ವಿಶ್ವಾಸವಿದ್ದ ನಾನಾಗಲಿ ಬೇರೆ ಸತ್ಯಾಗ್ರಹಿಯಾಗಲಿ ಸಾಹಿಗಾಗಿ ಶೋಕಿಸಶಕ್ಯದ್ದಲ್ಲ. ಅಕಅಂಕ ಹುತಾತ್ಮರ ಇಂಥ ಮರಣಗಳಲ್ಲಿಯೆ ನಿಜ ಸ್ವಾತಂತ್ರ್ಯದ ಜೀವವಿರುವದು.

ಅದರೆ ಔದಾರ್ಯದ ಮತ್ತು ರೋಮನ್ ಕಾಥಲಿಕ ಪಂಥದ ಅನುಯಾಯಿಯೆಂದು ಜಂಭ ಕೊಚ್ಚಿಕೊಳ್ಳುತಿರುವ ಆ ಪೋರ್ತುಗೀಜ ಸರಕಾರ ಮಾನವ ಮತ್ತು ಪರಮಾತ್ಮನ ಸಮಕ್ಷಮದಲ್ಲಿ ತನ್ನ ಕೃತ್ಯವನ್ನೆಂತು ಸಮರ್ಥಿಸಿಕೊಳ್ಳಬಲ್ಲುದು? ನಿರಪರಾಧಿಗಳ (ಹುತಾತ್ಮರು ನಿರಪರಾಧಿಗಳೆಂದು ಗ್ರಹಿಸಿದರೆ) ರಕ್ತವು ಅವರ ಸಮಾಧಿಯೊಳಗಿಂದ ಇಲ್ಲವೆ ಬೂದಿಯೊಳಗಿಂದ ಕೂಗಹತ್ತುತ್ತದೆ. ಜೀವಂತವಿದ್ದವರ ಕೂಗು ಎಷ್ಟೇ ಗಟ್ಟಿ ಮತ್ತು ಸ್ಪಷ್ಟವಿದ್ದರೂ ಸಮಾಧಿಯೊಳಗಿಂದ ಬರುವ ಆ ಕೂಗು ಹೆಚ್ಚು ಸಮರ್ಥವಾಗಿದೆ.

ದಿಲ್ಲಿಯ ಗಾಡಿಯುಲ್ಲಿ — ಮೋ. ಕ. ಗಾಂಧಿ

೨೨—೮—೪೬

"ಹರಿಜನದ ೧೮ ನೇ ತಾರೀಖಿನ ಪತ್ರಿಕೆಯಲ್ಲಿ ಗಾಂಧಿಯವರು ಫ್ರೆಂಚ ಮತ್ತು ಪೋರ್ತುಗೀಜರ ಕಾರದಲ್ಲಿರುವ ವೈಲಕ್ಷಣ್ಯವನ್ನು ವಿಮರ್ಶಿಸಿದ ಟೀಕೆಯ ಸಂಬಂಧದಲ್ಲಿ ನಿಮ್ಮ ತಿಳುವಳಿಕೆಗಾಗಿ ಮತ್ತು ಪ್ರಸಿದ್ಧಿಗಾಗಿ ಕೆಳಗಿನಂತೆ ಹೇಳಬಯಸುತ್ತೇವೆ.

"ಫ್ರೆಂಚ ಹಿಂದುಸ್ತಾನ ಮತ್ತು ಪೋರ್ತುಗೀಜ ಹಿಂದುಸ್ತಾನಗಳಲ್ಲಿನ ಈ ವೈಲಕ್ಷಣ್ಯದಲ್ಲಿ ವಿಸಂಗತತೆ ಏನೂ ಇಲ್ಲ. ಉದ್ದೇಶ ಆಡಳಿತ ಪದ್ಧತಿ ಮತ್ತು ಧ್ಯೇಯ ಪೂರ್ಣವಾಗಿ ಭಿನ್ನವಾಗಿವೆ. ಇತ್ತೀಚೆ (೧೯೪೬, ಹಿಂದುಸ್ತಾನದಲ್ಲಿಯ ಫ್ರೆಂಚ ವಸತಿಗಳನ್ನೆಲ್ಲ ಫ್ರೆಂಚ ವಸಾಹತು ಸಾಮ್ರಾಜ್ಯದಲ್ಲಿ ಸೇರ್ಪಡಿಸಿದ್ದರಿಂದುಂಟಾದ ಹಿನ್ನಡೆಯನ್ನು ಪೋರ್ತುಗೀಜ ಹಿಂದುಸ್ತಾನದೊಡನೆ ಹೋಲಿಸಬಂತಿಲ್ಲ. ಕಳೆದ ೪೦೦ ವರ್ಷಕ್ಕಿಂತ ಹೆಚ್ಚು ಅವಧಿಯ ಪೋರ್ತುಗೀಜರ ಆಳಿಕೆಯಿಂದ ಪೋರ್ತುಗೀಜ ಹಿಂದುಸ್ತಾನದ ಕಲ್ಯಾಣ ಬಹಳಾಗಿದ. ಮಾತೃಭೂಮಿಯೊಡನೇ ಸಂಪೂರ್ಣ ಸಂಬಂಧ ಬೆಳಸಲು ಅದು ಹಾತೊರೆಯುತಿದೆ.

"ಫ್ರೆಂಚ ಹಿಂದುಸ್ತಾನದ ನಿವಾಸಿಗಳು ಸ್ವತಂತ್ರ ಹಿಂದುಸ್ತಾನದ ಗೂಡ ಸಂಬದ್ಧವಾಗಿರಬೇಕೆಂದು ಬಯಸುತಿದ್ದರೆ (ಅದಿನ್ನೂ ನಿರ್ಧರಿಸಲ್ಪಟ್ಟಿಲ್ಲ) ಪೋರ್ತುಗೀಜ ಹಿಂದುಸ್ತಾನದ ಪರಿಸ್ಥಿತಿ ಹಾಗಿರುವುದಿಲ್ಲ. ಪೋರ್ತುಗೀಜ ಹಿಂದುಸ್ತಾನದಲ್ಲಿಯ ಜನತೆ ತನ್ನ ಭೌತಿಕ ಹಾಗು ನೈತಿಕ ಪ್ರಗತಿಗೆ ಸಾಧನವಾಗಿರುವ ಪೋರ್ತುಗೀಜ ಸರಕಾರದಲ್ಲಿಯೆ ಇರಬಯಸುತ್ತದೆ. ಇದು ಪೋರ್ತುಗೀಜರ ವಸಾಹತಿನ ಪ್ರಯತ್ನದ ಅಭಿಮಾನದ ದ್ಯೋತಕವಾಗಿದೆ. ಗೋವಾ ಮಾತೃಭೂಮಿಯ ಒಂದು ಭಾಗವೆ ಆಗಿದೆ.

ಇವೆಲ್ಲ ಐತಿಹಾಸಿಕ ಸಂಗತಿಗಳಾಗಿದ್ದರಿಂದ ನೀವು ಅವಶ್ಯಕ ತಿದ್ದುಪಡಿಯನ್ನು ಪ್ರಸಿದ್ಧಿಸುವಿರೆಂದು ನಂಬುತ್ತೇವೆ."

ಗೋವಾ ಗೋವಾ ಸರಕಾರದ ಸುದ್ದಿ ಖಾತೆಯ ಮುಖ್ಯಾಧಿಕಾರಿಗಳಿಂದ 'ಹರಿಜನ'ದ ಸಂಪಾದಕರಿಗೆ ಬಂದ ಈ ಪತ್ರವನ್ನೋದಿದರೆ ವಿಷಾದವೆನಿಸುತ್ತದೆ. 'ಹುಲಿನ ಸಿಂಧ್ಯ'ವೆಂಬ ನಾಣ್ಣುಡಿ ಸತ್ಯವೆಂಬುದಕ್ಕೆ ಇದು ಉದಾಹರಣೆಯಾಗಿದೆ. ಫ್ರೆಂಚ ಮತ್ತು ಪೋರ್ತುಗೀಜ ಸಾಮ್ರಾಜ್ಯತ್ವಗಳಲ್ಲಿ ಯಾವುದು ಶ್ರೇಷ್ಠ ಯಾವುದು ಕನಿಷ್ಠವೆಂದು ಹೇಳುವಂತಿಲ್ಲ. ಸಾಮ್ರಾಜ್ಯತ್ವದ ಕರಗಳು ಯಾವಾಗಲೂ ರಕ್ತರಂಜಿತವಾಗಿವೆ. ಶ್ರೇಷ್ಠ ಅಶೋಕನಂತೆ ಸಾಮ್ರಾಜ್ಯ ಸರಕಾರಗಳು ತಮ್ಮ ಸಾಮ್ರಾಜ್ಯತ್ವವನ್ನು ಬೇಗ ಬಿಟ್ಟುಕೊಟ್ಟಷ್ಟು ಬಳಿ ಜಗತ್ತಿಗೆ ಒಳಿತು. ಫ್ರೆಂಚ ಹಿಂದುಸ್ತಾನದ ಗವರ್ನರರು ಹೊರಡಿಸಿದ ಪ್ರಕಟಣೆ ಸತ್ಯಪೂರ್ಣವಾಗಿದ್ದರೆ ಫ್ರಾನ್ಸ ಸರಕಾರ ಅಭಿನಂದನಾರ್ಹವಾಗಬಹುದು. ಆ ರೀತಿ ಯಾರಾದರೂ ಅಭಿನಂದಿಸಿದರೆ ಕ್ಷಮ್ಯವೆ ಪೋರ್ತುಗಾಲವು ಗೋವಾದ ಹಿಂದೀಯರ ಮಾತೃಭೂಮಿಯೆಂದು ಬರೆಯುವದು ಪೋರ್ತುಗೀಜ ಸರಕಾರದ ಸುದ್ದೀ ಖಾತೆಗೆ ನಾಚಿಕೆಗೇಡು. ಅವರ ಮಾತೃಭೂಮಿ ನನ್ನ ಮಾತೃಭೂಮಿಯಂತೆ ಹಿಂದುಸ್ತಾನವೆ ಆಗಿದೆ. ಗೋವಾ ಬ್ರಿಟಿಶ್ ಹಿಂದುಸ್ತಾನದ ಹೊರಗಿದೆ ಆದರೆ ಅದು ಭೌಗೋಲಿಕ ಹಿಂದುಸ್ತಾನದಲ್ಲಿಯೆ ಅಂತರ್ಗತವಾಗಿದೆ. ಪೋರ್ತುಗೀಜರಲ್ಲಿ ಮತ್ತು ಗೋವಾದಲ್ಲಿಯ ಹಿಂದೀಯರಲ್ಲಿ ಏನಾದರೂ ಸಾಮ್ಯವಿದ್ದರೆ ಅದು ಬಹಳ ಕಡಮೆ.

ಶ್ರೀ ಪುರುಷೋತ್ತಮ ಕಾಕೋಡಕರರ ಸಂಬಂಧದಲ್ಲಿ ನಾನು ಹೊರಡಿಸಿದ ಪ್ರಕಟಣೆಯ ನಿರಾಕರಣೆಯನ್ನು ನಾನು ಓದಿರುವೆನು. ಗೋವಾದಲ್ಲಿಯ ಪೋರ್ತುಗೀಜ ಅಧಿಕಾರಿಗಳು ಅದನ್ನು ನಿರಾಕರಿಸಿದ್ದರೂ ನಾನು ಅದಕ್ಕೇ ಸ್ಥಿರನಾಗುತ್ತೇನೆ. ಶ್ರೀ ಕಾಕೋಡಕರರ ಹೆಂಡತಿ ೨೪-೮-೧೯೪೬ ಕ್ಕೆ ಹೀಗೆ ಬರೆದಿದ್ದಾರೆ.

"ಗೋವಾ ರಾಷ್ಟ್ರೀಯ ಮಹಾಸಭೆಯ ಕಾರ್ಯದರ್ಶಿ ಶ್ರೀ ಪುರುಷೋತ್ತಮ ಕಾಕೋಡಕರರು ೯-೮-೪೬ ನೇ ದಿನ ಒಬ್ಬ ಗೆಳೆಯರೊಡನೆ ಮಾತಾಡುತ್ತ ನಿಂತಿರುವಾಗ ಪೋರ್ತುಗೀಜ ಅಧಿಕಾರಿಗಳು ಅವರನ್ನು ಹಿಡಿದರು. ೧೦ ನೇ ತಾರೀಕಿಗೆ ಅವರನ್ನು ಪಣಜಿಗೆ (ನೊವಾ ಗೋವಾ) ಒಯ್ದರು. ೧೧ ಮತ್ತು ೧೨ ಕ್ಕೆ ಅವರಿಗೆ ಅರೆಹೊಟ್ಟೆ ಉಣ್ಣಲಿಕ್ಕೆ ಕೊಟ್ಟರು. ಬೇಕಂತಲೆ ತಮಗೆ ಅರೆಹೊಟ್ಟೆ ಆಹಾರವನ್ನು ಅಧಿಕಾರಿಗಳು ಕೊಡುತಿರುವರೆಂಬುದು ಅವರಿಗೆ ಗೊತ್ತಾದ ಕೂಡಲೆ ೧೩ ನೇ ತಾರೀಕು ಅವರು ಅನಶನ ವ್ರತವನ್ನು ಪ್ರಾರಂಭಿಸಿದರು. ೨೦ ಕ್ಕೆ ಇನ್ನೂ ಉಪೋಷಣವನ್ನು ಮಾಡುತಿರುವರು.

ಪೋರ್ತುಗೀಜ ಸರಕಾರದ ಧೋರಣದಲ್ಲಿ ಯಾವದೇ ಬಗೆಯ ಬದಲಾವಣೆಯಿಲ್ಲ; ತನಗೆ ಮತ್ತು ಉಳಿದ ಕೈದಿಗಳಿಗೆ ಸಾಕಷ್ಟು ಆಹಾರ ಕೊಡುವದರ ಸಂಬಂಧದಲ್ಲಿ ಶ್ರೀ ಕಾಕೋಡಕರರು ಮಾಡಿಕೊಂಡ ಬಿನ್ನಹಕ್ಕೆ ಈ ವರೆಗೆ (೨೪—೮—೪೬) ಪೋರ್ತುಗೀಜ ಸರಕಾರದಿಂದ ಉತ್ತರ ಬಂದಿರುವದಿಲ್ಲ"

ಸೆರೆಮನೆಯಲ್ಲಿರುವ ಕಾಕೋಡಕರರನ್ನು ಭೆಟ್ಟಿಯಾಗಿ ಅವರಿಂದ ಸುದ್ದಿ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕಾಗಿ ಪೋರ್ತುಗೀಜ ಸರಕಾರದವರು "ಹರಿಜನ"ದ ಪ್ರತಿನಿಧಿಗೆ ಅಪ್ಪಣೆ ಕೊಡವರೊ?

ಹೊಸದಿಲ್ಲಿ — ಮೋ. ಕ. ಗಾಂಧಿ

೨೯—೮—೪೬

ಗೋವಾ ಕೈದಿಯ ಪ್ರಲಾಪ

ಶ್ರೀ ಪುರುಷೋತ್ತಮ ಕಾಕೋಡಕರರು ಪಣಜಿ ಕಾರಾಗೃಹದಿಂದ ೧೨—೮—೪೬ ಕ್ಕೆ ಗಾಂಧೀಜಿಯವರಿಗೆ ಬರೆದ ಹಿಂದೀ ಪತ್ರದಲ್ಲಿ ತಾವು ಹೇಗೆ ಸೆರೆಹಿಡಿಯಲ್ಪಟ್ಟರೆಂಬದನ್ನು ವಿವರಿಸಿದ್ದಾರೆ.

ಆಗಸ್ಟ ೭ ನೇ ತಾರೀಕು ಶುಕ್ರವಾರ ರಾತ್ರಿ ಸುಮಾರು ೯ ಗಂಟೆಗೆ ಗೆಳೆಯರೊಬ್ಬರಗೂಡ ರಾಜಮಾರ್ಗದಲ್ಲಿ ನಾನು ಮಾತಾಡುತ್ತ ನಿಂತಾಗ ಮಡಗಾಂವದ ಪೋಲೀಸ ಅಧಿಕಾರಿ ಪಿಗಾರ್ಡೆ ಇವರು ನನ್ನನ್ನು ಸೆರೆಹಿಡಿದರು. ೧೦ ನೇ ತಾರೀಕು ಸುಮಾರು ೧೦ ಗಂಟೆಗೆ ಸಶಸ್ತ್ರ ಪೋಲೀಸ ಕಾವಲಿನಲ್ಲಿ ಮಾಮಲೇದಾರ ಕಚೇರಿಗೆ ನನ್ನನ್ನು ಕರೆದು ತರಲಾಯಿತು. ಮಾಮಲೇದಾರರು ಅಲ್ಲಿ ಪ್ರಶ್ನೆಗಳ ಸುರಿಮಳೆ ಸುರಿಸಿದರು. ನನ್ನನ್ನು ಪರೀಕ್ಷಿಸುತ್ತಿರುವಾಗ ಅವರು ಸಿಟ್ಟಿಗೆದ್ದು ಅವಾಚ್ಯ ಶಬ್ದಗಳನ್ನು ಪ್ರಯೋಗಿಸಿದರು, ನನ್ನನ್ನು ಕೊಲ್ಲುವ ಬೆದರಿಕೆಯನ್ನೂ ಹಾಕಿದರು. ಅಂದೇ ಸಾಯಂಕಾಲ ನನ್ನನ್ನು ಪಣಜಿ ಕಾರಾಗೃಹಕ್ಕೆ ತಂದರು. ಅಲ್ಲಿ ದಿನಕ್ಕೆ ಎರಡು ಸಲ ಅನ್ನ ಕೊಡಲಾಗುತ್ತದೆ ಮಧ್ಯಾಹ್ನ ಮತ್ತು ರಾತ್ರಿ ಪ್ರತಿ ಸಲ-ಒಂದು ಹಿಡಿ ಎಂದರೆ ಹಿಡಿ ಅನ್ನ—ತೊಯಿಸಿದ ಸ್ವಲ್ಪ ಬೇಳೆ ಒಂದೆರಡು ಚಮಚೆ ಪಲ್ಲೆ ಹಾಗೂ ಒಂದೆರಡು ಹಪ್ಪಳ ಇಷ್ಟು ಆಹಾರ ಮಾತ್ರ ಕೊಡಲಾಗುತ್ತದೆ. ಇದಕ್ಕೆ "ಅರೆಸೀಜ" ಅಂದರೆ 'ಅರ್ಧಾ ಖಾನಾ' ಎನ್ನುವರು. ಆದರೆ ಇದಕ್ಕೆ ನಾವು ಪೋರ್ತುಗೀಜ ಅಧಿಕಾರಿಯೊಬ್ಬನ ಲಕ್ಷ್ಯ ಎಳೆಯಲು ನಿಯಮಕ್ಕನುಸಾರವಾಗಿಯೆ ಆಹಾರ ಕೊಡಲಾಗುತ್ತದೆ. ಇದಕ್ಕೂ ಹೆಚ್ಚು ಕೊಡಲು ನನಗೆ ಅಧಿಕಾರವಿಲ್ಲ ಎಂದು ಉತ್ತರ ದೊರೆಯಿತು. ಇಷ್ಟೊಂದು ಆಹಾರ ಬಿಕ್ಕೆಗಾರರಿಗೆ ಮಾತ್ರ ಇದ್ದು ಸ್ಥಿತಿವಂತರಿಗಲ್ಲ.

ಶ್ರೀ ಕಾಕೋಡಕರರು ಮುಂದೆ ಹೀಗೆ ಬರೆಯುತ್ತಾರೆ.

"ಸಾಕಷ್ಟಾಗದಿದ್ದರೂ ಇಂದು ಮಧ್ಯಾಹ್ನ ನಾನು ಈ ಆಹಾರ ತೆಗೆದುಕೊಂಡೆ. ನಾನೇನು ಸಮಾಜದ ವಿರುದ್ಧ ಯಾವದೇ ಅಪರಾಧ ಮಾಡಿಲ್ಲ. ಆದರೂ ಒತ್ತಾಯದಿಂದ ಸರಕಾರದ ಅತಿಥಿಯನ್ನಾಗಿ ನನ್ನನ್ನು ಮಾಡಲಾಗಿದೆ ಹೊರಗಿನಿಂದ ಆಹಾರ ಕಳಿಸಿರೆಂದು ನಾನು ಯಾರಿಗೆ ಬಿನ್ನವಿಸಿಕೊಳ್ಳಬೇಕು? ಆಲಸಿಗನಾಗಿ ಇಲ್ಲಿ ಕುಳಿತು ಎರಡನೆಯವರ ಪರಿಶ್ರಮದಿಂದ ದೊರೆತ ಆಹಾರ ತಿನ್ನುವದು ನ್ಯಾಯ್ಯವೆಂದು ನನಗನಿಸುವದಿಲ್ಲ. ಕೆಲಸ ಮಾಡಲು ನಾನು ಸಿದ್ಧನಿರುವೆನೆಂದೂ ನನಗೆ ಒಳ್ಳೆ ಆಹಾರ ಕೊಡಲಿಕ್ಕೆ ಬೇಕೆಂದೂ ಅಧಿಕಾರಿಗಳಿಗೆ ತಿಳಿಸಬಯಸುತ್ತೇನೆ."

ಕಾರಾಗಾಡಳಿತದ ಸಂಬಂಧದಲ್ಲಿ ಅವರು ಹೀಗೆ ಹೇಳುತ್ತಾರೆ. ಕೆಲ ಸಮಯ ತಾಸುಗಟ್ಲೆ ಯಾವ ಕಾವಲುಗಾರನೂ ಅಲ್ಲಿರುವುದಿಲ್ಲ. ಇದೇನು ಕಾವಲುಗಾರನ ತಪ್ಪಲ್ಲ. ಆದರೆ ಆಡಳಿತದ ದೋಷ. ತತ್ಪರಿಣಾಮವಾಗಿ ಕೋಣೆಗಳಲ್ಲಿ ಬಂಧಿತರಾದ ಕೈದಿಗಳಿಗೆ ನಿಯಮಿತವಾಗಿ ಮುಂಜಾವಿನ ಕಾರ್ಯಕ್ರಮಕ್ಕೆ ಕೂಡ ಅವಕಾಶ ದೊರೆಯುವುದಿಲ್ಲ. ಉದಾಹರಣೆಗಾಗಿ ಅವನು ಬೆಳಗು ಮುಂಜಾನ ೪-೩೦ ಕ್ಕೆ ಎದ್ದ ಕೂಡಲೆ ಯಾವ ಕಾವಲಗಾರನೂ ಅಲ್ಲಿ ಕಾಣಸಿಗುವದಿಲ್ಲ. ಅದುದರಿಂದ ೭-೭-೧೫ ಗಂಟೆ ವರೆಗೆ ಅವನು ದಾರಿ ನೋಡಬೇಕಾಗುವದು ಅನಂತರವೆ ಅವನು ಪ್ರಾತರ್ವಿಧಿ ತೀರಿಸಿಕೊಳ್ಳಬೇಕು. ಶ್ರೀ ಕಾಕೋಡಕರರಿಗೆ ಮೂಲವ್ಯಾಧಿಯಿದ್ದು ಸೆರೆಯ ನಂತರದ ಉಪೋಷಣದಿಂದ ಜಾಗರಣೆಯಿಂದ ಮತ್ತು ಆಹಾರದಲ್ಲಿರುವ ವಿಶೇಷ ಖಾರದಿಂದ ಆ ಬೇನೆ ಜ್ವಲಿಸಿದೆ.

ಹೊಸದಿಲ್ಲಿ — ಪ್ಯಾರೇಲಾಲ

೧—೯—೧೯೪೬

[೭ ನೇ ಪುಟ ಮುಂದರಿದುದು]

ಲೋಕನಿಯುಕ್ತ ಸದಸ್ಯ, ಮತದಾರರಿಗೆ ಹೊಣೆಗಾರನಿರುವನು. ಅದುದರಿಂದ ತನ್ನ ಸರಕಾರದ ವಿರುದ್ಧ ಯಾವದೆ ಬಗೆಯ ಟೀಕೆ ಮಾಡುವ ಮೊದಲು ಸಾರ್ವಜನಿಕರನ್ನು ಪ್ರತಿನಿಧಿಸುತ್ತ ಪ್ರತಿಯೊಬ್ಬ ಮತದಾರ ಪೂರ್ಣ ವಿಚಾರ ಮಾಡಬೇಕು. ಅಲ್ಲದೆ ಜನತೆಯು ಇನ್ನೊಂದು ಕಟ್ಟಚಟವನ್ನು ಲಕ್ಷದಲ್ಲಿಡಬೇಕಾಗಿದೆ. ಅವರಿಗೆ ಯಾವದೇ ಬಗೆಯ ಕರ ಕೊಡಬೇಕೆನಿಸುವದಿಲ್ಲ ಸತ್ಸರಕಾರಕ್ಕೆ ಕೊಟ್ಟ ಕರಕ್ಕೆ ಪ್ರತಿಯಾಗಿ ಕರಕೊಡುವವನಿಗೆ ಪ್ರತಿಫಲ ದೊರೆಯುತ್ತದೆ ಉದಾಹರಣಾರ್ಥವಾಗಿ ನಗರಗಳಲ್ಲಿಯ ನೀರಿನ ಕರ. ಯಾರಾದರೂ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡರೆ ನೀರು ಅಷ್ಟೇ ಹಣಕ್ಕೆ ಸಿಕ್ಕದು. ಹೀಗಿದ್ದರೂ ಸಾರ್ವಜನಿಕರ ಇಚ್ಛೆಗನುಸಾರವಾಗಿ ಕರ ಹೇರಿದ್ದರೂ ಇಂಥ ಕರಗಳನ್ನು ಕೊಡುವಾಗಲೂ ವಿರೋಧಿಸುವರುಂಟು. ನಾನು ಕೊಟ್ಟ ಉದಾಹರಣೆಯಷ್ಟು ಸುಲಭವಾಗಿ ಎಲ್ಲ ಕರಗಳಿಂದ ಕಲ್ಯಾಣವಾಗುವುದೆಂದು ಸಿದ್ಧಪಡಿಸುವದು ಶಕ್ಯವಿಲ್ಲೆಂಬುದು ನಿಜ. ಆದರೆ ಸಮಾಜದ ವಿಕಾಸವಾದಂತೆ ಸಂಕೀರ್ಣ ಸಮಸ್ಯೆಗಳುದ್ಭವವಾದಂತೆ ಸೇವಾ ಕ್ಷೇತ್ರವೂ ವಿಶಾಲವಾಗುತ್ತದೆ. ಇಂಥದೊಂದು ಕರಕ್ಕೆ ಪ್ರತಿಯಾಗಿ ಯಾವ ಪ್ರತಿಫಲ ದೊರೆಯುತಿದೆಂದು ಪ್ರತಿಯೊಬ್ಬ ಕರ ಕೊಡುವವನಿಗೆ ತಿಳಿಸಿ ಹೇಳುವದು ಕಠಿನವಾಗುತ್ತದೆ. ಆದರೆ ಇಷ್ಟು ಮಾತ್ರ ಸ್ಪಷ್ಟ, ಕರಗಳೆಲ್ಲ ಸಾರ್ವಜನಿಕರ ಸಾಮಾನ್ಯ ಕಲ್ಯಾಣಕ್ಕಾಗಿಯೆ ಎತ್ತಲ್ಪಡತಕ್ಕದ್ದು. ಹೀಗಿಲ್ಲದಿದ್ದರೆ, ಸಾರ್ವಜನಿಕರ ಅಭಿಪ್ರಾಯದಂತೆ ಕರಗಳೆತ್ತಲ್ಪಡುವವೆಂಬದು ಅರ್ಥಹೀನವಾಗುವದು. ನಾವು ಪರಕೀಯರ ದಾಸ್ಯದಲ್ಲಿ ಇರುವ ಮಟ್ಟದಲ್ಲಿ ಸರಕಾರ ಜನತೆಗೆ ಸಂಪೂರ್ಣ ಹೊಣೆಗಾರವಾಗಿಲ್ಲ. ಆದರೆ ಪ್ರಾಂತಗಳಲ್ಲಿಯ ಸರಕಾರಗಳಿಂದು ಬಹಳ ಮಟ್ಟಿಗೆ ಪ್ರಾತಿನಿಧಿಕವಾಗಿವೆ; ಆ ದೃಷ್ಟಿಯಿಂದ ನಾವು ಮಾರಾಟಕರಗಳನ್ನು ವಿಮರ್ಶಿಸತಕ್ಕದ್ದು.

ಹೊಸದಿಲ್ಲಿ — ಮೋ. ಕ. ಗಾಂಧಿ

೨೫—೮—೪೬ — (ಹರಿಜನಬಂಧುವಿನಿಂದ)

ದಕ್ಷಿಣ ಆಫ್ರಿಕೆ

ಸರ್ ಶಫತ ಅಹಮ್ಮದಖಾನರು- ಅವರ ಮೇಲೆ ಘಾತಕ ಹಲ್ಲೆಯಾಗಿರದಿದ್ದರೆ ನಿನ್ನೆ ದಿನವೆ ಮಧ್ಯಗಾಲ ಸರಕಾರದಲ್ಲಿ ಮಂತ್ರಿಗಳಾಗುತಿದ್ದರು- ಆಗಸ್ಟ ೬ನೇ ತಾರೀಕು ನನಗೊಂದು ಪತ್ರ ಬರೆದಿರುವರು. ಅದರಲ್ಲಿನ ಕೆಲ ಅಂಶಗಳನ್ನು ಕೆಳಗೆ ಉಲ್ಲೇಖಿಸುತ್ತೇನೆ.

"ದಕ್ಷಿಣ ಆಫ್ರಿಕೆಯಲ್ಲಿ ನಾನಿದ್ದಾಗ ಅಲ್ಲಿಯ ಹಿಂದೀಯರ ಸ್ಥಾನಮಾನಗಳ ಪರಿಚಯದಿಂದ ಹೇಳುವುದಾದರೆ ಯುನಿಯನ್‌ದಲ್ಲಿ ನೀವು ಶೌರ್ಯದ ಕಾರ್ಯ ಎಸಗಿರದಿದ್ದರೆ ಆ ದೇಶದಲ್ಲಿ ಹಿಂದೀ ಜನಾಂಗವು ಸ್ವಾಭಿಮಾನದಿಂದ ಬಾಳುತಿರಲಿಲ್ಲ. ನೀವು ಶ್ರೇಷ್ಠ ಜನಾಂಗದಲ್ಲಿ ಪ್ರತೀಕಾರ ಶಕ್ತಿಯನ್ನು ಸಾವಕಾಶವಾಗಿ ಬಲಿಸುತ್ತ ಬಂದಿರಿ. ಆ ದೇಶದಲ್ಲಿ ನೀವು ಮಾಡಿದ ಕಾರ್ಯ ಸದ್ಯದಲ್ಲಿ ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀ ಜನಾಂಗಕ್ಕೆ ಸ್ಫೂರ್ತಿಪ್ರದವಾಗಿದೆ.

"ನಾತಾಳದಲ್ಲಿ ಹಿಂದೀಯರ ಐಕ್ಯದ ತಳಗಲ್ಲು ಕೂಡಿಸುವದು ದಕ್ಷಿಣ ಆಫ್ರಿಕೆಯಲ್ಲಿ ನನ್ನ ಮುಖ್ಯ ಗುರಿಯಾಗಿತ್ತು. ನನ್ನೀ ಗುರಿಯಲ್ಲಿ ನಾನು ಸಂಪೂರ್ಣ ಯಶಸ್ವಿಯಾದೆನೆಂದು ನನಗೆನಿಸುವುದಿಲ್ಲ. ಆದರೆ ನಾತಾಳ ಇಂಡಿಯನ್ ಅಸೋಸಿಯೇಶನ ಮತ್ತು ಎ. ಆಯ. ಕಾಜಿಯವರ ನಾತಾಳ ಇಂಡಿಯನ್ ಕಾಂಗ್ರೆಸ್‌ನ್ನು ವಿಸರ್ಜಿಸಿ ನೀವು ೧೮೯೪ ರಲ್ಲಿ ಸಂಸ್ಥಾಪಿಸಿದ ನಾತಾಳ ಹಿಂದೀ ಕಾಂಗ್ರೆಸ್ಸನ್ನು ಪುನರುಜ್ಜೀವಿಸಿರದಿದ್ದರೆ ಸದ್ಯದಲ್ಲಿ ನಮ್ಮ ಜನಾಂಗವು ನಡೆಸಿದ ವೀರ ಸಂಗ್ರಾಮವು ಅಶಕ್ಯವಾಗುತಿತ್ತು. ೧೯೪೩ ನೇ ಇಸ್ವಿಯ ಆಗಸ್ಟ ೨೪ಕ್ಕೆ ಇದನ್ನು ಕಾರ್ಯರೂಪದಲ್ಲಿ ತರಲಾಯಿತು. ಮತ್ತು ಆಗಿನಿಂದ ನಾತಾಳದ ಹಿಂದೀಯರ ಒಂದೇ ರಾಜಕೀಯ ಸಂಸ್ಥೆ ಅಸ್ತಿತ್ವದಲ್ಲಿದೆ.

"ದಕ್ಷಿಣ ಆಫ್ರಿಕೆಯ ಪರಿಸ್ಥಿತಿ ತೊಡಕಿನದಾಗಿದೆ. ರಾಜನೀತಿಯ ಸಂಪ್ರದಾಯಬದ್ಧನಾದ್ದರಿಂದ ನಾನು ಮಾತಾಡುವಂತಿಲ್ಲ. ನಾನು ದಕ್ಷಿಣ ಆಫ್ರಿಕೆಯಿಂದ ಕಳಿಸಿದ ವರದಿಗಳಲ್ಲಿ ಮೂರು ವರುಷಗಳಲ್ಲಿನ ಅಲ್ಲಿನ ರಾಜಕೀಯ ಪರಿಸ್ಥಿತಿಯ ಸಂಪೂರ್ಣ ಚಿತ್ರ ಕೊಡಲಾಗಿದೆ. ಆದರೆ ಅಂತರ್ ರಾಷ್ಟ್ರೀಯ ಬಾಂಧವ್ಯದ ನೀತಿಗನುಸಾರವಾಗಿ ಅವನ್ನು ಪ್ರಸಿದ್ಧಿಸುವಂತಿಲ್ಲ.

"ನಮ್ಮ ಮಾತೃಭೂಮಿಯ ಒಡೆಯರು ನಾವಾಗುವ ವರೆಗೆ ಮತ್ತು ಹಿಂದುಸ್ತಾನವು ಸ್ವತಂತ್ರವಾಗುವ ವರೆಗೆ ದಕ್ಷಿಣ ಆಫ್ರಿಕೆಯಲ್ಲಿಯ ನಮ್ಮ ಕಷ್ಟನಷ್ಟಗಳ ನಿವಾರಣೆಯಾಗುವದು ಶಕ್ಯವಿಲ್ಲೆಂಬ ನಿರ್ಣಯಕ್ಕೆ ನಾನು ಬಂದಿರುವೆನು."

ಮೇಲಿನ ಪತ್ರ ಮುಟ್ಟಿತೆಂದು ನಾನು ಬರೆದ ಉತ್ತರಕ್ಕೆ ಪ್ರತಿಯಾಗಿ ಸರ್ ಶಾಫತ ಅಹಮ್ಮದಖಾನ ಮತ್ತೆ ಹೀಗೆ ಬರೆಯುತ್ತಾರೆ

"ದಕ್ಷಿಣ ಆಫ್ರಿಕೆಯಿಂದ ನಾನು ಮರಳಿ ಬಂದಂದಿನಿಂದ ದಕ್ಷಿಣ ಆಫ್ರಿಕೆಯಲ್ಲಿಯ ನನ್ನ ಭಾಷಣಗಳ ಕರಡುಗಳನ್ನು ಸಿದ್ಧ ಮಾಡುವಲ್ಲಿ ನಾನು ತೊಡಗಿರುವೆನು. ಮತ್ತು ನನ್ನ ಪುಸ್ತಕದಲ್ಲಿ ಒಂದು ಪ್ರಕರಣವನ್ನು ಜೋಡಿಸಿರುವೆನೆಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀ ಜನಾಂಗದ ಇತಿಹಾಸದ ಸಂಬಂಧದಲ್ಲಿ ಬರೆದ ಈ ಪುಸ್ತಕ ಬೇಗನೆ ಪ್ರಸಿದ್ಧವಾಗಲಿದೆ. ನೀವು ಅಲ್ಲಿ ಮಾಡಿದ ಕಾರ್ಯ ಮತ್ತು

–೧೦ನೇ ಪುಟಕ್ಕೆ

ವಾರದ ಪತ್ರ

ಆಕಾಶದ ಅರಮನೆಗಳು ಅವುಗಳನ್ನು ಕಟ್ಟುವವರ ತಲೆಯ ಮೇಲೆಯೆ ಜರಿದು ಬಿದ್ದು ಸೇಡು ತೀರಿಸಿಕೊಳ್ಳುತ್ತವೆ. ಕಲ್ಪನಾ ರಾಜ್ಯದಲ್ಲಿ ತತ್ವಜ್ಞಾನಿಗಳೂ ವೈಜ್ಞಾನಿಕರೂ ಗಣಿತ ಶಾಸ್ತ್ರಿಗಳೂ ಸೇರಿ ಹೊಲೆಗೇಡು ಮಾಡಿಬಿಟ್ಟರು ವೈಜ್ಞಾನಿಕರು ಹಗಲೆಲ್ಲ "ಸವತೇಕಾಯಿಯಿಂದ ಸೂರ್ಯರಶ್ಮಿಯ ಸತ್ವದ ಅರ್ಕ ತೆಗೆಯುವದರಲ್ಲಿ"ಯೋ "ಹೊಟ್ಟಿನಿಂದ ಧಾನ್ಯಗಳನ್ನು ಬೆಳೆಸುವದರಲ್ಲಿ"ಯೋ ಕಾಲಕ್ಷೇಪ ಮಾಡುತಿದ್ದರೆ, ತತ್ವಜ್ಞಾನಿಗಳು ಹೊಸ ಹೊಸ ದಾರ್ಶನಿಕ ಸಂಪ್ರದಾಯಗಳನ್ನು ಕೇಳಿದಾಗ ತಯಾರಿಸಿ ಕೊಡುವ ಪ್ರಯತ್ನದಲ್ಲಿ ಶಬ್ದಯಂತ್ರಗಳ ಸೃಷ್ಟಿಯಲ್ಲಿ ತಗಲಿರುಳು ದುಡಿಯುತಿದ್ದರು ಗಣಿತ ಶಾಸ್ತ್ರಿಗಳು ಗ್ರಹತಾರೆಗಳ ಚಾರವನ್ನು ಗುಣಿಸಿ ಜಗತ್ತಿನಲ್ಲಿ ಪ್ರಳಯದ ಸಂಭಾವ್ಯತೆಯನ್ನು ದುಗ್ರಾರ್ಹ್ಯವಾದ ಊಹಾಪೋಹಗಳಿಂದ ಕಲ್ಪಿಸಿಕೊಂಡು ತಮ್ಮ ಲೆಕ್ಕಗಳಿಂದ ತಾವೇ ಕಂಗೆಟ್ಟು ಭಯ ಭ್ರಾಂತರಾಗುತಿದ್ದರು. ಇವೆಲ್ಲವುಗಳ ಒಟ್ಟು ಪರಿಣಾಮವಾಗಿ ಕಲ್ಪನಾರಾಜ್ಯದಲ್ಲಿ ನೆಟ್ಟಗೆ ನಿಂತ ಒಂದು ಗೋಡೆಯಾಗಲಿ ಹರುಕು-ಮುರುಕಲ್ಲದ ಒಂದು ಕಟ್ಟಡವಾಗಲಿ ಉಳಿಯದಂತಾಗಿತ್ತು. ಗಾಂಧೀಜಿ ಕಲ್ಪನಾರಾಜ್ಯಗಳನ್ನು ಕಟ್ಟುವವರಲ್ಲ. ತಮ್ಮ ಆಶ್ರಮವನ್ನು ಕಲ್ಪನಾರಾಜ್ಯವಾಗಿ ಮಾಡಬಾರದೆಂದ ಅವರು ಹಟ ತೊಟ್ಟಿದ್ದಾರೆ. ಅವರು ಕೈಕೊಂಡ ಈ ಕಾರ್ಯ ಸುಲಭವಾದುದೇನೂ ಅಲ್ಲ. "ರಾಜಕಾರಣ ನನಗೆ ನೀರು ಕುಡಿಸಂತೆ" ಎಂದು ಅವರೊಮ್ಮೆ ಹೇಳಿದ್ದರು. "ಅದರ ಬಗ್ಗೆ ನಾನು ನಿಶ್ಚಿಂತನಾಗಿತ್ತೇನೆ. ಏಕಂದರೆ ನಾನು ಅನಾಸಕ್ತಿಯ ತೀಕ್ಷ್ಣ ಖಡ್ಗದಿಂದ ರಾಜಕಾರಣದ ಅಡವಿಯಲ್ಲಿ ದಾರಿ ಸವರಿಕೊಳ್ಳಬಲ್ಲೆ. ಆದರೆ ಆಶ್ರಮ ಮಾತ್ರ ನನ್ನನ್ನು ಹಿಂಡಿ ಹಿಪ್ಪೆ ಮಾಡುತ್ತದೆ. ಅಲ್ಲಿ ಹುಟ್ಟುವ ಸಮಸ್ಯೆಗಳಿಂದ ಯಾರ ತಲೆಯಾದರೂ ರಾತ್ರಿ ಬೆಳಗಾಗುವದರೊಳಗೆ ನರೆತು ಹೋಗಬಹುದು." ಅದರೂ ಆಶ್ರಮಕ್ಕಾಗಿ ಅವರಲ್ಲಿರುವ ಮೋಹ ಅದಮ್ಯವಾದುದು. "ಯಾಕೋ ಕಾಣೆ" ಅವರೊಮ್ಮೆ ಹೇಳಿದ್ದರು, "ನಾನು ಯಾವುದೇ ಸಂಸ್ಥೆಯನ್ನು ಮುಟ್ಟಿದರೂ ಅದು ಆಶ್ರಮವಾಗಿ ಪರ್ಯವಸಾನ ಹೊಂದುತ್ತದೆ. ಇದು ಹೊರತು ಇನ್ನೇನೂ ನಾನು ಮಾಡಲಾರೆನೆಂದು ತೋರುತ್ತದೆ." ಕಾರಣ ಹುಡುಕುತ್ತ ಬಹಳ ದೂರ ಅಲೆಯಬೇಕಾಗಿಲ್ಲ. ಸತ್ಯ, ಅಹಿಂಸೆಗಳು ಅವರ ಪಾಲಿಗೆ ಗರ್ಭಗುಡಿಯ ಏಕಾಂತದಲ್ಲಿ ಪಾಲಿಸುವ ವ್ರತವಲ್ಲ. ಮಾನವ ಜಾತಿಗೆ ನಿತ್ಯಜೀವನದಲ್ಲಿ ಉಪಯೋಗಕ್ಕೆ ಬೀಳಬೇಕಾದ ವಸ್ತುಗಳವು.

ಕವಿಯೊಬ್ಬ ಅರ್ತನಾಗಿ ಹಾಡಿಕೊಂಡಿದ್ದಾನೆ: "ತಾರೆಗಳ ಮಿನುಗಿನಲ್ಲಿ"ಯೂ "ಹೊಲಗಳ ಹೂ ಬಿಡುವಲ್ಲಿ"ಯೂ ಪರಮಾತ್ಮನನ್ನು ಕಾಣಬಲ್ಲೆ. ಆದರೆ "ಮಾನವರನ್ನೂ ಜಗತ್ತನ್ನೂ ಅವನು ಆಡಿಸುವ ರೀತಿಯಲ್ಲಿ" ಅವನನ್ನು ಕಾಣಲಾರೆ, ಎಂಬದಾಗಿ. ಸತ್ಯ ಅಹಿಂಸೆಗಳ ಆರಾಧಕರಾದ ಗಾಂಧೀಜಿ ಮಾತ್ರ ಸೇವಾಗ್ರಾಮದ ಪುಟ್ಟ ಜಗತ್ತಿನಲ್ಲಿಯೆ ಸತ್ಯ ಅಹಿಂಸಾರೂಪಿಯಾದ ತಮ್ಮ ಪರಮಾತ್ಮನನ್ನು ತಾವು ಕಾಣಬೇಕು, ಇಲ್ಲದಿದ್ದರೆ ಅವನನ್ನು ಕಾಣುವದೇ ಅಸನಳ ಎಂದು ಬಗೆಯುವವರು. ಅದು ಅವರ ಆಧ್ಯಾತ್ಮಿಕ ಪ್ರಯೋಗಶಾಲೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ತಮ್ಮ ಸುತ್ತಮುತ್ತಣ ವಾತಾವರಣದಿಂದಲೇ ತಮ್ಮ ಯೋಗ್ಯತೆಯನ್ನು ಅಳೆಯಬೇಕೆಂದು, ಗಾಂಧಿಜಿ ಹೇಳುತ್ತಾರೆ. "ನನ್ನ ಸುತ್ತಮುತ್ತ ಇರುವ ಜನರಲ್ಲಿ ಎಷ್ಟು ಮಟ್ಟಿಗೆ ಅವುಗಳು ಪ್ರತಿಬಿಂಬಿಸಿವೆಯೋ ಅಷ್ಟು ಮಟ್ಟಿಗೆ ಮಾತ್ರ ನನ್ನ ಸತ್ಯ ಅಹಿಂಸೆಗಳು ಫಲಿಸಿವೆಯೆಂದು ತಿಳಿದುಕೊಳ್ಳಬೇಕು" ಎಂದು ಅವರ ಹೇಳಿಕೆ ಸ್ವಾಭಾವಿಕವಾಗಿ, ಅವರ ಜಟಿಲ ಸಮಸ್ಯೆಗಳನ್ನು ಅವರು ಹುಡುಕಬೇಕಾಗುತ್ತದೆ.

ಒಂದು ಕಠಿನ ಪ್ರಕರಣ

ಕೆಲ ತಿಂಗಳುಗಳ ವಿಯೋಗದ ನಂತರ ನಾವು ಪುನಃ ಸೇವಾಗ್ರಾಮ ಆಶ್ರಮಕ್ಕೆ ಮರಳಿದಾಗ ಒಬ್ಬ ಕಾರ್ಯಕರ್ತನ ಬುದ್ಧಿಭ್ರಮಣವಾಗಿದ್ದು ಕಂಡು ಬಂತು. ಅವನು ಮೊದಲು ಬಂದಾಗ ಅದೇ ಸ್ಥಿತಿಯಲ್ಲಿದ್ದನು. ಇದು ಎರಡನೆ ಅಭಿಯೋಗವಾಗಿತ್ತು. ಅವನು ಪೂರ್ಣ ಅಂಕೆಗೆಟ್ಟು ಹೋಗಿದ್ದನು. ಒಡನೆ ನಿರ್ಣಯ ಮಾಡಬೇಕಾಗಿ ಬಂತು. ವರ್ಧಾದ ಸಿವಿಲಸರ್ಜನರ ಸಲಹೆಯನ್ನು ಕೇಳುವದಾಯಿತು. ಸಿವಿಲ ಅಸ್ಪತ್ರೆಯಲ್ಲಿ ಅವನನ್ನು ಇರಿಸಿಕೊಳ್ಳುವದು ಸಾಧ್ಯವಿಲ್ಲ, ಆದರೆ ಜೇಲು ಅಸ್ಪತ್ರೆಯಲ್ಲಿ ಅವನ ಆರೈಕೆ ನೋಡಬಹುದು ಎಂದು ಅವರು ಹೇಳಿದರು. ಅದುದರಿಂದ ಅವನ ಸ್ವಂತ ಹಿತಕ್ಕಾಗಿಯೂ ಆಶ್ರಮವಾಸಿಗಳೆಲ್ಲರ ಹಿತಕ್ಕಾಗಿಯೂ ಅವನನ್ನು ಬಂಧನಕ್ಕೆ ಕಳಿಸುವದು. ಅವಶ್ಯವಾಯಿತು. ಗಾಂಧೀಜಿಯ ಪಾಲಿಗೆ ಇದು ಚಿಮ್ಮಟಿಗೆಯಿಂದ ತಮ್ಮ ವ್ಯಯಮಾಂಸವನ್ನು ಕಿತ್ತಷ್ಟು ನೋವನ್ನುಂಟು ಮಾಡಿತು. ಆದರೆ ಬೇರೆ ಉಪಾಯವಿದ್ದಿಲ್ಲ. ತಮ್ಮ ಉಭಯ ಸಂಕಟವನ್ನು ಅವರು ಆಶ್ರಮವಾಸಿಗಳ ಮುಂದೆ ತೋಡಿಕೊಂಡರು. "ಅವನು ಒಳ್ಳೆ ಕೆಲಸಗಾರ. ಕಳೆದ ವರ್ಷ ಅವನು ಆರೋಗ್ಯ ಹೊಂದಿದ ನಂತರ ತೋಟದ ಕೆಲಸವನ್ನು ನೋಡಿಕೊಂಡು ಆಸ್ಪತ್ರೆಯ ಲೆಕ್ಕ ಪತ್ರಗಳನ್ನು ಇಡುತಿದ್ದ. ತತ್ಪರತೆಯಿಂದ ಕೆಲಸ ಮಾಡಿ ಅದರಲ್ಲಿಯೆ ಸುಖ ಕಾಣುತಿದ್ದ. ಆ ಮೇಲೆ ಅವನಿಗೆ ಮಲೇರಿಯಾ ಹಿಡಿಯಿತು. ಇಂಜಕ್ಶನ್ ಬೇಗನೆ ಕೆಲಸ ಮಾಡುತ್ತದೆಂದು ಅವನಿಗೆ ಕ್ವಿನಾಯಿನ್ ಇಂಜಕ್ಶನ್ ಕೊಡಿಸಿದೆವು. ಈ ಇಂಜಕ್ಶನ್ ತನ್ನ ತಲೆಗೇರಿಬಿಟ್ಟಿದೆ, ಅದೇ ತನ್ನ ತಲೆ ಕೆಡಲು ಕಾರಣ ಎಂದು ಅವನೆನ್ನುತ್ತಾನೆ. ಇಂದು ಮುಂಜಾನೆ ನಾನು ಕೋಣೆಯಲ್ಲಿ ಕುಳಿತಿದ್ದಾಗ ಅವನು ಹೊರಗೆ ಯಾತಾಯತ ಹಾಕುತ್ತ ಮುಖವಿಕಾರ ಮಾಡುತ್ತ ಅರಚಿಕೊಳ್ಳುತಿದ್ದನು. ನಾನು ಅವನ ಬಳಿಗೆ ಹೋಗಿ ಅವನ ಜತೆ ನಡೆಯ ತೊಡಗಿದೆ. ಆಗ ಅವನು ತಣ್ಣಗಾದ. ಆದರೆ ನಾನು ಅವನ ಬಳಿಯಿಂದ ಕದಲಿದಾಕ್ಷಣ ಮತ್ತೆ ಅವನು ಹಿಡಿತಗೆಟ್ಟು ಹೋಗುತಿದ್ದ. ಒಮ್ಮೊಮ್ಮೆ ಅವನು ಹಿಂಸಾಚಾರಿಯೂ ಆಗಿ ಬಿಡುತ್ತಾನೆ. ಯಾರು ಹೇಳಿದರೂ ಕಿವಿಯ ಮೇಲೆ ಹಾಕಿಕೊಳ್ಳುವದಿಲ್ಲ. ಅದ್ದರಿಂದ ಅವನನ್ನು ಸೆರೆಮನೆಗೆ ಕಳಿಸಬೇಕಾಯಿತು.

"ನಮ್ಮ ಕಾರ್ಯಕರ್ತರಲ್ಲೊಬ್ಬನನ್ನು ಸೆರೆಮನೆಗೆ ಕಳಿಸಬೇಕಾದುದಕ್ಕೆ ನನಗೆ ಸ್ವಭಾವಿಕವಾಗಿ ಬಹಳ ಕೋಪವಾಗುತ್ತದೆ. ಯಾರಾದರೂ ನನ್ನನ್ನು ಮೂದಲಿಸಬಹುದು: 'ಸರ್ವರೋಗಹಾರಿಯೆಂದು ನೀವು ಆಧಿಸುತ್ತಿರುವ ರಾಮನಾಮದ ಪಾಡೇನು?' ಈ ಸೋಲಿನ ಮಧ್ಯದಲ್ಲಿಯೂ ನನ್ನ ವಿಶ್ವಾಸ ಅಕ್ಷುಣ್ಣವಾಗಿ ಉಳಿದಿದೆಯೆಂದು ಇಲ್ಲಿ ಸಾರಿ ಹೇಳುತ್ತೇನೆ. ರಾಮನಾಮಕ್ಕೆ ಎಂದೆಂದೂ ಸೋಲಿಲ್ಲ ಸೋಲು ಬಂದರೆ ನಮ್ಮಲ್ಲೆ ಯಾವುದೊ ದೋಷವಿದೆಯೆಂದು ತಿಳಿದುಕೊಳ್ಳಬೇಕು. ಸೋಲಿನ ಕಾರಣವನ್ನು ನಾವು ನಮ್ಮೊಳಗೇ ಹುಡುಕಬೇಕು."

ಅಹಿಂಸೆ ಮತ್ತು ಸ್ವಚ್ಛತೆ

ಶುಚಿತ್ವ, ಸ್ವಚ್ಛತೆಗಳು ನಾಗರಿಕ ಜೀವನದ ಮೂಲಭೂತ ನಿಯಮಗಳಾಗಿರುವುದರಿಂದ ಆಶ್ರಮದಲ್ಲಿ ಅವುಗಳಿಗೆ ಅತ್ಯಂತ ಮಹತ್ವ ಕೊಡಲಾಗಿದೆ. ಆದರೆ ಇಲ್ಲಿಗೆ ಎಲ್ಲ ಬಗೆಯ ಜನರೂ ಬರುತ್ತಾರೆ. ಯಾವನೋ ಒಬ್ಬನು, ಬಹಳ ಮಾಡಿ ಹೊಸಬನಿರಬಹುದು, ಅಜ್ಞಾನದಿಂದಲೋ ಅಜಾಗ್ರತೆಯಿಂದಲೋ ಪಾಯಖಾನೆಯನ್ನು ಹೊಲಸು ಮಾಡಿ ಬಿಟ್ಟಿದ್ದನು. ಅದನ್ನು ಗಾಂಧೀಜಿಯ ಗಮನಕ್ಕೆ ತರಲಾಯಿತು. ಅದರಿಂದ ಅವರಿಗೆ ದುಃಖವಾಯಿತು. ಸಮಾಜದಲ್ಲಿ ಯಾರೊಬ್ಬನು ತಪ್ಪು ಮಾಡಿದರೂ ಅದು ಎಲ್ಲರಿಗೂ ಬಾಧಕವಾಗುತ್ತದೆ. ಅದುದರಿಂದ ಉಪಯೋಗಿಸಿದ ನಂತರ ಪಾಯಖಾನೆಯನ್ನು ಸ್ವಚ್ಛವಾಗಿಟ್ಟು ಹೋಗುವದು ಯಾವಾಗಲೂ ಪ್ರತಿಯೊಬ್ಬನ ಕರ್ತವ್ಯ. ಯೋಗ್ಯವಾಗಿ ಜಾಗ್ರತೆ ತೆಗೆದುಕೊಂಡರೆ ಪಾಯಖಾನೆಯಿಂದ ದುರ್ಗಂಧವಾಗಲಿ ಸೊಳ್ಳೆ ನೊಣಗಳಾಗಲಿ ಹುಟ್ಟಲಾರವು. ಮಲವನ್ನು ಕಂದಕಗಳಲ್ಲಿ ಒಟ್ಟುವದೇ ನೊಣ ಸೊಳ್ಳೆಗಳ ಹೆಚ್ಚಳಕ್ಕೆ ಕಾರಣವೆಂದು ಕೆಲವರು ದೂರುವದುಂಟು. ಆದರೆ ಗಾಂಧೀಜಿ ಇದನ್ನು ಒಪ್ಪಿಕೊಳ್ಳುವದಿಲ್ಲ. ಯೋಗ್ಯವಾಗಿ ಎಚ್ಚರಿಕೆ ವಹಿಸಿದರೆ ಕಂದಕ ಪಾಯಖಾನೆಗಳೂ ಪೂರ್ಣ ಸುರಕ್ಷಿತವಾಗಿರುತ್ತವೆ.

ಬೆಂಗಳೂರಲ್ಲೊಂದು ಹೋಟೆಲಿನಲ್ಲಿ ಡಾ. ಫೌಲರರು ಒಂದು ಕೌತುಕದ ಕ್ರಮವನ್ನು ಉಪಯೋಗಿಸಿದ್ದಾರೆಂದು ಗಾಂಧೀಜಿ ತಿಳಿಸಿದರು. ಅವರು ಒಂದು ಟಾಕಿಯಲ್ಲಿ ಮಲವನ್ನು ಸಂಗ್ರಹಿಸುತಿದ್ದರು. ಘನ ಮತ್ತು ದ್ರವ ಪದಾರ್ಥಗಳನ್ನು ದಿನದಿನವೂ ಸರಿಯಾಗಿ ಕದಡಿ ಸಣ್ಣ ರಾಶಿಯಾಗಿ ಹೊಯ್ದು ಅದರ ಮೇಲೆ ಒಣ ಮಣ್ಣು ಮುಚ್ಚುತಿದ್ದರು. ಈ ದಿನ್ನೆಯಲ್ಲಿ ಬರಿ ಮಣ್ಣು ಮಾತ್ರ ಇದೆಯೋ ಇನ್ನೇನಾದರೂ ಇದೆಯೋ ಎಂಬ ಸುಳಿವು ಯಾರಿಗೂ ಹತ್ತುವಂತಿದ್ದಿಲ್ಲ. ಯೋಗ್ಯ ಪರಿವರ್ತನೆಯ ನಂತರ ಅದನ್ನು ಗೊಬ್ಬರವೆಂದು ಮಾರಲಾಗುತಿತ್ತು. ಅದು ಬೇರಾವ ಗೊಬ್ಬರದಷ್ಟೇ ಶುದ್ಧವಾಗಿ ಕಾಣುತಿತ್ತು. ಸೊಳ್ಳೆ ನೊಣಗಳು ಹುಟ್ಟದಂತೆ ಮಾಡುವದು ಸಾಧ್ಯವಾಗದಿದ್ದರೆ ಜಡ್ಡು-ಪಿಡುಗುಗಳು ಒದಗೀಯುತೀರುವವು. ನೊಣ ಬಂದು ಕುಳಿತ ಆಹಾರ ಮಾನವನ ಉಪಯೋಗಕ್ಕೆ ಅನರ್ಹವೆಂದು ಬಗೆಯತಕ್ಕದ್ದು ಅದನ್ನು ತೆಗೆದೊಗೆಯಬೇಕು. ಆದರೆ ನಮ್ಮದು ಬಡ ದೇಶ. ಇಲ್ಲಿ ಬಹುಸಂಖ್ಯಾಕ ಜನರು ಆಹಾರವನ್ನು ಒಗೆಯುವಷ್ಟು ಧನಿಕರಾಗಿಲ್ಲ ಅದುದರಿಂದ ಅಹಿಂಸಾದೃಷ್ಟಿಯಿಂದ ಸೊಳ್ಳೆಗಳು ಹೆಚ್ಚದಂತೆ ನೋಡಿಕೊಳ್ಳುವದು ನಮ್ಮೆಲ್ಲರ ಕರ್ತವ್ಯ, ಎಂದು ಗಾಂಧೀಜಿ ತಿಳಿಸಿದರು.

ಬಾಹ್ಯ ನೈರ್ಮಲ್ಯ ಅಂತರಂಗದ ನೈರ್ಮಲ್ಯಕ್ಕೆ ಮೊದಲ ಮೆಟ್ಟಲು ಮಾತ್ರ. ಒಳಗಿರುವದು ಹೊರಗಿರುವದಕ್ಕಿಂತಲೂ ಭಯಾನಕವಾದುದು. "ನಾವು ಮತಿಯಲ್ಲಿಯೂ ಕೃತಿಯಲ್ಲಿಯೂ ಹದಿನಾರಾಣೆ ನಿರ್ಮಲವಾಗಿರಬೇಕು. ಇಲ್ಲದಿದ್ದರೆ ಮನುಷ್ಯ ಪಶುಗಿಂತಲೂ ಕೀಳಾಗುತ್ತಾನೆ. ಏಕಂದರೆ ಪಶುವಾದರೂ ಒಂದು ಉಪಯುಕ್ತ ಪ್ರಾಣಿ. ಅದು ತನ್ನ ಸ್ಥಾನದಲ್ಲಿದ್ದರೆ ನಮ್ಮ ಗೌರವಕ್ಕೆ ಅರ್ಹವಾದುದು. ಆಶುಚಿ ಮನುಷ್ಯನು ಸಭ್ಯ ಸಮಾಜದಲ್ಲಿರಲು ಅನಿಷ್ಟನು.

ಹಳ್ಳಿಗಳ ಶುಚಿತ್ವದ ಪ್ರಶ್ನೆ

ಸೇವಾಗ್ರಾಮವೊಂದು ಅನಾರೋಗ್ಯಕರ ಸ್ಥಳವೆಂಬುದು ಗಾಂಧೀಜಿಗೆ ಎಂದಿನಿಂದಲೂ ಚಿಂತೆಗೆ ಕಾರಣವಾಗಿದೆ ಅದು ಜವಳು ಭೂಮಿಯಲ್ಲಿರುವ ಹಳ್ಳಿ. ಸೆಲೆನೆಲದಡಿಯ ನೀರುಮಳೆಗಾಲದಲ್ಲಿನೆಲದ ಮೇಲಿನ ವರೆಗೂ ಏರಿಬಿಟ್ಟು ಮಲವನ್ನು ಸ್ವಚ್ಛ ಮಾಡುವದು, ಕುಡಿಯುವ ನೀರು ಒದಗಿಸುವದು ಮಲೆ ಜ್ವರವನ್ನು ಅಂಕೆಗೆ ತರುವದು ಮೊದಲಾದ ಸಮಸ್ಯೆಗಳನ್ನು ಕಠಿಣವಾಗಿ ಮಾಡುತ್ತದೆ. ಮಲೇರಿಯಾದ ಹಾವಳಿ ಈಚೆಗೆ ಸ್ವಲ್ಪ ಕಡಿಮೆಯಾಗಿದ್ದು ಸಾಮಾನ್ಯ ಸ್ವಾಸ್ಥ್ಯಪರಿಸ್ಥಿತಿ ಒಟ್ಟಿನ ಮೇಲೆ ಸುಧಾರಿಸಿದೆ ಅದರೂ ಸೇವಾಗ್ರಾಮವನ್ನು ಮಾದರಿ ಆರೋಗ್ಯಕರ ಗ್ರಾಮವೆಂದು ಕರೆಯಬರುವದಿಲ್ಲ ಮೊನ್ನೆ ೧೮ನೆ ತಾರೀಖಿಗೆ ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ನಿಧಿ ಯೋಜನೆಯ ವೈದ್ಯಕೀಯ ಸಲಹೆ ಮಂಡಲದ ಕಾರ್ಯದರ್ಶಿಯೂ ಸೇವಾಗ್ರಾಮ ಆಶ್ರಮ ಮತ್ತು ಹಳ್ಳಿಯ ಆರೋಗ್ಯ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿರುವ ರೆಸಿಡೆಂಟ ಡಾಕ್ಟರರಾದ ಡಾ ಸುಶೀಲಾ ನಯ್ಯರರು ಆಗಿಂದಾಗ್ಗೆ ತಮಗೆ ಸೂಚನೆ ಮಾರ್ಗದರ್ಶನಗಳನ್ನೀಯುತ್ತ ಬಂದಿದ್ದ ಡಾಕ್ಟರಗೆಳೆಯರ ಸಭೆಯೊಂದನ್ನು ಕರೆದಿದ್ದರು. ಅವರಲ್ಲಿ ಡಾ ಜೀವರಾಜ ಮೆಹತಾರು ಪ್ರಮುಖರು ಅವರ ಚಟುವಟಿಕೆಗಳು ಅನೇಕಮುಖವಾಗಿದ್ದರೂ ಯಾವಾಗಲೂ ಸೇವಾಗ್ರಾಮಕ್ಕಾಗಿ ಹೇಗಾದರೂ ಸಮಯ ದೊರಕಿಸಿಕೊಳ್ಳುತ್ತಾರೆ. ಮುಂಬಯಿಯ ಆರೋಗ್ಯಾಧಿಕಾರಿಗಳಾದ ಡಾ. ಬಿ ಸಿ. ಪಾಸಗುಪ್ತ ಮತ್ತು ಮುಂಬಯಿ ಪ್ರಾಂತದ ಮಲೆಜ್ವರ ತಜ್ಞರಾದ ಡಾ. ವಿಶ್ವನಾಥನ್-ಇವರಿಬ್ಬರ ಸಹಾಯದ ಉಪಯೋಗವನ್ನೂ ಅವರು ದೊರಕಿಸಿಕೊಟ್ಟಿದ್ದಾರೆ. ಮಧ್ಯಪ್ರಾಂತದ ಹೊಸ ಸಾರ್ವಜನಿಕ ಆರೋಗ್ಯ ಮಂತ್ರಿಗಳಾದ ಡಾ ಪಸನರು ಸಾರ್ವಜನಿಕ ಆರೋಗ್ಯಾಧಿಕಾರಿಗಳ ಒಂದು ಗುಂಪನ್ನೇ ಕಟ್ಟಿಕೊಂಡು ಬಂದು ಸೇವಾಗ್ರಾಮವನ್ನೂ ಅದರ ಸುತ್ತಮುತ್ತಲ ಪ್ರದೇಶಗಳನ್ನೂ ಪರೀಕ್ಷಿಸಿದರು.

ನಮ್ಮ ಪ್ರಾಂತಿಕ ಆಡಳಿತೆಗಳ ಸಾರ್ವಜನಿಕ ಕಾಮಗಾರಿಖಾತೆಗೂ ಆರೋಗ್ಯ ಖಾತೆಗೂ ಸಂಬಂಧವಿಲ್ಲದಿರುವದರ ಫಲವಾಗಿ, ವರ್ಧಾ-ಸೇವಾಗ್ರಾಮಗಳ ನಡುವಣ ಪಕ್ಕಾ ರಸ್ತೆಯ ಎರಡೂ ಮಗ್ಗಲಿಗೆ ಜಿಲ್ಹಾ ಬೋರ್ಡು ಸಣ್ಣ ದೊಡ್ಡ ಒರತೆಹೊಂಡಗಳ ಒಂದು ಸರಪಳಿಯನ್ನೇ ಇರಗೊಡಿಸಿಬಿಟ್ಟಿದೆ. ಇಷ್ಟು ಕಾಲ ದೂರ ದೃಷ್ಟಿ ತೋರಿ ಪೂರ್ಣ ಯೋಜನೆಯನ್ನು ಮಾಡಿದ್ದರೆ ಈ ಹೊಂಡಗಳ ಸರಪಳಿಯನ್ನು ನೀರು ಹರಿಯುವ ಚರಂಡಿಯನ್ನಾಗಿ ಜೋಡಿಸಿ ಇಮ್ಮಡಿ ಉದ್ದೇಶವನ್ನು ಸಾಧಿಸಬಹುದಾಗಿತ್ತು. ಆದರೆ ಈಗಿರುವ ಸ್ಥಿತಿಯಲ್ಲಿ ಈ ಹೊಂಡಗಳು ರೋಗಾಣುಗಳನ್ನು ಸಾಕುವ ಆಗರಗಳಾಗಿವೆ. ಅವುಗಳಲ್ಲಿ ತುಂಬಿ ನಿಲ್ಲುವ ನೀರು ಕೊಳೆತು ಸೊಳ್ಳೆಗಳು ಹುಟ್ಟುವವು. ಇದಲ್ಲದೆ ಅನೇಕ ಹಳ್ಳಿಗಳೂ ದೊಲಸು ನೀರಿನಿಂದ ತುಂಬಿ ತಿಂತಿಕುವವು. ಅಲ್ಲಿಯ ಭೂಮಿ ಹತ್ತಿ ಬೆಳೆಯುವ ಕರಿ ನೆಲ. ಅದು ಮಳೆಗಾಲ ಮುಗಿದ ಮೇಲೆ ಬಿಸಿಲಿಗೆ ಒಣಗಿ ಬಿರಿಯುತ್ತದೆ. ಅದರ ಎಡೆಗಳಲ್ಲಿ ನೀರು ನಿಂತು ಸೊಳ್ಳೆಗಳ ನೆಲೆಯಾಗುತ್ತದೆ.

ಡಾಕ್ಟರರು ಮಲೆಜ್ವರ ನಿರೋಧನಕ್ಕಾಗಿ ಕೆಲ ಸೂಚನೆಗಳನ್ನು ಮಾಡಿದರು. ಹಳ್ಳಿಯಲ್ಲಿ ಮನೆಗಳಿಗೆಲ್ಲ ಡಿ. ಡಿ. ಟಿಯನ್ನು ಸಿಂಪಡಿಸುವದು ಅವುಗಳಲ್ಲೊಂದು. ಹಳ್ಳಿಗಳನ್ನು ವ್ಯವಸ್ಥಿತಗೊಳಿಸುವ ಮತ್ತು ಅವುಗಳ ಕೆಸರು ತೆಗೆಯುವ ಕೆಲಸಗಳನ್ನು ಪಡಭೂಮಿಯನ್ನು ಸಾಗುವಳಿಗೆ ತರುವ ಯೋಜನೆಯ ಅಂಗವಾಗಿ ಸಂಬಂಧಪಟ್ಟ ಖಾತೆಯವರು ಕೈಕೊಳ್ಳಬಹುದೆಂದೂ ಸೂಚಿಸಲ್ಪಟ್ಟಿತು.

ಮಲವನ್ನು ಬಳಿಯುವ ಸಮಸ್ಯೆಯ ವಿಷಯದಲ್ಲಿ, ಭಂಗಿಗಳೆಂಬ ಒಂದು ವರ್ಗವನ್ನೆ ಇಲ್ಲದಂತೆ ಮಾಡಬೇಕೆಂಬುದು ನಮ್ಮ ಇಚ್ಛೆಯಾಗಿದ್ದರೆ ಸೆಪ್ಟಿಕ್ ಟ್ಯಾಂಕುಗಳನ್ನುಪಯೋಗಿಸುವದೊಂದೇ ಉಪಾಯವೆಂದು ಅವರ ಅಭಿಪ್ರಾಯವಾಗಿತ್ತು. ಜಾತ್ರೆ ಉತ್ಸವ ಮೊದಲಾದ ಅವಸರದ ಪ್ರಸಂಗಗಳಲ್ಲಿ ಆಪತ್‌ಧರ್ಮವೆಂದು ಹೊರತು ಕಂದಕದ ಪಾಯಖಾನೆಗಳನ್ನು ಅವರು ಬಲವಾಗಿ ವಿರೋಧಿಸಿದರು. ವಾದದಲ್ಲಿ ಕಂದಕ ಪಾಯಖಾನೆಗಳು ಎಷ್ಟೇ ಉಪಯುಕ್ತವಾಗಿದ್ದರೂ ಆಚರಣೆಯಲ್ಲಿ ಅವು ನೊಣಗಳಿಗೆ ಆಶ್ರಯವಾಗುವದು ಖಂಡಿತ. ಸೇವಾಗ್ರಾಮದಂಥ ನೆಲದಡಿಯ ಸೆಲೆಗಳು ಬಹಳ ಮೇಲಿರುವ ಪ್ರದೇಶದಲ್ಲಿ ಇದರಿಂದ ನೀರು ಅಶುದ್ಧವಾಗುವದೂ ಅನಿವಾರ್ಯ. ಮಲ ಮತ್ತು ಸೆಗಣಿಯ ವ್ಯವಸ್ಥೆಯ ವಿಷಯದಲ್ಲಿ ಅದನ್ನು ಗೊಬ್ಬರವಾಗಿ ಮಾರ್ಪಡಿಸಬೇಕೆಂದು ಅವರ ಸೂಚನೆಯಾಗಿತ್ತು. ಶುದ್ಧ ನೀರಿನ ಪೂರೈಕೆಗಾಗಿ ಸಂರಕ್ಷಿತ ಬಾವಿಗಳನ್ನು ತೋಡಿ ಸುರಕ್ಷಿತವಲ್ಲದ ನೀರಿನಿಂದ ಕೂಡಿದ ಇತರ ಎಲ್ಲ ಬಾವಿಗಳನ್ನು ಮುಚ್ಚಿಸಿಬಿಡಬೇಕೆಂದು ಅವರು ಸಲಹೆ ಕೊಟ್ಟರು.

–೧೦ನೇ ಪುಟಕ್ಕೆ

ನಾನು ಮಂತ್ರಿಯಾಗಿದ್ದರೆ

ಹಳ್ಳಿಯ ಕೈಗಾರಿಕೆ ಮತ್ತು ಮೂಲ ಶಿಕ್ಷಣ ಇವುಗಳ ಸಂಬಂಧವಾಗಿ ಪುಣೆಯಲ್ಲಿ ತಾ. ೨೯ ರಿಂದ ೩೧ ರ ವರೆಗೆ ಸಂಬಂಧಪಟ್ಟ ಮಂತ್ರಿಗಳೊಡನೆ ನಾನು ನಡೆಸಿದ ಮಾತುಕತೆಗಳ ಫಲವಾಗಿ ಬಹಳ ಪತ್ರವ್ಯವಹಾರವೂ ಖಾಸಗಿ ಚರ್ಚೆಗಳೂ ಉಂಟಾಗಿವೆ. ಈ ಪತ್ರವ್ಯವಹಾರ, ಚರ್ಚೆಗಳಲ್ಲಿ ಹೆಚ್ಚಿನ ಅಂಶವನ್ನು, ಸ್ವಾಭಾವಿಕವಾಗಿ, ಖಾದಿಯ ಪ್ರಶ್ನೆಯೇ ಆವರಿಸಿದೆ. ಈ ಪ್ರಶ್ನೆಯಲ್ಲಿ ಆಸಕ್ತಿಯುಳ್ಳ ಪ್ರಾಂತಿಕ ಸರಕಾರಗಳಿಗೂ ಇತರರಿಗೂ ದಾರಿದೋರುವ ಸಲುವಾಗಿ ನಾನು ಈ ಕೆಳಗೆ ನನ್ನ ವಿಚಾರಗಳನ್ನು ವಿವರಿಸುತ್ತೇನೆ.

ಕಳೆದ ಎಪ್ರಿಲ ೨೮ ರ "ಹರಿಜನ"ದಲ್ಲಿ ನಾನು ಬರೆದ ಟಿಪ್ಪಣಿಯು ಕಡೆಗೆ ಓದುಗರ ಗಮನವನ್ನು ಸೆಳೆಯಬಯಸುತ್ತೇನೆ. ಅಗ ನಾನು ಉಲ್ಲೇಖಿಸಿದ ನನ್ನ ಅಭಿಪ್ರಾಯಗಳು ಈಗಲೂ ಹಾಗೆಯೆ ಉಳಿದಿವೆ. ಒಂದು ಸಂಗತಿ ಮಾತ್ರ ಗುಸುಗೊಂದಲಕ್ಕೆ ಕಾರಣವಾಗಿದೆ. ಕೆಲ ಗೆಳೆಯರು ಆ ಟಿಪ್ಪಣಿಯಲ್ಲಿ ಬಲವಂತದ ಛಾಯೆಯನ್ನು ಕಂಡಿದ್ದಾರೆ. ಈ ಸಂದಿಗ್ಧತೆಗಾಗಿ ನಾನು ವಿಷಾದಪಡುವೆ. ಜನಪ್ರತಿನಿಧಿ ಸರಕಾರಗಳು, ತಾವು ಬಯಸಿದರೆ, ಏನೇನು ಮಾಡಬಲ್ಲವೆಂಬ ಪ್ರಶ್ನೆಗೆ ನಾನು ಅಲ್ಲಿ ಉತ್ತರ ಕೊಟ್ಟಿದ್ದೆ. ಅಂಥ ಸರಕಾರಗಳು ಹೊರಡಿಸುವ ನೋಟೀಸುಗಳು ಕೂಡ ಬಲವಂತದ ಆಜ್ಞೆಗಳೆನಿಸಲಾರವೆಂದು ನಾನು ಗ್ರಹಿಸಿಕೊಂಡಿದ್ದೆ. ಇದು ಅಕ್ಷಮ್ಯವಲ್ಲವೆಂದು ನನ್ನ ಭಾವನೆ. ಏಕೆಂದರೆ ಯಾವುದೊಂದು ನಿಜವಾಗಿ ಪ್ರಾತಿನಿಧಿಕವಾದ ಸರಕಾರ ಕೈಕೊಂಡ ಕ್ರಮಗಳೆಲ್ಲ ಮತದಾರರ ಸಮ್ಮತಿಯಿದ್ದಂತೆಯೆ ಎಂದು ತಿಳಿದುಕೊಳ್ಳಬೇಕು. ಮತದಾರರೆಂದರೆ, ಯಾದಿಯಲ್ಲಿ ಹೆಸರಿರಲಿ ಇಲ್ಲದಿರಲಿ, ಎಲ್ಲ ಜನತೆಯೆಂದು ಅರ್ಥವಾಗುತ್ತದೆ. ಈ ಹಿನ್ನೆಲೆಯನ್ನಿಟ್ಟುಕೊಂಡೇ ನಾನು, ಇಂಥ ನಿರ್ದಿಷ್ಟ ತಾರೀಕಿನ ನಂತರ ಹಳ್ಳಿಗರಿಗೆ ಗಿರಣಿ ಬಟ್ಟೆಯನ್ನು ಒದಗಿಸಲಾಗುವದಿಲ್ಲವೆಂದೂ ಅದರಿಂದ ತಮ್ಮ ಬಟ್ಟೆಯನ್ನು ತಾವೇ ತಯಾರಿಸಿಕೊಳ್ಳಲು ಅದಕ್ಕೆ ಮೊದಲೇ ಹಳ್ಳಿಗರು ಸಿದ್ಧರಾಗಬೇಕೆಂದೂ ಸರಕಾರಗಳು ನೋಟೀಸು ಹೊರಡಿಸಬೇಕೆಂದು ಸೂಚಿಸಿದ್ದೆ.

ಎಪ್ರಿಲ ೨೮ ರ ನನ್ನ ಲೇಖದ ಅರ್ಥವೆಂತೇ ಇರಲಿ, ಸಂಬಂಧಪಟ್ಟವರ ಮನವಾರೆ ಸಹಕಾರವಿಲ್ಲದ ಯಾವುದೇ ಖಾದೀ ಯೋಜನೆಯನ್ನು ಸರಕಾರ ಕೈಕೊಂಡರೆ ಅದು ಸ್ವರಾಜ್ಯ ಸಂಪಾದನೆಯ ಸಾಧನವೆಂಬ ದೃಷ್ಟಿಯಿಂದ ಖಾದಿಯ ಅಂತ್ಯವಿಧಿಯೆನಿಸದಿರದು. ಹಾಗಾದರೆ ಖಾದಿಯೆಂಬುದು ಮಧ್ಯಯುಗದ ಅಜ್ಞಾನ-ದಾಸ್ಯಗಳಿಗೆ ಹೊರಳುವ ಹಾದಿಯೆಂಬ ಕೊಂಕುನುಡಿ ನಿಜವಾಗುವದು. ಆದರೆ ನನ್ನ ಅಭಿಪ್ರಾಯ ತದ್ವಿಪರೀತವಾಗಿದೆ. ಒತ್ತಾಯದ ಖಾದಿ ದಾಸ್ಯದ ಚಿಹ್ನವಾಗಿರುವಾಗ ಮನವಾರೆ, ಅರಿತು, ಮುಖತಃ ಸ್ವಂತ ಬಳಕೆಗಾಗಿ ಸಿದ್ಧಗೊಳಿಸುವ ಖಾದಿ ನಮ್ಮ ಸ್ವಾತಂತ್ರ್ಯದ ಸಂಕೇತವೇ ಸರಿ. ಸರ್ವ ವಿಧದಲ್ಲಿಯೂ ಸ್ವಾವಲಂಬನವೆಂದಲ್ಲದಿದ್ದರೆ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲ. ಖಾದಿ ಸ್ವತಂತ್ರಮನುಷ್ಯನ ಹಕ್ಕು ಮತ್ತು ಕರ್ತವ್ಯಕರ್ಮವಾಗಿರದಿದ್ದ ಪಕ್ಷದಲ್ಲಿ ನಾನಂತೂ ಖಾದಿಯೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲಾರೆ.

ಒಬ್ಬ ಸ್ನೇಹಪರ ಟೀಕಾಕಾರನು ಕೇಳುತ್ತಾನೆ, ಈ ಪ್ರಕಾರ ಸಿದ್ಧಗೊಳಿಸಿದ ಖಾದಿ ಮಾರಾಟಕ್ಕೂ ಉಪಯೋಗಿಸಲ್ಪಡಬಹುದೇ ಎಂದು. ಮಾರಾಟ ಅದರ ಗೌಣ ಉಪಯೋಗವಾಗಿದ್ದರೆ, ಬಹುದು; ಮಾರಾಟವೇ ಅದರ ಮುಖ್ಯ ಉಪಯೋಗವಾಗಿದ್ದರೆ, ಕೂಡದು. ಮಾರಾಟದ ಖಾದಿಯಿಂದ ನಾವು ಪ್ರಾರಂಭಿಸಿದವರೆಂಬುದು ತಾತ್ಕಾಲಿಕ ಅವಶ್ಯಕತೆಯ ಪರಿಣಾಮ ಮತ್ತು ನಮ್ಮ ನೇಮಿತ ದೂರದೃಷ್ಟಿಯ ದ್ಯೋತಕ. ಅನುಭವಕ್ಕಿಂತ ದೊಡ್ಡ ಗುರುವಿಲ್ಲ. ಅದು ನಮಗೆ ಎಷ್ಟೋ ಸಂಗತಿಗಳನ್ನು ಕಲಿಸಿದೆ. ಖಾದಿಯ ಮುಖ್ಯ ಉಪಯೋಗ ಅವುಗಳಲ್ಲಿ ಮಹತ್ವದ ಒಂದು ಸಂಗತಿ. ಕಲಿಯಬೇಕಾದುದು ಇಲ್ಲಿಗೇ ಮುಗಿಯುವದಿಲ್ಲ. ಆದರೆ ಊಹಾಪೋಹದ ಮನೋರಂಜಕ ಕ್ಷೇತ್ರವನ್ನು ಬಿಟ್ಟು ತಲೆಬರೆಹದಲ್ಲಿ ಸೂಚಿಸಿದ ಪ್ರಶ್ನೆಗೆ ನಿಚ್ಚಳವಾಗಿ ಉತ್ತರ ಕೊಡಲು ನಾನು ಉತ್ಸುಕನಾಗಬೇಕಾಗಿದೆ.

ಗ್ರಾಮೋದ್ಯೋಗಗಳನ್ನು ಚಿಗುರಿಸಿ ಅದನ್ನು ಎಲ್ಲ ಸಹಕಾರಿ ಚಟುವಟಿಕೆಗಳ ಕೇಂದ್ರವಾಗಿ ಮಾಡುವ ಕೆಲಸವನ್ನು ವಹಿಸಿದ ಮಂತ್ರಿ ನಾನಾಗಿದ್ದರೆ, ನನ್ನ ಮೊಟ್ಟ ಮೊದಲಿನ ಕೆಲಸ ಕಾಯಂ ನೌಕರ ವರ್ಗದಿಂದ ಈ ಕೆಲಸ ಮಾಡಬಲ್ಲ ಪ್ರಾಮಾಣಿಕರೂ ಕೈಯಾಸೆಗೊಳಗಾಗದವರೂ ಆದವರನ್ನು ಆರಿಸಿ ತೆಗೆಯುವದು. ಆ ಮೇಲೆ ನಾನು ಅವರಲ್ಲಿ ಅತಿ ಸಮರ್ಥರಾದವರನ್ನು ಕಾಂಗ್ರೆಸ್ಸಿನಿಂದ ನಿರ್ಮಿಸಲ್ಪಟ್ಟ ಅ. ಭಾ. ಚರಕಾ ಸಂಘ ಮತ್ತು ಅ. ಭಾ. ಗ್ರಾಮೋದ್ಯೋಗ ಸಂಘಗಳ ಸಂಪರ್ಕದಲ್ಲಿ ತೊಡಗಿಸಿ ಹಳ್ಳಿ ಕೈಗಾರಿಕೆಗಳಿಗೆ ಪರಮಾವಧಿ ಉತ್ತೇಜನವನ್ನು ದೊರಕಿಸಿ ಕೊಡುವ ಯೋಜನೆಯೊಂದನ್ನು ರೂಪಿಸುವಂತೆ ಮಾಡೇನು. ಹಳ್ಳಿಗರ ಮೇಲೆ ಯಾವುದೇ ಒತ್ತಾಯವಿಲ್ಲೆಂದು ಮೊದಲೇ ಸ್ಪಷ್ಟಗೊಳಿಸಿ, ಅವರು ಅನ್ಯರ ದಾಕ್ಷವನ್ನು ಕೈಕೊಂಡು ನಡೆಯಬಾರದು, ಅವರಿಗೆ ಇತರರ ಸಹಾಯವನ್ನು ಅವಲಂಬಿಸದೆ ತಮ್ಮ ಆಹಾರ, ವಸ್ತ್ರ ಮತ್ತು ಇತರ ಆವಶ್ಯಕತೆಗಳ ಉತ್ಪಾದನೆಗೆ ತಮ್ಮ ಶ್ರಮ, ಕೌಶಲಗಳನ್ನು ನಂಬಿ ಸ್ವಾವಲಂಬಿಗಳಾಗಲು ಕಲಿಸಬೇಕು ಎಂದು ಸೂಚಿಸೇನು. ಇದಕ್ಕೆ ಈ ಯೋಜನೆ ಸ್ವಾಭಾವಿಕವಾಗಿರುವದು ಅವಶ್ಯ. ಆದುದರಿಂದ ನಾನು ಆರಿಸಿದ ಮೊದಲ ಮನುಷ್ಯನಿಗೆ, ಹಿಂದುಸ್ತಾನಿ ತಾಲೀಮೀ ಸಂಘದವರನ್ನು ಕಂಡು ಅವರೇನನ್ನುವರೋ ಕೇಳಿಕೋ, ಎಂದು ಹೇಳುವೆ.

ಇಂಥ ಯೋಜನೆಯಲ್ಲಿ, ಒಂದು ನಿರ್ದಿಷ್ಟ ದಿನದಿಂದ ಒಂದು ವರ್ಷದ ನಂತರ ತಮಗೆ ಗಿರಣಿ ಬಟ್ಟೆ ಅವಶ್ಯವಿಲ್ಲೆಂದೂ ತಮಗೆ ಹತ್ತಿ, ಉಣ್ಣೆ ಮತ್ತು ಇತರ ಅವಶ್ಯಕ ಸಾಧನಗಳು, ಪುಕ್ಕಟ್ಟೆಯಾಗಿ ಅಲ್ಲ, ಸುಲಭವಾಗಿ ಹಣ ಮುಟ್ಟಿಸುವಂಥ ಕರಾರುಗಳಿಂದ ಬೇಕಾಗಿವೆಯೆಂದೂ ಹಳ್ಳಿಗರೇ ಸಾರಬೇಕೆಂಬ ಒಂದು ಕಲಮು ಇರಬೇಕೆಂದು ತಿಳಿದಿದ್ದೇನೆ. ಯೋಜನೆ ಇಡಿ ಪ್ರಾಂತಕ್ಕೂ ಒಡನೆ ಅನ್ವಯಿಸದೆ ಪ್ರಾರಂಭದಲ್ಲಿ ವಿಶಿಷ್ಟಭಾಗಕ್ಕೆ ಮಾತ್ರ ಅನ್ವಯಿಸುವದೆಂದೂ ಯೋಜನೆಯಲ್ಲಿ ಸೂಚನೆಯಿರಬೇಕು. ಅದಲ್ಲದೆ ಅ. ಭಾ. ಚರಕಾ ಸಂಘ ಈ ಯೋಜನಯನ್ನು ಆಚರಣೆಗೆ ತರುವಲ್ಲಿ ಮಾರ್ಗದರ್ಶನ ಮತ್ತು ಸಹಾಯನೀಡುವದೆಂದೂ ಅದರಲ್ಲಿ ಉಲ್ಲೇಖವಿರಲಿ.

ಅದರ ಸಮಂಜಸತೆಯನ್ನು ಕುರಿತು ಮನದರಿಕೆ ಮಾಡಿಕೊಂಡು, ಕಾಯಿದೆಖಾತೆಯೊಡನೆ ವಿಚಾರಮಾಡಿ ಅದಕ್ಕೆ ಕಾಯಿದೆಯ ಸ್ವರೂಪ ಕೊಡಲು ಒಂದು ಪ್ರಕಟನೆ ಹೊರಡಿಸುವೆ. ಅದರಲ್ಲಿ ಯೋಜನೆಯ ಹುಟ್ಟು ಆಮೂಲಾಗ್ರ ಬಣ್ಣಿಸಲ್ಪಟ್ಟಿರುವದು. ಹಳ್ಳಿಗರೂ ಗಿರಣಿಯೊಡೆಯರೂ ಸೇರಿಯೆ ಈ ಯೋಜನೆಯಿಂದ ಬದ್ಧರಾಗುವರು. ಸರಕಾರದ ಮುದ್ರೆಯಿಂದೊಡಗೂಡಿದರೂ ಅದು ನಿಜವಾಗಿ ಜನತೆಯ ಯೋಜನೆಯೆಂದು ಆ ಪ್ರಕಟನೆಯಲ್ಲಿ ಸಾರಲ್ಪಟ್ಟಿರುವದು. ಸರಕಾರದ ಹಣವನ್ನು ಕಡುಬಡವರಾದ ಹಳ್ಳಿಗರ ಉಪಯೋಗಕ್ಕಾಗಿ ಸಂಬಂಧಪಟ್ಟ ಜನರಿಗೆ ಪರಮಾವಧಿ ಲಾಭವಾಗುವಂತೆ ತೊಡಗಿಸಲಾಗುವದು. ಈ ಯೋಜನೆಯಲ್ಲಿ ತಜ್ಞರ ಸಲಹೆ ಸ್ವೇಚ್ಛೆಯಿಂದಲೇ ದೊರಕುವದರಿಂದಲೂ ಮೇಲಿನ ವೆಚ್ಚ ಅತಿ ಕಡಿಮೆಯಾಗಿರುವದರಿಂದಲೂ ಅದರಲ್ಲಿ ತೊಡಗಿಸಿದ ಹಣ ಅತಿ ಲಾಭದಾಯಕವಾಗಬಹುದೆಂದು ತೋರುತ್ತದೆ ಯೋಜನೆಗಾಗಿ ದೇಶಕ್ಕೆ ಬೀಳುವ ಬಟ್ಟೆ ವೆಚ್ಚ ಮತ್ತು ಅದರಿಂದ ಜನತೆಗೆ ದೊರಕುವ ಲಾಭ ಎಷ್ಟೆಂದು ಆ ಪ್ರಕಟನೆಯಲ್ಲಿ ಉಲ್ಲೇಖಿಸಿರಬೇಕು.

ಮಂತ್ರಿಯಾಗಿ ನನ್ನ ಮುಂದೆ ಒಂದೇ ಪ್ರಶ್ನೆ ಉದ್ಭವಿಸಬಹುದು: ಖಾದೀ ಯೋಜನೆಯನ್ನು ನಿರ್ಮಿಸಿ ಯಶಸ್ವಿಯಾಗುವಂತೆ ನಡೆಸುವ ಹೊಣೆಯನ್ನು ಹೊರಲು ಬೇಕಾದಷ್ಟು ಅಚಲ ಶ್ರದ್ಧೆ, ಸಾಮರ್ಥ್ಯಗಳು ಅ. ಭಾ ಚರಖಾ ಸಂಘದಲ್ಲಿರುವವೇ ಎಂಬುದೇ. ಅದಿದ್ದರೆ ನಾನು ಪರಿಪೂರ್ಣ ವಿಶ್ವಾಸದಿಂದ ಧುಮುಕುವವನೇ.

ದಿಲ್ಲಿಯ ಗಾಡಿಯಲ್ಲಿ)

೨೬-೮-೪೬ — ಮೋ. ಕ ಗಾಂಧಿ

ವಾರದ ಪತ್ರ

(೯ ನೇ ಪುಟದಿಂದ)

ಈ ಸೂಚನೆಗಳನ್ನು ಡಾ. ಜೀವರಾಜ ಮೆಹತಾ ಅವರು ಗಾಂಧೀಜಿಯ ಮುಂದಿರಿಸಿದರು. ಅವರು ತೊಂದರೆ ಪಟ್ಟುಕೊಂಡು ಸೂಚನೆಗಳನ್ನು ಮಾಡಿದ್ದಕ್ಕೆ ಗಾಂಧೀಜಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರೂ ಹೆಚ್ಚು ವೆಚ್ಚಬರುವ ವಿಸ್ತೃತ ಯೋಜನೆಗಳಿಂದ ಫಲವಿಲ್ಲವೆಂಬ ಭಯವನ್ನು ಪ್ರದರ್ಶಿಸಿದರು. ಸೇವಾಗ್ರಾಮವೊಂದು ಮಾದರಿಯಾಗಬೇಕೆಂದು ತಮ್ಮ ಅಭಿಪ್ರಾಯವಾದುದರಿಂದ ೭ ಲಕ್ಷ ಹಳ್ಳಿಗಳಲ್ಲಿ ಪ್ರತಿ ತೆಗೆಯಲು ಬಾರದ ಯಾವುದೇ ಯೋಜನೆ ತಮಗೆ ಬೇಡವೆಂದು ಅವರು ಹೇಳಿದರು. ಒಂದು ಹಳ್ಳಿಯಲ್ಲಾದರೂ ಇದನ್ನು ತೃಪ್ತಿಕರವಾಗಿ ಮಾಡಿ ತೋರಿಸಿದರೆ ಹಿಂದುಸ್ತಾನದ ಇತರ ಹಳ್ಳಿಗಳ ಸಮಸ್ಯೆಗಳನ್ನು ಪರಿಹರಿಸುವ ದಾರಿ ಸಿಕ್ಕೀತು. ಇಲ್ಲದಿದ್ದರೆ ಪ್ರಗತಿ ಇರುವೆ ಹರಿದಂತೆ ಸಾಗಿ, ಕೆಲವೇ ಹಳ್ಳಿಗಳಲ್ಲಿ ಮಾಡಿದ ಮಹಾಯೋಜನೆಗಳು ತುಟ್ಟಿಯಾದ ನಿರರ್ಥಕ ಪ್ರಯೋಗದ ಸ್ಮಾರಕವಾಗಿ ಉಳಿಯಬಹುದು ಮಾತ್ರ.

ಆದುದರಿಂದ ಪಡಭೂಮಿಯನ್ನು ಸಾಗುವಳಿಗೆ ತರುವ ಯೋಜನೆ ತತ್ಕಾಲಕ್ಕೆ ಮೂಲೆಗುಂಪು ಮಾಡಲ್ಪಟ್ಟಿತು. ಡಿ. ಡಿ. ಟಿ. ಸಿಂಪಡಿಸುವದು ಈಗಾಗಲೆ ಪ್ರಾರಂಭವಾಗಿತ್ತು. ಅದನ್ನು ಹೆಚ್ಚು ರಭಸದಿಂದ ಸಾಗಿಸಬೇಕೆಂದು ಗಾಂಧೀಜಿ ಸೂಚಿಸಿದರು. ಸರಕಾರದವರು ಪ್ರಾಯೋಗಿಕ ಪರಿಶೀಲನೆ ಮತ್ತು ಮಲೆಜ್ವರ ನಿಯಂತ್ರಣದ ಕೇಂದ್ರವನ್ನಾಗಿ ಈ ಸ್ಥಳವನ್ನುಪಯೋಗಿಸಲಬಹುದೆಂದ ಅವರು ಅನುಮತಿಯಿತ್ತರು. ಪರೀಕ್ಷಾರ್ಥವಾಗಿ ಅಲ್ಲಿ ಕೆಲ ಸೆಪ್ಟಿಕ್ ಟ್ಯಾಂಕುಗಳನ್ನು ಕಟ್ಟಬಹುದೆಂದೂ ಅವರು ಒಪ್ಪಿದರು. ಆದರೆ ಸುವ್ಯವಸ್ಥಿತ ಕಂದಕ-ಪಾಯಖಾನೆಗಳೆ ಹೆಚ್ಚಿನ ಹಳ್ಳಿಗಳಿಗೆ ಏಕಮಾತ್ರ ತರಣೋಪಾಯವೆಂಬ ಅವರ ನಂಬಿಕೆ ಕದಲಿರಲಿಲ್ಲ. ತಾಲಿಮಿ ಸಂಘದ ಶ್ರೀ ಆರ್ಯನಾಯಕಜಿಯವರು ಸೊಳ್ಳೆಗಳು ಹುಟ್ಟದಂತೆ ಕಂದಕ ಪಾಯಖಾನೆಗಳನ್ನು ರಚಿಸಲು ಬರುವದಿಲ್ಲವೇನೆಂದು ಪ್ರಯೋಗ ಮಾಡಿ ನೋಡುವದಾಗಿ ಹೇಳಿದರು.

ಈ ಕನಿಷ್ಠನಿಗೂ—

ಅಂದು ಸಂಜೆ ಡಾಕ್ಟರ ಜನರು ಬೀಳ್ಕೊಂಡರು ಅವರಿಗೆ ಯಾವುದೂ ಸರಿಯಾಗಿ ಬಗೆಹರಿಯಲಿಲ್ಲ. ಎಲ್ಲಿಯ ವರೆಗೆ ಒಬ್ಬನೇ ಒಬ್ಬ ಪಾತಕಿಯಾದರೂ ಸಜ್ಜನನಾಗದೆ ಉಳಿದಿರುವನೊ ಅಲ್ಲಿವರೆಗೆ ತಾನೂ ಪಾತಕಿಯೆಂದು ಪರಿಗಣಿಸುವದಾಗಿ ಈಜಿನ ಡೆಬ್ಸನು ಹೇಳಿಲ್ಲವೆ? ೨೫ನೆ ತಾರೀಕಿನ ದಿನ ಗಾಂಧೀಜಿ ಸೇವಾಗ್ರಾಮದಿಂದ ಹೊರಡುವ ಮುಂಚೆ ಸಂಭವಿಸಿದ ಒಂದು ಚಿಕ್ಕ ಘಟನೆ ಗಾಂಧೀಜಿಯ ವಿಚಾರ ಧಾರೆಯ ಮೇಲೆ ಬೆಳಕು ಚೆಲ್ಲಿತು. ಆಶ್ರಮವಾಸಿಯೊಬ್ಬನು ಬೀಳ್ಕೊಡಲು ಬಂದಿದ್ದನು ಅವನು ಗಾಂಧೀಜಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಬಯಸಿದನು. "ನನ್ನ ಪಾದ ಮುಟ್ಟಲು ನೀನೇಕೆ ಬಯಸಬೇಕು?" ಗಾಂಧೀಜಿ ಕೇಳಿದರು. "ಕೋಟ್ಯಂತರ ಜನರಿಗೆ ಅದು ಲಭ್ಯವಿಲ್ಲ. ಕೋಟ್ಯಂತರರಿಗೆ ಲಭ್ಯವಾಗದುದನ್ನು ನಾವು ನಾವಾಗಿಯೆ ತ್ಯಜಿಸಬೇಕು ಕೋಟ್ಯಂತರರಿಗೆ ಅಹಿಂಸೆಯ ಆಚರಣೆ ಅಸಾಧ್ಯವಾಗಿರುವದಾದರೆ ನನ್ನ ಮಟ್ಟಿಗೆ ನನಗೂ ಅದರಿಂದ ಪ್ರಯೋಜನವಿಲ್ಲವೆಂದು. ನಾನೆನ್ನುವೆ ಆದರೆ ಅವರಿಗೆ ಸಾಧ್ಯವಿದ್ದರೂ ಅದನ್ನಾಚರಿಸುವ ಮನಸಿಲ್ಲದಿದ್ದರೆ ಮಾತ್ರ ಜಗತ್ತಿನಲ್ಲಿ ನಾನು ಏಕಾಕಿಯೆ ಅದರೂ ಅದಕ್ಕೆ ಅಂಟಿಕೊಳ್ಳುವೆ. ಯೋಗಿಗಳಿಗೂ ಋಷಿಗಳಿಗೂ ಮಾತ್ರ ಅಹಿಂಸೆ ತಕ್ಕದೆಂದು ಹೇಳುತ್ತಾರೆ. ನಾನು ಹಾಗೆಣಿಸುವದಿಲ್ಲ. ಅವರು ಹೇಳುವದೇ ಸರಿಯಾಗಿದ್ದರೆ ನನ್ನದೃಷ್ಟಿಯಲ್ಲಿ ಅಹಿಂಸೆಗೆ ಏನೂ ಬೆಲೆ ಉಳಿಯುವದಿಲ್ಲ. ಅದೇ ಪ್ರಕಾರ, ೧೨೫ ವರ್ಷ ಬಾಳುವ ಆಸೆ ಮತ್ತು ಪ್ರಯತ್ನ ನನಗೊಬ್ಬನಿಗೆ ಮಾತ್ರ ದೊರಕೊಳ್ಳುವ ಭಾಗ್ಯವಾಗಿದ್ದರೆ ನನಗೆ ಆ ಆತುರ ಉಳಿಯದು. ಆದರೆ ೧೨೫ ವರ್ಷ ಬಾಳಿ ದೇವರ ಮತ್ತು ಅತನ ಸೃಷ್ಟಿಯ ಸೇವೆ ಮಾಡಬೇಕೆಂಬಆಸೆಯನ್ನು ತೊಡುವದು ಎಲ್ಲರಿಗೂ ಸಾಧ್ಯವಾದ ಮತ್ತು ಕರ್ತವ್ಯ. ಸ್ವಾರ್ಥತ್ಯಾಗ ಅದೇ ಇಷ್ಟವಾದುದು. ಏಕೆಂದರೆ, ನಾನು ಯಾರಾರೊಡನೆ ಕೆಲಸಮಾಡಿದೆನೋ ಯಾರಾರು ನನಗೆ ಪರಿಚಿತರಾಗಿದ್ದರೋ ಅವರೆಲ್ಲ ಹೋಗಿ ನಾನೊಬ್ಬನೇ ಉಳಿದರೆ ನನ್ನ ಜೀವನಕ್ಕೆ ಏನು ಧನ್ಯತೆ?"

ಹಿಂದುಸ್ತಾನಿ ಪ್ರಚಾರ ಶಾಲೆ ಮತ್ತು ತಾಲೀಮಿ ಸಂಘಗಳಲ್ಲಿ ಗಾಂಧೀಜಿ ಈ ವಾರ ಎರಡು ಚಿಕ್ಕ ಸಮಾರಂಭಗಳಲ್ಲಿ ಭಾಗವಹಿಸಿದ್ದರು. ಆದರೆ ಅದರ ಬಗೆಗೆ ಮುಂದಿನ ವಾರ ಹೇಳುವೆ.

ದಿಲ್ಲಿಯ ದಾರಿಯಲ್ಲಿ ಪ್ಯಾರೇಲಾಲ

೨೮-೮-೪೬

ದಕ್ಷಿಣ ಆಫ್ರಿಕೆ

(೮ನೇ ಪುಟದಿಂದ ಬಂದುದು)

ಅನಂತರ ವಾಲಖರ್ಸ್ಟ ಮೊದಲಾದ ವಿದ್ಯುತ್ ಯಾತ್ರೆಯ ಸಂಕ್ಷಿಪ್ತ ವರದಿಯನ್ನು ಬರೆಯುವ ಸಾಹಸವನ್ನು ನಾನು ಈಪುಸ್ತಕದಲ್ಲಿ ಮಾಡಿರುವೆನು.

೧೯೪೨-೪೫ ಅಂದರೆ ಮೂರು ವರುಷಕ್ಕಿಂತ ಹೆಚ್ಚು ಕಾಲ ಹಿಂದುಸ್ತಾನ ಸರಕಾರಕ್ಕೆ ದಕ್ಷಿಣ ಅಫ್ರಿಕೆಯ ಸಮಸ್ಯೆಯ ಸಂಬಂಧದಲ್ಲಿ ನಾನು ಸುದೀರ್ಘ ವರದಿಗಳನ್ನು ಕಳಿಸಿದೆನು. ೧೯೪೩ ನೇ ಎಪ್ರಿಲ ತಿಂಗಳಲ್ಲಿ ಜನರಲ್ ಸ್ಮಟ್ಸರ ಧೋರಣದ ಸಂಬಂಧದಲ್ಲಿ ನಾನು ಸರಕಾರಕ್ಕೆ ಎಚ್ಚರಿಕೆ ಕೊಟ್ಟೆನು. ಪೆಗ್ಗಿಂಗ ಕಾಯಿದೆಯ ಸಂಬಂಧದಲ್ಲಿ ಯುಯೂನಿಯನ್ ಸರಕಾರದ ವಿರುದ್ಧ ಉಗ್ರ ಉಪಾಯ ಕೈಕೊಳ್ಳಬೇಕೆಂದೂ ನಾನು ಹೇಳಿದೆ. ಈಗ ಉಗ್ರ ಉಪಾಯ ಕೈಕೊಂಡಿದ್ದರೂ ಬಹಳ ತಡಮಾಡಿ ಕೈಕೊಂಡದ್ದಾಗಿದೆಂದು ನನಗನಿಸುತ್ತದೆ. ಕಾಂಗ್ರೆಸ್ಸು ಬೇಗ ರಾಷ್ಟ್ರೀಯ ಸರಕಾರ ಸ್ಥಾಪಿಸಿದರೆ ಮತ್ತು ಆ ಖಾತೆಯ ಹೊಸ ಮಂತ್ರಿಯು ಇವೆಲ್ಲ ವರದಿಗಳನ್ನು ಪ್ರಸಿದ್ಧಿಸಬೇಕೆಂದು ನಿರ್ಧರಿಸಿದರೆ - ವಿಶೇಷತಃ ೧೯೪೩ ಎಪ್ರಿಲ ನಂತರದ ವರದಿಗಳನ್ನು—ಮುಂದಿನ ಯು. ಎನ್ ಓ ಅಧಿವೇಶನಕ್ಕಾಗಿ ಅನೇಕ ಮುದ್ದೆಗಳು ಸ್ಪಷ್ಟವಾಗುವವು. ಎರಡು ರಾಷ್ಟ್ರಗಳ ಸಂಬಂಧದಲ್ಲಿ ವೈಮನಸ್ಯವುಂಟಾಗುವವರೆಗೆ ಇಂಥ ವರದಿಗಳನ್ನು ಪ್ರಸಿದ್ಧಿಸಬಾರದೆಂಬ ರೂಢಿಯಿದೆಂದು ನಾನು ಹೇಳಲಿಕ್ಕೆ ಬೇಕಾಗಿದೆ. ಅವನ್ನು ಪ್ರಸಿದ್ಧಗೊಳಿಸಬೇಕೋ ಬಾರದೋ ಎಂಬ ಬಗ್ಗೆ ನಾನು ಅಭಿಪ್ರಾಯ ವ್ಯಕ್ತಪಡಿಸುವದಿಲ್ಲ. ಹೊಸ ಸರಕಾರ ನಿರ್ಧರಿಸತಕ್ಕ ವಿಷಯವದು.

ಜಿನ್ನಾರ ಬಂಧನ ?

ಹಿಂದುಸ್ತಾನದಲ್ಲಿ ಕಾಯದೆ ಹಾಗು ಸುವ್ಯವಸ್ಥೆಯನ್ನು ಕಾಪಾಡಲು ಭಾರತ ಸರಕಾರದ ಧುರೀಣರಾದ ಪಂಡಿತ ಜವಾಹರಲಾಲ ನೆಹರೂರವರು ಅ ಭಾ. ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮೊಹಮ್ಮದಾಲಿ ಜಿನ್ನಾರವರನ್ನು ಪ್ರಸಂಗ ಬಂದರೆ ಬಂಧಿಸಬಹುದೆಂದು "ಡೇಲಿ ಮೇಲ" ಎಂಬ ಲಂಡನ ಪತ್ರಿಕೆಯ ಪ್ಯಾರಿಸ ಮುದ್ರಣದಲ್ಲಿ ಪ್ರಕಟವಾಗಿದೆ. ಈ ಸುದ್ದಿಗೆ "ಹಿಂದುಸ್ತಾನ ಕಚೇರಿ"ಯ ಪುಷ್ಟಿ ದೊರೆತಿಲ್ಲವಾದರೂ ಆ ಕಚೇರಿಯವರು ಅದನ್ನು ಅಲ್ಲಗಳೆದಿಲ್ಲ.

ಮುಂಬಯಿ

ಶ್ರೀ ಸುಭಾಸಚಂದ್ರ ಬೋಸರು ಸ್ಥಾಪಿಸಿದ ತಾತ್ಪೂರ್ತಿಕ ಸರಕಾರದಲ್ಲಿ ಪ್ರಚಾರ ಮಂತ್ರಿಗಳಾದ ಶ್ರೀ ಎಸ್ ಎ ಅಯ್ಯರ ಇವರು ಮುಂಬಯಿ ಸರಕಾರದ ಸುದ್ದಿ ಖಾತೆಯ ಡಾಯರೆಕ್ಟರರಾಗಿ ನೇಮಕ ಹೊಂದಿ ಅಧಿಕಾರ ಸ್ವೀಕರಿಸಿದ್ದಾರೆ.

ತಮ್ಮ ಮನವಿಗೆ ಸಮಾಧಾನಕರ ಉತ್ತರ ದೊರೆಯದಿದ್ದರೆ ಮುಂಬಯಿ ಇಲಾಖೆಯಲ್ಲಿಯ ಎಲ್ಲ ಬಸ್ ಟ್ಯಾಕ್ಸಿ ಹಾಗು ಟ್ರಕ್ಕುಗಳ ಒಡೆಯರು ಅನಿಯಮಿತ ಸಂಪು ಹೂಡಲು ನಿರ್ಧರಿಸಿದ್ದಾರೆಂದು ಮುಂಬಯಿ ಪ್ರಾಂತಿಕ ಮೋಟರ ಸಾರಿಗೆ ಸಂಘದ ಜನರಲ್ ಸೆಕ್ರೆಟರಿಗಳು ಪ್ರಸಿದ್ಧಿಸುತ್ತಾರೆ ಸಾರಿಗೆ ವಾಹನಗಳಿಗೆ ಕಾಯಂ ರಿನ್ಯೂಅಲ್ ಪರವಾನಿಗೆಗಳನ್ನು ಕೊಡತಕ್ಕದ್ದಲ್ಲೆಂದು ಸರಕಾರ ನಿಶ್ಚಯಿಸಿದ್ದೇ ಸಂಪಿಗೆ ಕಾರಣವಂತೆ.

ಅಮಳನೇರ ಪ್ರತಾಪ ಗಿರಣಿಕೂಲಿಕಾರರ ತಂಟೆ ವಿಚಾರಿಸಲು ನ್ಯಾಯಮೂರ್ತಿ ದಿವೇಟಿಯಾ ಹಾಗು ಬುಲೆಯವರು ಮಧ್ಯಸ್ಥರಾಗಿ ನೇಮಿಸಲ್ಪಟ್ಟಿದ್ದಾರೆ.

ಬಡೋದೆಯಲ್ಲಿ ಹಿಂದೂ ಮುಸಲ್ಮಾನ ತಿಕ್ಕಾಟ ಸಂಭವಿಸಿತೆಂದು ಸುದ್ದಿ ಬಂದಿದೆ. ಕರ್ಫ್ಯು ಹುಕುಮನ್ನು ಒಂದು ವಾರದವರೆಗೆ ಪ್ರಯೋಗಿಸಲಾಗಿದೆಂದೂ ಪೋಲೀಸ ಹಾಗು ಸೈನಿಕರನ್ನೂ ಬೀದಿಗಳಲ್ಲಿ ನಿಲ್ಲಿಸಲಾಗಿದೆಂದೂ ಹೇಳಲಾಗುತ್ತದೆ.

ಸಾತಾರೆಯಲ್ಲಿ ಕರ್ನಾಟಕ ಸಂಘವೊಂದು ಮೊನ್ನೆ ಗಣೇಶ ಚತುರ್ಥಿಯ ದಿನ ಸ್ಥಾಪಿತವಾಗಿದೆ. ಕನ್ನಡಿಗರಲ್ಲಿ ಬಾಂಧವ್ಯ ಹಾಗು ಸಾಂಸ್ಕೃತಿಕ ಬೆಳವಣಿಗೆಗಾಗಿ ಈ ಸಂಘ ಸ್ಥಾಪಿಸಿವಾಗಿದೆ.

ಶಾಂತಿಲಾಲ ಶಹಾ ಇವರು ರಾಜೀನಾಮೆ ಕೊಟ್ಟದ್ದರಿಂದ ಡಾ. ಜಯಕರರು ಅವಿರೋಧವಾಗಿ ಘಟನಾ ಸಮಿತಿಗೆ ಆರಿಸಿ ಬಂದಿರುವರು.

ಹರಿಜನರ ಮಾಟದಿಂದ ಊರ್ಧ್ವಯ ದನಕರುಗಳು ಸಾಯುತಿರುವವೆಂದು ಸಂಶಯ ತೆಗೆದುಕೊಂಡು ಬೀಡಾ ಜಿಲ್ಲೆ ಜುಲ್ಲಿಯ ಒಂದು ಹಳ್ಳಿಯ ೨೦೦ ಸವರ್ಣ ಹಿಂದುಗಳು ಬಡಿಗೆ ಮುಂತಾದವುಗಳನ್ನು ತೆಗೆದುಕೊಂಡು ಹರಿಜನ ಕೇರಿಯನ್ನು ಮುತ್ತಿ ಒಬ್ಬ ಮುದುಕಿಯನ್ನು ಗಿಡಕ್ಕೆ ಕಟ್ಟಿ ಕಲ್ಲೆಣ್ಣೆಯನ್ನು ಉಗ್ಗಿ ಅವಳ ಮುಖವನ್ನೂ ಬೇರೆ ಅವಯವಗಳನ್ನೂ ಸುಟ್ಟರೆಂದು ತಿಳಿಯುತ್ತದೆ. ಒಬ್ಬರನ್ನೂ ಚನ್ನಾಗಿ ಥಳಿಸಿದ್ದಾರೆ. ಅಂಜಿಕೆಯಿಂದ ಹರಿಜನರೆಲ್ಲ ಊರ ಬಿಟ್ಟು ಹೊರಟಿದ್ದರು. ಅರಿ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ಅವರಿಗೆ ಧೈರ್ಯ ಹೇಳಿ ಊರಲ್ಲಿ ಇರಲು ಉಪದೇಶಿಸಿದರು.

ಆನಂದದಲ್ಲಿ ಒಕ್ಕಲತನ ಕಾಲೇಜು ಬೇಗನೆ ಸ್ಥಾಪಿತವಾಗಲಿದ್ದು ಅದಕ್ಕಾಗಿ ಸೇಟ ಅಂಬಾಲಾಲ ನರಸಿಂಗದಾಸರು ಸ್ವರ್ಗವಾಸಿ ತಮ್ಮ ಮಗನ ಸ್ಮರಣಾರ್ಥ ೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ವೀರ ಮಲ್ಲಪ್ಪಧನಶೆಟ್ಟಿ ಇವರಮೇಲಿನ ಲಾವಣಿ ಹಾಗು ಅಹಮ್ಮದಾಬಾದದ ದವೆಯವರು ಪ್ರಸಿದ್ಧಿಸಿದ ೧೯೪೨ ಎಂಬ ಪುಸ್ತಕದ ಮೇಲಿನ ನಿರ್ಬಂಧವನ್ನು ಮುಂಬಯಿ ಸರಕಾರದವರು ತೆಗೆದು ಹಾಕಿದ್ದಾರೆ.

ಮುಂಬಯಿ ಶಾಸನ ಸಭೆ ಸಪ್ಟಂಬರ ೨೪ಕ್ಕೆ ಪುನಃ ಪ್ರಾರಂಭವಾದ ಕೂಡಲೆ ನಡೆಯತಕ್ಕದ್ದಿದ್ದ ದಲಿತ ವರ್ಗದವರ ಸತ್ಯಾಗ್ರಹ ಹೆಚ್ಚಿನ ಸಿದ್ಧತೆಗಾಗಿ ಮುಂದರಿಸಲ್ಪಟ್ಟಿದೆಂದೂ ಮಧ್ಯಪ್ರಾಂತ ಮತ್ತು ಸಂಯುಕ್ತಪ್ರಾಂತದಲ್ಲಿಯೂ ಸತ್ಯಾಗ್ರಹ ಪ್ರಾರಂಭವಾಗಲಿದೆಂದೂ ದಲಿತ ವರ್ಗದ ಮಹಾಸಂಘದ ಜನರಲ್ ಸೆಕ್ರೆಟರಿಗಳು ಪ್ರಸಿದ್ಧಿಸಿದ್ದಾರೆ.

ಪುಣೆಯಲ್ಲಿ ರಾಮದೇವರ ಗುಡಿಯನ್ನು ಹರಿಜನರಿಗೆ ಮುಕ್ತದ್ವಾರ ಮಾಡಲಾಯಿತು, ೬೦ ವರುಷಗಳ ಹಿಂದೆ ರಮಾಬಾಯಿ ರಾನಡೆಯವರು ಈ ಗುಡಿಯನ್ನು ಕಟ್ಟಿಸಿದ್ದರು. ಮಂತ್ರಿವರ್ಯ ಬಿ. ಜಿ ಖೇರ ಮತ್ತು ತಪಾಸೆಯವರು ಈ ಕಾಲಕ್ಕೆ ಭಾಷಣ ಮಾಡಿ ಹಿಂದೂ ಸಾರ್ವಜನಿಕ ಮಂದಿರಗಳನ್ನು ಹರಿಜನರಿಗೆ ಮುಕ್ತದ್ವಾರ ಮಾಡುವದರ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯದವರು ಮರಾಠಿ ಸಾಹಿತ್ಯ ಸಂಶೋಧನ ಸಂಸ್ಥೆ ತೆರೆಯಲು ನಿಶ್ಚಯಿಸಿ ಸರಕಾರದಿಂದ ೨೫ ಸಾವಿರ ರೂಪಾಯಿ ಧನ ಸಹಾಯ ಬೇಡಿರುವರು.

ಹಿಂದುಸ್ತಾನ

ಮದ್ರಾಸ

ಬ್ರಹ್ಮೀ ಸರಕಾರದವರು ಹಿಂದುಸ್ತಾನಕ್ಕೆ ಅಕ್ಕಿ ನಿರ್ಯಾತವನ್ನು ೧೦೦ ಕ್ಕೆ ೫೦ ರಷ್ಟು ಹೆಚ್ಚಿಸಲು ಒಪ್ಪಿದ್ದಾರೆ. ಈಗ ಪ್ರತಿ ದಿವಸ ಅವರು ೧೨೦೦ ಟನ್ ಅಕ್ಕಿ ಕಳಿಸುತಿದ್ದು ಇನ್ನೂ ೧೦೦೦ ಟನ್ ಕಳಿಸಲಿರುವರು.

ಎಸ್ ಅಯ ರೇಲ್ವೆ ಕೆಲಸಗಾರರು ಸಂಪು ಪ್ರಾರಂಭಿಸಿದ್ದರಿಂದ ಪಾರ್ಸಲ ಮೊದಲಾದವುಗಳನ್ನು ತೆಗೆದುಕೊಳ್ಳುವದನ್ನು ನಿಲ್ಲಿಸಿದ್ದಾರೆ ಸಂಪು ಪ್ರಾರಂಭವಾದಾಗಿನಷ್ಟು ಜನ ಈಗ ಅದರಲ್ಲಿ ಉಳಿದಿಲ್ಲ. ಹೆಚ್ಚೆಚ್ಚು ಜನ ಸಂಪಿನಿಂದ ಕಾಲ್ದೆಗೆಯುತ್ತಿರುವರು.

ಮದ್ರಾಸ ಮೇಲ್ಮನೆಯ ಅಧ್ಯಕ್ಷರ ಸಂಬಳವನ್ನು ೧೦೦೦ ರೂಪಾಯಿ ಮಾಡುವ ಮಸೂದೆ ಈ ಸಲದ ಶಾಸನ ಸಭೆಯಲ್ಲಿ ಬರಲಿದೆ. ಈ ವರೆಗೆ ಅವರಿಗೆ ೫೦೦ ರೂಪಾಯಿ ಸಂಬಳವಿತ್ತು.

ಮದ್ರಾಸ ಸರಕಾರದವರು ವಿದ್ಯುಚ್ಛಕ್ತಿ ನೀರಾವರಿ ತಗಾಯಿ ಮೊದಲಾದ ಸಂಬಂಧದಲ್ಲಿ ೨॥ ದಿಂದ ೪ ಕೋಟಿ ರೂಪಾಯಿ ಸಾಲ ತೆಗೆದಿರುವರು.

ಅರ್ಧುದ ಸೇನೆಯ ರಾಣಿ ಝಾಂಸಿ ದಲ ಲೆಫ್ಟನೆಂಟ ಕರ್ನಲ್ ಲಕ್ಷ್ಮೀ ಇವರ ಪತಿ ಶ್ರೀ ಬಿ ಕೆ ನಂಜುಂಡರಾಯರು ವಿವಾಹ ವಿಚ್ಛೇದನೆ ಬಗ್ಗೆ ಹಾಯಕೋರ್ಟಿನಲ್ಲಿ ಮಾಡಿಕೊಂಡ ಅರ್ಜಿ ವಿಚಾರಣೆ ನಡೆದು ವೆಚ್ಚ ಸಹಿತ ಮಾನ್ಯ ಮಾಡಲ್ಪಟ್ಟಿತು. ಇವರ ವಿವಾಹ ೧೯೩೬ ನೇ ಎಪ್ರೀಲ ೧೫ ಕ್ಕೆ ಮದ್ರಾಸಿನಲ್ಲಿ ಜರಗಿತ್ತು.

ಹೊಸದಿಲ್ಲಿ

ಎಲ್ಲ ಪ್ರಾಂತಿಕ ಕಾಂಗ್ರೆಸ ಕಮೀಟಿಗಳ ಅಧ್ಯಕ್ಷರ ಹಾಗು ಕಾರ್ಯದರ್ಶಿಗಳ ಸಭೆ ೨೫ ನೇ ತಾರಿಕು ದಿಲ್ಲಿಯಲ್ಲಿ ಕೂಡುವದೆಂದು ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಗಳು ಪ್ರಕಟಿಸಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ದಲಗಳ ಪ್ರತಿನಿಧಿಗಳ ಪರಿಷತ್ತು ೨೫-೨೬ ಕ್ಕೆ ಕೂಡುವದು. ಘಟನಾ ಸಮಿತಿಯ ಉಪಸಮಿತಿಯ ಸಭೆ ೨೦ ಕ್ಕೆ ಕೂಡುವದು. ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸಭೆ ೨೧-೨೨ ಕ್ಕೆ ಮತ್ತು ಎ ಅಯ ಸಿ ಸಿ ಸಭೆ ೨೩ ರಿಂದ ಪ್ರಾರಂಭವಾಗುವದು.

ದಿಲ್ಲಿ ಕಲಕತ್ತಾ ಅಕ್ಯಾಬ ರಂಗೂನ ಮಾರ್ಗವಾಗಿ ಹಿಂದುಸ್ತಾನ ಬ್ರಹ್ಮದೇಶಗಳ ನಡುವೆ ನಿಯಮಿತ ವಿಮಾನಗಳು ಇಷ್ಟರಲ್ಲಿಯೆ ಹಾರಾಡಲಿವೆ.

ಸರ್ ಶಾಫತ ಅಹಮ್ಮದಖಾನರ ಮೇಲಿನ ಹಲ್ಲೆಯ ಸಂಬಂಧದಲ್ಲಿ ಸಿಮುಲಾದಲ್ಲಿ ನಾಲ್ವರು ಬಂಧಿಸಲ್ಪಟ್ಟಿದ್ದಾರೆ. ಅದರಲ್ಲಿ ಸರಕಾರಿ ಕಚೇರಿಯ ಕಾರಕೂನನೊಬ್ಬನಿರುವನೆಂದು ತಿಳಿಯುತ್ತದೆ.

ಹಿಂದುಸ್ತಾನ ಸರಕಾರದವರು ಪುನರ‍್ರಚನೆಯ ಅಂತರರಾಷ್ಟ್ರೀಯ ಬ್ಯಾಂಕಿಗೆ ತಮ್ಮ ವಂತಿಗೆಯೆಂದು ಈಗ ೪೦ ಲಕ್ಷ ಡಾಲರ ಕೊಟ್ಟಿದ್ದಾರೆ ಕೇಂದ್ರ ಶಾಸನ ಸಭೆಯ ಬ್ರಿಟನ್‌ವುಡ್ಸ ಸಮಿತಿಯವರು ಈಗ ಇಷ್ಟೇ ಕೊಡಬೇಕೆಂದು ಸೂಚಿಸಿದ್ದರು.

ಅಹಮ್ಮದಾಬಾದ ದೊಂಬಿಯಲ್ಲಿ ಪ್ರಾಣವಿತ್ತ ರಾಜಾಭಾಯಿ ಲಖಾನಿ ಮತ್ತು ವಸಂತರಾವ ಹೆಗಿಸ್ಟೆ ಇವರ ಸ್ಮರಣಾರ್ಥ ಗುಜರಾಥ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ೨ ಲಕ್ಷ ರೂಪಾಯಿ ನೆಚ್ಚ ಮಾಡಿ ಕಾಂಗ್ರೆಸ್ ಸೇವಾದಲ ಶಿಕ್ಷಣ ಶಿಬಿರ ತೆರೆಯಲಿದ್ದಾರೆ.

ಮುಂಬಯಿ ಆಕಾಶವಾಣಿಯಲ್ಲಿ ಇದೇ ಸಪ್ಟಂಬರ ೧ ರಿಂದ ಹಳ್ಳಿಗರಿಗಾಗಿ ಕನ್ನಡ ಕಾರ್ಯಕ್ರಮ ದಿನಾಲು ಸಾಯಂಕಾಲ ೬-೧೦ ರಿಂದ ೬-೩೦ ರ ವರೆಗೆ ನಡೆಯುವದು.

ಸಂಯುಕ್ತಪ್ರಾಂತ

ಲಖನೌ ಸ್ಟೇಶನಿನಲ್ಲಿ ಪೋಲೀಸರು ಚೂರಿಗಳ ಎರಡು ಪಾರ್ಸಲಗಳನ್ನು ಜಪ್ತಮಾಡಿದ್ದಾರೆ.

ಮಿರತದಲ್ಲಿ ಕೂಡುವ ಕಾಂಗ್ರೆಸ ಅಧಿವೇಶನಕ್ಕಾಗಿ ವಿಕ್ಟೋರಿಯಾ ಉಪವನ ಸ್ಥಳವನ್ನು ಆರಿಸಲಾಗಿದೆ.

ಗಂಗಾನದಿಗೆ ಮಹಾಪೂರ ಬಂದದ್ದರಿಂದ ಬನಾರಸ ಜಿಲ್ಹೆಯಲ್ಲಿ ೫೦ ಹಳ್ಳಿಗಳು ನೀರಲ್ಲಿ ನಿಂತಿವೆ.

ಸಂಯುಕ್ತ ರಾಷ್ಟ್ರಗಳ ಸಭೆಯಲ್ಲಿ ದಕ್ಷಿಣ ಅಫ್ರಿಕೆಯಲ್ಲಿನ ಹಿಂದೀಯರ ಪ್ರಶ್ನೆಯು ಚರ್ಚೆಗೆ ಬರತಕ್ಕದ್ದಿರುವದರಿಂದ ಸೌ. ವಿಜಯಲಕ್ಷ್ಮೀ ಪಂಡಿತರು ಹಿಂದೀ ಪ್ರತಿನಿಧಿಗಳ ಧುರೀಣತ್ವ ವಹಿಸಿ ಅಲ್ಲಿಗೆ ಹೋಗಲಿರುವರೆಂದು ತಿಳಿಯುತ್ತದೆ.

ಬಂಗಾಲ

ಬಂಗಾಲದ ಹಿಂದಿನ ಮುಖ್ಯ ಮಂತ್ರಿಗಳೂ ಕೃಷಿಕ ಪ್ರಜಾಪಕ್ಷದ ಧುರೀಣರೂ ಆದ ಫಜಲ್‌ಲ್ ಹಕ್ಕರು ತಮ್ಮಲ್ಲಿ ಉಸಿರಿರುವ ವರೆಗೆ ಮುಸ್ಲಿಂ ಲೀಗ ಸಂಸ್ಥೆಯಲ್ಲಿ ಕೆಲಸ ಮಾಡಲು ತಾವು ಸಿದ್ಧರಿರುವದಾಗಿ ಸಾರಿದ್ದಾರೆ. ಲೀಗಿನಲ್ಲಿ ಸೇರದಿರಲ ತನಗೆ ನಿರ್ಬಂಧವಿದ್ದದರಿಂದ ತಮಗೆ ತೊಂದರೆಯಾಗಿದೆಂದೂ ಅವರು ಹೇಳಿದರು. ಅವರು ಲೀಗಿನಲ್ಲಿ ಸೇರಲು ಅನುಕೂಲತೆ ಮಾಡಿಕೊಡಲು ಅವರ ಮಿತ್ರರು ಪ್ರಯತ್ನಿಸುತ್ತಿರುವರು.

ಬಂಗಾಲ ಮೇಲ್ಮನೆಯ ಸದಸ್ಯರಾದ ಲಲಿತಚಂದರು ಸರಕಾರದಲ್ಲಿ ವಿಶ್ವಾಸವಿಲ್ಲೆಂಬ ಸೂಚನೆಯನ್ನು ಮಂಡಿಸುವ ನೋಟೀಸ ಕೊಟ್ಟಿದ್ದಾರೆ ಇತ್ತೀಚೆಗೆ ಕಲಕತ್ತೆಯಲ್ಲಾದ ದುರಂತದ ಸಂಬಂಧದಲ್ಲಿ ಈ ಸೂಚನೆ ಕಳಿಸಿದ್ದಾಗಿದೆ.

೧೯೩೭ ಕ್ಕಿಂತ ಮುಂಚಿನವಾಗಿ ಸೆರೆಹಿಡಿಯಲ್ಪಟ್ಟ ೨೯ ಕ್ರಾಂತಿಕಾರಕ ಕೈದಿಗಳನ್ನು ಕಲಕತ್ತಾ ಹಾಗೂ ಡಾಕಾ ಜೇಲುಗಳಿಂದ ಬಂಗಾಲ ಸರಕಾರ ಬಿಡುಗಡೆ ಮಾಡಿದೆ. ಈ ಕೈದಿಗಳು ಇಲ್ಲಿಯ ವರೆಗೆ ೧೦ ರಿಂದ ೧೬॥ ವರ್ಷ ಶಿಕ್ಷೆ ಅನುಭವಿಸಿದ್ದಾರೆ. ಬೇರೆ ಬೇರೆ ಪ್ರಕರಣಗಳಲ್ಲಿ ಇವರೆಲ್ಲರಿಗೆ ಕರೇ ನೀರಿನ ಶಿಕ್ಷೆಯಾಗಿತ್ತು.

ಜಮಶೇದಪೂರದಲ್ಲಿಯ ಟಾಟಾ ಉಕ್ಕಿನ ಕಾರಖಾನೆಯಲ್ಲಿ ೫೦ ಸಾವಿರ ಕೆಲಸಗಾರರು ಸಪ್ಟೆಂಬರ ೧೦ ಕ್ಕೆ ತಾವು ಸಂಪು ಹೂಡುವದಾಗಿ ಮೇಲಧಿಕಾರಿಗಳಿಗೆ ತಿಳಿಸಿದ್ದಾರೆ. ವಸತಿ ಸೌಕರ್ಯ ಬೋನಸ್ಸು ಮೊದಲಾದ ಅವರ ಬೇಡಿಕೆಗಳನ್ನು ಅಧಿಕಾರಿಗಳು ನಿರಾಕರಿಸಿದ್ದಾರೆ.

ಪಂಜಾಬ

ಸರದಾರ ಬಲದೇವಸಿಂಗರು ಮಧ್ಯಂತರ ಸರಕಾರದಲ್ಲಿ ಮಂತ್ರಿಗಳಾಗಿ ನೇಮಿಸಲ್ಪಟ್ಟದ್ದರಿಂದ ಅವರ ಸ್ಥಳದಲ್ಲಿ ಅಕಾಲಿಸಂಘದ ಧುರೀಣರೂ ಜಲಂಧರದ ವಕೀಲರೂ ಆಗಿರುವ ಸರದಾರ ಸ್ವರ್ಣಸಿಂಗ ಎಂ. ಎಲ್. ಎ. ಅವರನ್ನು ಸರ್ವಾನುಮತದಿಂದ ಆರಿಸಲಾಗಿದೆ.

ಸಿಂಧು ನದಿಯ ನೀರಿನ ಹಂಚಿಕೆಯ ಬಗ್ಗೆ ಸಿಂಧ ಮತ್ತು ಪಂಜಾಬ ಪ್ರಾಂತಗಳೊಳಗೆ ಸಂಭವಿಸಿರುವ ಕಲಹದನ್ನು ಪ್ರಿವಿ ಕೌನ್ಸಿಲಿನ ಸಲಹೆಗೊಪ್ಪಿಸಲಾಗುವದೆಂದು ತಿಳಿಯುತ್ತದೆ.

ಜಾತೀಯ ಗಲಭೆಯನ್ನು ಹತ್ತಿಕ್ಕುವದಕ್ಕಾಗಿ ಪಂಜಾಬ ಸರಕಾರದವರು ಗುಂಡ ಜನರ ಯಾದಿಯನ್ನು ತಯಾರಿಸಿರುವರು. ಈ ಜನರ ಚಟುವಟಿಕೆಗಳ ಬಗ್ಗೆ ಪೋಲೀಸರು ಲಕ್ಷ ಕೊಡುತ್ತ ಹೋಗುವರು.

ಸರ್ ಶಾಫತ್ ಅಹಮ್ಮದಖಾನರ ಮೇಲಾದ ದಾಳಿಯನ್ನು ನಿಷೇಧಿಸುವ ಗೊತ್ತುವಳಿ ಲಾಹೋರ ನಗರ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಮುಸ್ಲಿಂ ಲೀಗ ಪಕ್ಷದವರು ಗೊತ್ತುವಳಿಯನ್ನು ವಿರೋಧಿಸಿ ಸರ್ ಶಾಫತರು ಮುಸ್ಲಿಮರ ದ್ರೋಹಿಗಳಾದ್ದರಿಂದ ಅವರ ಬಗ್ಗೆ ತಮ್ಮಲ್ಲಿ ಸಹಾನುಭೂತಿ ಇಲ್ಲ ದ್ರೋಹಿಗಳಿಗೆ ತಕ್ಕ ಶಿಕ್ಷೆ ಅವಶ್ಯವೆಂದು ಮುಂತಾಗಿ ಭಾಷಣ ಮಾಡಿದರು. ಆದರೆ ಗೊತ್ತುವಳಿ ಬಹುಮತದಿಂದ ಸ್ವೀಕೃತವಾಯಿತು.

ಸರಹದ್ದ

ಅಬೋತಾಬಾದದ ಹತ್ತಿರುವ ಧಾಮತೂಕ ಎಂಬ ಹಳ್ಳಿಯಲ್ಲಿ ೧೩ ಅಂಗಡಿಗಳು ಸುಡಲ್ಪಟ್ಟಿರುವವರೆಂದು ಗೊತ್ತಾಗುತ್ತದೆ. ಮುಖ್ಯ ಮಂತ್ರಿ ಡಾ. ಖಾನಸಾಹೇಬರು ಈ ಹಳ್ಳಿಯ ಎಲ್ಲ ಜಾತಿಯ ಪ್ರಮುಖರನ್ನು ಸಂದರ್ಶಿಸಿ ಮುಂದರ ನಿಯಂತ್ರಣದ ಸಲುವಾಗಿ ಮುಂಜಾಗ್ರತೆಯ ವ್ಯವಸ್ಥೆ ಮಾಡಿದ್ದಾರೆ.

ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷರೂ ಅಖಿಲ ಭಾರತ ಸಂಸ್ಥಾನ ಪ್ರಜಾ ಪರಿಷತ್ತಿನ ಉಪಾಧ್ಯಕ್ಷರೂ ಆದ ಶೇಖ ಅಬ್ದುಲ್ಲಾರ ಖಟ್ಲೆಯ ತೀರ್ಪು ಯಾವ ಕಾರಣದಿಂದಲೊ ಮುಂದೆ ಬಿದ್ದಿದೆ. ಅವರ ಖಟ್ಲೆ ವಿಚಾರಣೆಗಾಗಿ ನಿಯಮಿಸಲ್ಪಟ್ಟ ನ್ಯಾಯಾಲಯವು ಅನಿಶ್ಚಿತ ಅವಧಿ ವರೆಗೆ ಮುಂದರಿಯಿತು.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಡಿ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಸಪ್ಟಂಬರ ೯ ರಿಂದ ೧೫ ರ ವರೆಗೆ

ಮೇಷ

ನಿಮ್ಮ ಪ್ರಕೃತಿ ಸಾಧಾರಣವೆ. ವಿಶೇಷತಃ ರಕ್ತ ಪ್ರಕೋಪದ ವಿಕಾರದ ಅಂಜಿಕೆ. ಹೆಂಡತಿಯ ಪ್ರಕೃತಿ ಉತ್ತಮ ಆದರೆ ಉಭಯತರಲ್ಲಿ ಸಣ್ಣ ದೊಡ್ಡ ಕೆಲಸಗಳಲ್ಲಿ ತೀರ ಭಿನ್ನ ಭಿನ್ನ ಮತ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಮಕ್ಕಳಲ್ಲಿ ಉತ್ಕರ್ಷ ಆದರೆ ವರ್ತನೆ ಮನಸಸ್ಸನ್ನು ನೋಯಿಸುವಂತಹದು ಉದ್ಯೋಗದಲ್ಲಿ ಉತ್ತಮ ಪ್ರಗತಿ. ದೊಡ್ಡ ಪ್ರತಿಷ್ಠೆ ಆದರೆ ಪೂರ್ಣ ಲಾಭವಾಗುವದರಲ್ಲಿ ಕಾಯಿದೆಯ ಇಲ್ಲವೆ ನಿರರ್ಥಕ ಅಡತಣೆಗಳ ವಿಷಯಗಳು ಉತ್ಪನ್ನವಾಗುವ ಅಂಜಿಕೆ. ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು ಮತ್ತು ಶತ್ರುಗಳು ಪೂರ್ಣ ಪರಾಜಯ ಹೊಂದುವರು. ಮಿತ್ರತ್ವದಲ್ಲಿ ಮಾತ್ರ ವಿರೋಧ. ಧಾರ್ಮಿಕ ಕಾರ್ಯದಲ್ಲಿ ಬಹಳ ಭಾಷು ಬೀಳುವಂತೆ ಯಶಸ್ಸು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಭರಣಿಗೆ ಹೆಚ್ಚು ತೊಂದರೆ. ತಾ. ೧೦, ೧೧, ೧೪, ೧೫ ಅನುಕೂಲ.

ವೃಷಭ

ನಿಮ್ಮ ಸ್ವಂತದ ಪ್ರಕೃತಿ ಕೆಡುವದು. ಆದರೆ ಹೆಂಡತಿಯದು ಚೆನ್ನಾಗಿ ಉಳಿಯುವದು. ಉಭಯತರಲ್ಲ ಸ್ವಲ್ಪ ಮತಭೇದವುಳ್ಳದರೂ ಒಟ್ಟಾರೆ ಪ್ರಾಪಂಚಿಕ ಸುಖ ಮನಸಿನಂತೆ ಮಕ್ಕಳಲ್ಲಿ ಒಬ್ಬರು ಬಹಳ ವ್ಯಾತ್ಯಪರ್ತನೆ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಅನಮಾವದಿಂದ ಲಾಭ ಕಡಮೆ. ಆದರೆ ಕುರಿಕುರಿ ಇದ್ದದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಜೊಳ್ಳು ಅನುಕೂಲತೆ. ಪರಸ್ತ್ರೀ ಮೇಲೆ ಕಳ್ಳತನದಿಂದ ಪಾಪದೃಷ್ಟಿಯನ್ನು ಬೀರುವದು. ಮಿತ್ರರಲ್ಲಿ ಇದರಿಂದಲೇ ಕದಾಚಿತ್ ಲಗ್ಗೆ ಹತ್ತುವವರೆಗೆ ವಿರೋಧ. ಪ್ರವಾಸಾದಿ ಕೆಲಸ ಬಹಳ ಸುಖದ್ದು ಕೃತ್ತಿಕೆಯ ೩ ನೆ ರೋಹಿಣಿಯ ೧ ನೇ ೩ನೆ ಮತ್ತು ೪ ನೇ ಹಾಗು ಮೃಗಾದ ೨ ನೆ ಚರಣಗಳಿಗೆ ತೊಂದರೆ ಕಡಮೆ. ತಾ ೮—೧೦—೧೨—ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಸ್ವಲ್ಪಇದ್ದದ್ದೆ ಮಕ್ಕಳಲ್ಲಿ ಉನ್ನತಿ ಅನರವರ ಮನಸಿನ ವಿರುದ್ಧ ಮಿತ್ರರೂ ಕೋರಿಕೆಗೆ ಪ್ರೇಮ ತೋರಿಸುತಿದ್ದರೂ ಒಳಗೆ ಅಡ್ಡ ಪೇಡು ಹಾಕುವುದುಂಟು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ತೀಜಿಯಲ್ಲಿ. ಆದರೆ ಆ ವಿಷಯದ ಪ್ರತಿಯೊಂದು ಮಾತು ಸಾಧ್ಯವಾಗಬೇಕಾದರೆ ತೊಂದರೆಯೂ ವಿಪರೀತ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು ಆದರೆ ಅದು ಉಳಿಸಾವಣಿಗೆ ಅದು ದುರ್ಘಟ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಪುನರ್ವಸುವಿಗೆ ಬಹಳ ತೊಂದರೆ. ತಾ ೧೦-೧೧-೧೪-೧೫ ಅನುಕೂಲ.

ಕರ್ಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸಾಧಾರಣ ಅನುಕೂಲ ಆದರೆ ಮಕ್ಕಳಲ್ಲಿ ಒಬ್ಬರಿಗೆ ಶಾರೀರಿಕ ಕ್ಲೇಶ ಇಲ್ಲವೆ ಅವನ ಪ್ರಗತಿಗಾಗಿ ಸ್ವತಃಕ್ಕೆ ಮಾನಸಿಕ ತೊಂದರೆಯಾಗುವ ಸಂಭವ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಸ್ಥಾವರದಲ್ಲಿ ಬಹಳ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ನಿರೀಕ್ಷಿದ್ದಕ್ಕಿಂತ ಹೆಚ್ಚು ಆದರೆ ಪ್ರತಿಯೊಂದು ಕೆಲಸವಾಗುವವರೆಗೆ ಅಸಹ್ಯವೆನಿಸುವಷ್ಟು ಪರಾವಲಂಬನ. ಮಿತ್ರರು ತಪ್ಪು ಸಲಹೆ ಕೊಡುವರು. ಅನಿಷ್ಟ ಮಾತಿನಲ್ಲಿ ಬೀಳುವ ಅನಿವಾರ್ಯ ಮೋಹ. ಪ್ರವಾಸಾದಿ ಕೆಲಸ ಕಷ್ಟದು ಆದರೆ ಕೊನೆಗೆ ಮನಸಿನಂತೆ. ಪುಷ್ಯಕ್ಕೆ ತೊಂದರೆ ಕಡಿಮೆ. ತಾ ೯—೧೨—೧೩ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ, ಆದರೆ ಹೆಂಡತಿಯದು ದಿನದಿನಕ್ಕೆ ಕೆಡುತ್ತಾ ನಡೆಯುವದು ಅದರಂತೆ ಅವಳ ಸ್ವಭಾವವೂ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅತ್ಯಂತ ಕಷ್ಟಸಾಧ್ಯ. ಆದರೆ ದ್ರವ್ಯ ಲಾಭ ತಂ… ಸಂಗ್ರಹದಲ್ಲಿ ಹೆಚ್ಚಳ. ಬಂಧುವರ್ಗದಲ್ಲಿ ಮತ್ತು ಮಕ್ಕಳಲ್ಲಿ ಅಲ್ಪಸ್ವಲ್ಪ ಉತ್ಕರ್ಷ. ವಿಪರೀತ ವೇಳೆ ನಿಮ್ಮ ಪರಿಸ್ಥಿತಿ ಕೆಟ್ಟದೆಂದು ಅನ್ಯರು ಸುಳ್ಳು ಸುಳ್ಳೇ ಸುದ್ದಿ ಹಬ್ಬಿಸುವ ದುಷ್ಪತನ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು, ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಪೂರ್ವಾಕ್ಕೆ ಹೆಚ್ಚು ತೊಂದರೆ, ತಾ ೧೦—೧೪—೧೫ ಅನುಕೂಲ.

ಕನ್ಯಾ

ಪ್ರಕೃತಿಗೆ ಬಹಳ ಕ್ಲೇಶ. ಅದಕ್ಕಿಂತ ಮಾನಸಿಕ ಯಾತನೆ ವಿಪರೀತ. ಹೆಂಡತಿಗೂ ನಿಮ್ಮಂತೆ ಕೌಟುಂಬಿಕ ವಿಷಯಗಳಲ್ಲಿ ಕೆಲವು ಹಿತಕರ ಆದರೆ ಹಲವು ಹಿತದೂಷಿತ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ. ಹಾನಿ ಹೋಗುವ ಅಂಜಿಕೆ. ಸಮರ್ಥರೊಡನೆ ವೈರ ಮಾಡುವ ಹುಚ್ಚುತನ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ವೆಚ್ಚ ಅನಿವಾರ್ಯ. ಬಂಧುವರ್ಗದೊಡನೆ ಸ್ಪರ್ಧೆ. ಮಿತ್ರಸುಖ ಅನುಕೂಲ. ಪ್ರವಾಸ ಸಾಧಾರಣ ಅನುಕೂಲ. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಬಹಳ ಕೆಟ್ಟ. ಆದರೆ ಉತ್ತರಾದ ೩, ಹಸ್ತಾದ ೧—೩ ಮತ್ತು ೪ ಹಾಗು ಚಿತ್ರಾದ ೨ ನೆ ಚರಣಗಳಿಗೆ ತೊಂದರೆ ಕಡಮೆ. ತಾ ೯—೧೨—೧೩ ಸ್ವಲ್ಪ ಅನುಕೂಲ

ತುಲಾ

ಪ್ರಕೃತಿ ಸ್ವಂತದ್ದು ಅನುಕೂಲ. ಆದರೆ ಹೆಂಡತಿಯದು ಕೆಟ್ಟದ್ದೇ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ವಿರೋಧ ಕಾಲಕಾಲಕ್ಕೆ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಅನುಕೂಲ. ಆದರೆ ವೆಚ್ಚ ಹೆಚ್ಚು. ಪ್ರತಿಯೊಂದು ಮಾತಿನಲ್ಲಿ ತಕರಾರು ತಪ್ಪು ತಿಳಿವಳಿಕೆ ನಿರರ್ಥಕ ವೆಚ್ಚ ಇವು ಇದ್ದವೆ. ಮಿತ್ರ ಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸಾದಿ ಕೆಲಸ ಒಟ್ಟಾರೆ ಅನುಕೂಲ ಸ್ವಾತಿಗೆ ತೊಂದರೆ ಕಡಮೆ. ತಾ. ೧೦—೧೧—೧೫ ಅನುಕೂಲ.

ವೃಶ್ಚಿಕ

ನಿಮ್ಮ ಪ್ರಕೃತಿ ಅನುಕೂಲ, ಆದರೆ ಹೆಂಡತಿಯದು ಮತ್ತು ಮಕ್ಕಳದು ಕೆಡುವ ಸಂಭವ ಅಲ್ಲದೆ ಒಬ್ಬರೊಬ್ಬರಲ್ಲಿ ಮೇಲಿಂದ ಮೇಲೆ ಮತಭೇದ ವಿಪರೀತ ವೆಚ್ಚವಾದರೂ ಪ್ರಾಪಂಚಿಕ ಸುಖದ ಬದಲು ತೊಂದರೆಯೆ ಹೆಚ್ಚು. ಉದ್ಯೋಗದಲ್ಲಿ ಮಾತ್ರ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಎಲ್ಲದರಲ್ಲಿ ಪ್ರತಿಷ್ಠೆ ಶಿಖರಕ್ಕೆ ಮುಟ್ಟುವ ಸುಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಅನುಕೂಲವೆಂದು ಹೇಳಬಹುದು, ಅನುರಾಧೆಗೆ ತೊಂದರೆ ಕಡಮೆ. ತಾ ೯—೧೨—೧೩ ಅನುಕೂಲ.

ಧನು

ಪ್ರಕೃತಿ ಉತ್ತಮ, ಆದರೆ ಪ್ರಾಪಂಚಿಕ ಸುಖದಲ್ಲಿ ಅಸ್ವಸ್ಥತೆಯಾಗುವಂತಹ ಕೆಲ ಘಟನೆಗಳು. ಉದ್ಯೋಗದಲ್ಲಿ ದೊಡ್ಡ ಪ್ರಗತಿ. ತುಂಬ ಲಾಭ ಮತ್ತು ಅಟ್ಟಹಾಸ ತೋರಿಸಲಿಕ್ಕೆ ಬರುವಷ್ಟು ಪ್ರತಿಷ್ಠೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿಯಾದರೂ ಶತ್ರುಗಳ ಎಲಬುಸೈಲಾಗುವಷ್ಟು ದೊಡ್ಡ ವಿಜಯ. ಮಿತ್ರ ಸುಖ ಉತ್ತಮ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಆದರೆ ಪೂರ್ವಾಷಾಢಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ ೯, ೧೦, ೧೪, ೧೫ ಅನುಕೂಲ.

ಮಕರ

ಪ್ರಕೃತಿ ಮತ್ತುಪ್ರಾಪಂಚಿಕಸುಖಅನುಕೂಲವಾದದು ಆದರೆ ಮಕ್ಕಳು ಬೇಕಂತೆ ಇಲ್ಲವೆ ತಿಳಿಯದಲೆ ಕೇಡು ಮಟ್ಟಿಗೆ ತೊಂದರೆ ಕೊಡುವರು. ಉದ್ಯೋಗದಲ್ಲಿ ಉತ್ತಮ ಪ್ರಗತಿಯಿಲ್ಲದಿದ್ದರೂ ಪ್ರತಿಷ್ಠೆ ಮತ್ತು ಲಾಭ ಮನಸಿನಂತೆ. ಪ್ರತಿಯೊಂದು ಕೆಲಸದಲ್ಲಿ ನಿಮ್ಮ ಮತಸ್ವಲ್ಪ ಮಟ್ಟಿಗೆ ದ್ವಿಧಾ ಆಗುವದು. ಆದರೆ ಪ್ರತ್ಯಕ್ಷ ಕಾರ್ಯ ಮಾಡಲು ಹೋದರೆ ಅದು ಬಹಳ ಯಶಸ್ವಿ ಪ್ರವಾಸ ಮತ್ತು ಪತ್ರವ್ಯವಹಾರ ತೊಂದರೆಯದು ಆದರೆ ಭೆಟ್ಟಿ ಯಶಸ್ವಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾತ್ರ ಪ್ರತಿಪಕ್ಷಿಗಳ ಜೋರು. ಉತ್ತರಾಷಾಢಾದ ೩ನೆ ಶ್ರವಣಾದ ೧ನೆ ೩ನೆ ಮತ್ತು ೪ನೇ ಹಾಗು ಧನಿಷ್ಠೆಯ ೨ನೆ ಚರಣಗಳಿಗೆ ತೊಂದರೆ ಕಡಮೆ, ತಾ. ೯, ೧೦, ೧೧, ೧೨ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ. ಅದಕ್ಕಿಂತ ಹೆಂಡತಿಯದು ಬಹಳ ಉತ್ತಮ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸ್ಥಿತಿ ಅನುಕೂಲ ಆದರೆ ಸಮಾಧಾನ ಕಡಮೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಮಿತ್ರ ಸುಖ ಉತ್ತಮ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಶತತಾರಿಕೆಗೆ ತೊಂದರೆ ಕಡಮೆ. ತಾ. ೧೦, ೧೧, ೧೪, ೧೫ ಅನುಕೂಲ.

ಮೀನ

ನಿಮ್ಮದು ಮತ್ತು ಅದರಂತೆ ನಿಮ್ಮ ಹೆಂಡತಿಯ ಆರೋಗ್ಯಕ್ಕೆ ಕಿರುಕಳ ಕಾಯಿಲೆ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಲಾಭ ಆದರೆ ಪ್ರತಿಷ್ಠೆ ಸಾಮಾನ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳೂ ಅಷ್ಟೆ ಹಾನಿ ಹೊಂದುವವು ಪ್ರವಾಸ, ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಉತ್ತರಾಭಾದ್ರಪದಕ್ಕೆ ತೊಂದರೆ ಕಡಮೆ. ತಾ. ೯, ೧೪, ೧೫ ಅನುಕೂಲ.

ಕರ್ನಾಟಕದಲ್ಲಿ

ಧಾರವಾಡ

ಧಾರವಾಡ ಜಿಲ್ಲಾ ಕಾಂಗ್ರೆಸ ಕಮಿಟಿಯ ವಾರ್ಷಿಕ ಸಭೆ ಇದೇ ೧೫ ಕ್ಕೆ ಜರುಗಿ ಹಿಂದಿನ ವರುಷದ ವರದಿಯ ಸ್ವೀಕಾರ ಮತ್ತು ಮುಂದಿನ ವರುಷದ ಅಧಿಕಾರಿಗಳ ಆಯ್ಕೆ ಮೊದಲಾದ ಕಾರ್ಯಕ್ರಮ ನಡೆಯುವವು.

ನ್ಯಾಯಮೂರ್ತಿ ಲೋಕೂರರು ಮುಂಬಯಿ ಹಾಯಕೋರ್ಟನಿಂದ ನಿವೃತ್ತರಾದ ನಂತರ ಕೊಲ್ಹಾಪುರ ಮತ್ತು ದಕ್ಷಿಣ ಸಂಸ್ಥಾನಗಳ ಸಂಯುಕ್ತ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಿಸಲ್ಪಡುವರೆಂದು ತಿಳಿಯುತ್ತದೆ.

ಗದಗ ನಗರ ಸಭೆಯ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯ ಸಂಬಂಧದಲ್ಲಿ ಕಲೆಕ್ಟರ ಕಡೆಗೆ ತಕರಾರು ಹೋಗಿತ್ತಷ್ಟೆ. ಕಲೆಕ್ಟರರು ಅಂದು ನಡೆದ ಕಾರ್ಯಕಲಾಪಗಳು ಅಕ್ರಮವೆಂದು ನಿರ್ಣಯಿಸಿ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯ ನಿರ್ಣಯವನ್ನು ರದ್ದುಗೊಳಿಸಿದ್ದಾರೆ.

ಧಾರವಾಡದಲ್ಲಿ ಬ್ರಾಹ್ಮಣ ವಿದ್ಯಾರ್ಥಿ ನಿಲಯವೊಂದು ಮೊನ್ನಿನ ಗಣೇಶ ಚತುರ್ಥಿಯ ಶುಭ ಮುಹೂರ್ತದಲ್ಲಿ ಸ್ಥಾಪಿತವಾಗಿದೆ. ಬಡವ ಬುದ್ಧಿವಂತ ನಿರೋಗಿ ಸದ್ಗುಣಿಯಾದ ಹನ್ನೊಂದರಿಂದ ಹದಿನಾಲ್ಕು ವರುಷದೊಳಗಿನ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಇದರಲ್ಲಿ ಪ್ರವೇಶ ಸಿಕ್ಕುವದು. ಈ ನಿಲಯಕ್ಕೆ ಈಗಾಗಲೆ ಧನಸಹಾಯ ಸಿಕ್ಕಹತ್ತಿದೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಧಾರವಾಡ ಜಿಲ್ಲಾ ಲೋಕಲ್ ಬೋರ್ಡ ಚುನಾವಣೆಗೆ ಕಾಂಗ್ರೆಸ್ಸಿನ ಪರವಾಗಿ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ನಿರ್ಧರಿಸಿದ್ದಾರೆ ಇದೇ ನವಂಬರ ೨೫ ಕ್ಕೆ ಚುನಾವಣೆ ನಡೆಯುವದು. ಕಾಂಗ್ರೆಸ್ಸಿನ ಪರವಾಗಿ ನಿಲ್ಲಬಯಸುವವರು ಅರ್ಜಿ ಕೊಡಬೇಕೆಂದು ಪ್ರಕಟಿಸಲಾಗಿದೆ.

ಕಲಘಟಗಿಯಿಂದ ಹುಬ್ಬಳ್ಳಿಗೆ ಮೂರು ಚೀಲ ಅಕ್ಕಿ ಕಳಿಸಲು ಪ್ರಯತ್ನಿಸಿದರೆಂದು ಸಂರಕ್ಷಣ ಕಾಯಿದೆಯನ್ವಯ ಶಿಕ್ಷೆಗೆ ಗುರಿಯಾಗಿದ್ದ ಎಂ ಆರ್. ಗೊರವನಕೊಳ್ಳ ಫೌಜದಾರರು ಜಿಲ್ಲಾ ಜಜ್ಜರಲ್ಲಿ ಮಾಡಿಕೊಂಡ ಅಪೀಲಿನಲ್ಲಿ ನಿರ್ದೋಷಿಗಳೆಂದು ಮುಕ್ತರಾದರು.

ವಿಜಾಪುರ

ಹುನಗುಂದದಲ್ಲಿರುವ ಗೋಕರ್ಣದ ರಾಮಕೃಷ್ಣ ಯಲ್ಲಾಪುರಕರ ಇವರ ಮಗ ಸುಭಾಷಚಂದ್ರನಿಗೆ ಜ್ವರ ಬಂದ ಮೂಲಕ ಅವರ ಮನೆಯವರು ಗೋಕರ್ಣದಿಂದ ಅವರಿಗೆ ೨೪ ಕ್ಕೆ ಕಳಿಸಿದ ತಂತಿ ೨೬ ಕ್ಕೆ ಮುಟ್ಟಿತು. ತಂತಿ ಸಿಪಾಯಿಯೊಂದಿಗೆ ಪೋಲೀಸರೂ ಬಂದು ಅವರನ್ನು ಪೋಲಿಸ ಕಚೇರಿಗೆ ಕರೆದುಕೊಂಡು ಹೋದರು. ಅಲ್ಲಿ ಅವರ ಮನೆ ಮುಂತಾದ್ದರ ಬಗ್ಗೆ ತಪಾಸ ಮಾಡಿ ತಿರುಗಿ ಕಳಿಸಿದರು.

ಮುಂಬಯಿ ಸೆಂಚರಿ ಮಿಲ್ಲಿನಲ್ಲಿ ಡಾಯಿಂಗ ಮತ್ತು ಬ್ಲೀಚಿಂಗ ಖಾತೆಯ ಮುಖ್ಯಸ್ಥರಾಗಿದ್ದ ಶ್ರೀ ಕೊಣ್ಣೂರ ಬಿಂದೂರಾಯರು ಜವಳಿ ರಸಾಯನದಲ್ಲಿ ಹೆಚ್ಚಿನ ಅಭ್ಯಾಸ ಮಾಡಲು ಇಂಗ್ಲಂಡ ಮತ್ತು ಅಮೇರಿಕೆಗೆ ಈ ತಿಂಗಳು ಮೊದಲನೆ ವಾರದಲ್ಲಿ ತೆರಳಿದರು.

[೬ ನೇ ಪುಟದಿಂದ ಬಂದದ್ದು]

ಅಲ್ಪಸಂಖ್ಯಾಕರು ಏಕೀಕೃತ ಕರ್ನಾಟಕದಲ್ಲಿ ಭಯಪಡುವ ಕಾರಣವಿಲ್ಲೆಂದೂ ಅವರಿಗೆ ಯೋಗ್ಯ ಸಂರಕ್ಷಣೆ ಕೊಡಲಾಗುವದೆಂದೂ ಅಶ್ವಾಸನವಿತ್ತರು.

ಮುಂದಿನ ಕಾರ್ಯ

ಇನ್ನು ನಾವು ಮಾಡಬೇಕಾದದ್ದೇನು ಎಂಬುದರ ಅಲ್ಪ ಸ್ವಲ್ಪ ರೂಪರೇಷೆಯನ್ನು ಒಂದೆರಡು ಮಾತಿನಲ್ಲಿ ಜಡಿಸಿ ತೋರಿಸುತ್ತೇನೆ. ಎಂದರೆ ಏನು? ತೋರಿಸಲು ಯತ್ನಿಸುತ್ತೇನೆ.

ಮುಖ್ಯವಾಗಿ ಈ ಮಹಾಪರಿಷತ್ತು ತನ್ನ ಉದ್ದೇಶ ಸಾಧನೆಗಾಗಿ ಒಂದು ಉಪಸಮಿತಿ ನಿಯಮಿಸುತ್ತದೆ ಅದು ಅಧಿಕೃತವಾದದ್ದೂ ಪ್ರಭಾವಶಾಲಿಯಾದದ್ದೂ ಅಗಲೇಬೇಕು. ಸರ್ವ ಕನ್ನಡಿಗರ ಧ್ವನಿ-ಶಕ್ತಿಗಳು ಅದರಲ್ಲಿ ಕೇಂದ್ರೀಕೃತವಾಗಬೇಕು.

ಆ ಸಮಿತಿಯು ಸಾಧಿಸಬೇಕಾಗಿರುವ ಕೆಲ ಪ್ರಾಮುಖ್ಯ ಕೆಲಸಗಳು.

ಮೊದಲನೆಯದಾಗಿ ಘಟನಾ ಸಮಿತಿಯ ಎದುರು ಕರ್ನಾಟಕ ಪ್ರಾಂತ ನಿರ್ಮಾಣದ ಪ್ರಶ್ನೆಯನ್ನು ಸ್ಪಷ್ಟ ರೀತಿಯಿಂದ ಪ್ರತಿಪಾದಿಸುವುದು;

ಎರಡನೆಯದಾಗಿ ಈ ಪರಿಷತ್ತಿನ ಧ್ಯೇಯ ಸಾಧಿತವಾಗುವಂತೆ ಕನ್ನಡ ನಾಡಿನ ಒಳಗೂ ಹೊರಗೂ ರಭಸವಾದ ಪ್ರಚಾರವನ್ನು ಕೈಕೊಳುವುದು;

ಮೂರನೆಯದಾಗಿ ಕರ್ನಾಟಕ ಸಂಸ್ಥಾನಗಳ ಅಧಿಪತಿಗಳೊಂದಿಗೆ ಸಂಬಂಧ ಬೆಳೆಸಿ ಏಕೀಕರಣದ ಪ್ರಶ್ನೆ ಸುಲಭವಾಗಿ ಬಗೆಹರಿಯುವಂತೆ ಅವರ ಮನವನ್ನೊಲಿಸುವುದು;

ಇನ್ನು ಕೊನೆಯದಾಗಿ ತಂತಮ್ಮ ನಾಡಿನ ಏಕೀಕರಣಕ್ಕಾಗಿ ನಮ್ಮಂತೆಯೆ ಸಾಹಸ ಪ್ರಯತ್ನಗಳನ್ನು ನಡೆಸಿರುವ ಸೋದರ ಪ್ರಾಂತಗಳೊಂದಿಗೆ ಸಂಬಂಧ ಬೆಳೆಸಿ ಏಕೀಕರಣದ ಬೇಡಿಕೆಯನ್ನು ಇನ್ನೂ ಬಲವತ್ತರಗೊಳಿಸುವುದು.

"ನಾವೆಲ್ಲರೂ ಒಂದಾಗೋಣ"
ಶಕ್ತರಾಗೋಣ, ತೇಜಸ್ವಿಗಳಾಗೋಣ

ಹಿಂದುಸ್ತಾನದಲ್ಲಿ ನಡುಗಾಲ ಸರಕಾರದ ಸ್ಥಾಪನೆ

(೪ನೇ ಪುಟದಿಂದ ಬಂದುದು)

ಕೋರಿದ್ದಾರೆ. ಸಪ್ಟಂಬರ ೨ ನೇ ತಾರೀಕು ಸಾಯಂಕಾಲ ಹೊಸದಿಲ್ಲಿಯಲ್ಲಿ ಪ್ರಾರ್ಥನಾ ಸಭೆಯಲ್ಲಿ ಮಾತಾಡುತ್ತ "ಪೂರ್ಣ ಸ್ವರಾಜ್ಯದ ಬಾಗಿಲು ಕೊನೆಗೊಮ್ಮೆ ತೆರೆಯಿತು. ಇಡೀ ಹಿಂದುಸ್ತಾನ ಅನೇಕ ವರುಷಗಳಿಂದ ಈ ದಿವಸದ ಬಗ್ಗೆ ದಾರಿ ನೋಡುತಿದ್ದಿತಲ್ಲದೆ ಸಂಕಟಗಳನ್ನೂ ಸಹಿಸಿರುವದು. ನಡುಗಾಲ ಸರಕಾರದ ಅಧಿಕಾರ ವಹಿಸಿದ ತಮ್ಮ ಅನಭಿಷಿಕ್ತ ಅರಸರಾದ ಪಂ ಜವಾಹರಲಾಲ ಮತ್ತು ಅವರ ಜೊತೆಗಾರರು ಅವರಿಂದ ಜನರು ಬಯಸಿದ ನಿಜವಾದ ಸೇವೆಯನ್ನು ಸಲ್ಲಿಸಿದಾಗಲೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕುವದು. ಇಂದಿನ ದಿನವು ಹಿಂದುಸ್ತಾನದ ಇತಿಹಾಸದಲ್ಲಿ ಸಂಸ್ಮರಣೀಯವಾಗಿದ್ದರೂ ದೀಪೋತ್ಸವ ಮೊದಲಾದವುಗಳನ್ನು ಮಾಡುವಂತಿಲ್ಲ. ನಮ್ಮ ಮಂತ್ರಿಗಳು ಅಲ್ಲಿ ತಮ್ಮ ಕರ್ತವ್ಯವೆಂದು ಮುಳ್ಳಿನ ಕಿರೀಟ ಧರಿಸಲು ಹೋಗಿರುವರೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಕಾಂಗ್ರೆಸ್ಸಿನ ತರುವಾಯ ಬಲಿಷ್ಠ ಹಾಗು ಮುಸಲ್ಮಾನರ ಪ್ರಾತಿನಿಧಿಕ ಸಂಸ್ಥೆಯಾದ ಮುಸ್ಲಿಂ ಲೀಗು ನಡುಗಾಲ ಸರಕಾರದಲ್ಲಿ ಸೇರಿರುವದಿಲ್ಲ ಹಿಂದುಗಳು ತಮ್ಮನ್ನು ಮೋಸಗೊಳಿಸಿ ಎವರೆಂದು ಲೀಗಿನ ಹೇಳಿಕೆ. ಆದುದರಿಂದ ಅವರು ಈ ದಿನವನ್ನು ಶೋಕದಿನವೆಂದು ಪಾಲಿಸುವರು. ಹಿಂದುಗಳು ಅವರ ಮೇಲೆ ಪ್ರತಿಯಾಗಿ ಸಿಟ್ಟಿಗೇಳತಕ್ಕದ್ದಲ್ಲ. ಅಥವಾ ಪೆಟ್ಟಿಗೆ ಪ್ರತಿಯಾಗಿ ಪೆಟ್ಟು ಕೊಡತಕ್ಕದ್ದಲ್ಲ. ಅವರೊಡನೆ ಶೋಕಿಸುವಂತಿಲ್ಲದಿದ್ದರೂ ಹಿಂದುಗಳುದೀಪೋತ್ಸವ ಅಥವಾ ಇತರ ಬಗೆಯ ಆನಂದ ಪ್ರದರ್ಶನದಲ್ಲಿ ತೊಡಗತಕ್ಕದ್ದಲ್ಲ ತಾಳ್ಮೆಯಿಂದಿರತಕ್ಕದ್ದು.

ಲೀಗು, ನಮ್ಮ ಹಾಗು ಬ್ರಿಟಿಶ್ ಸರಕಾರದ ವಿರುದ್ಧ ಪ್ರತ್ಯಕ್ಷ ಹೋರಾಟ ಹೂಡಲು ನಿರ್ಧರಿಸಿದೆ. ಒಂದೇ ಕಾಲಕ್ಕೆ ಎರಡು ಕುದುರೆಗಳ ಸವಾರಿ ಅದು ಮಾಡಲಾರದು. ಅದು ಬ್ರಿಟಿಶರ ವಿರುದ್ಧ ಅಸಹಕಾರ ಹೂಡಿದರೆ ನಮ್ಮಗೂಡ ಸಹಕಾರ ಮಾಡಿದಂತೆಂದೆ ಅದರ ಅರ್ಥವಾಗುವದು. ಅಂದ ಮೇಲೆ ಬಾಂಧುಗಳೊಡನೆ ಈ ವಿರೋಧ ವೇಕೆ? ಇಸ್ಲಾಮುದ ಅರ್ಥ ನನಗೆ ಚೆನ್ನಾಗಿ ಗೊತ್ತಿದ್ದು ಅದರಲ್ಲಿ ಹೀಗೆ ಹೇಳಿಲ್ಲ. ಕಾಂಗ್ರೆಸ್ಸು ಮುಸಲ್ಮಾನರ ವಿರುದ್ಧ ಎಂದೂ ಬ್ರಿಟನನ್ನು ಕೂಡಿಕೊಳ್ಳಲಾರದು. ಇಡೀ ಹಿಂದುಸ್ತಾನಕ್ಕೆ ವಿಶುದ್ಧವಾದ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವದೇ ಒಂದು ಉದ್ದೇಶದಿಂದ ನಡುಗಾಲ ಸರಕಾರದಲ್ಲಿ ಕಾಂಗ್ರೆಸ್ಸು ಸೇರಿದೆ.

ಕಾಂಗ್ರೆಸ್ ಮಂತ್ರಿಗಳ ಕರ್ತವ್ಯ

ಈ ಸಂದರ್ಭದಲ್ಲಿ ಕಾಂಗ್ರೆಸ್ ಮಂತ್ರಿಗಳು ಏನು ಮಾಡಬೇಕೆಂಬ ಪ್ರಶ್ನೆ ಉದ್ಭವವಾಗುವದು. ಹೊಸ ಸರಕಾರದ ಮೊದಲನೆ ಕರ್ತವ್ಯ ಉಪ್ಪಿನ ಕರವನ್ನು ಸಮೂಲ ಕಿತ್ತಿ ಹಾಕುವದಾಗಿದೆ. ಅಂದರೆ ದೂರದ ಹಳ್ಳಿಯಲ್ಲಿಯ ಅತಿ ಬಡವನಿಗೂ ಸ್ವಾತಂತ್ರ್ಯದ ಉದಯವಾಗಿದೆಂದು ಸಹಜ ಗೊತ್ತಾಗುವದು. ಮತ್ತು ಇದರಲ್ಲಿ ಹಿಂದುಸ್ತಾನದ ಹಿಂದೂ ಮುಸಲ್ಮಾನ ಮತ್ತು ಇತರ ಬಡವರೆಲ್ಲರೂ ಬರುವರು. ಜಾತೀಯ ಐಕ್ಯವನ್ನು ಸಾಧಿಸುವದು ಎರಡನೆಯ ಮಹತ್ವ ಕರ್ತವ್ಯ ಉಪ್ಪಿನ ಕರದ ನಿರ್ಮೂಲನದಂತೆ ಜಾತೀಯ ಐಕ್ಯವನ್ನು ಕ್ಷಣಾರ್ಧದಲ್ಲಿ ಸಾಧಿಸುವಂತೆ ಮಂತ್ರಿಗಳು ಅವಕ್ಕಾಗಿ ಪ್ರಯತ್ನಿಸಿ ಜೀವ ಕೊಡಬೇಕಾಗುವದು. ಮಿಲಿಟರಿ ಸಹಾಯವನ್ನು ಅವರು ಕೇಳಕೂಡದು. ಇಷ್ಟೂ ಮೀರಿ ಮುಸಲ್ಮಾನರು ಹಿಂದುಗಳು ಹೋರಾಡುವದೇ ಆದರೆ ಅವರು ತಮ್ಮೊಳಗೆ ಶೂರತನದಿಂದ ಹೋರಾಡಲಿ. ರಕ್ಷಣೆಗಾಗಿ ಬ್ರಿಟಿಶ್ ಶಸ್ತ್ರಾಸ್ತ್ರಗಳನ್ನವಲಂಬಿಸಿರುವವರೆಗೆ ನಿಜವಾದ ಸ್ವಾತಂತ್ರ್ಯ ಶಕ್ಯವಿಲ್ಲ ಇದೇ ರೀತಿಯಾಗಿ ಅಸ್ಪೃಶ್ಯತೆಯು ಸಂಪೂರ್ಣ ನಿವಾರಣೆಯಾಗಬೇಕು.

ಜನರ ನಗ್ನತೆಯನ್ನು ಮುಚ್ಚಲು ನಾವು ಖಾದೀ ಪ್ರತಿಜ್ಞೆಯನ್ನು ಪೂರೈಸಬೇಕಾಗಿದೆ ಹಳ್ಳಿಗಳಲ್ಲಿ ನೂಲಲು ಹಾಗು ನೆಯ್ಯಲು ಹಚ್ಚಿ ಬಟ್ಟೆಯ ವಿಷಯದಲ್ಲಿ ಅವುಗಳನ್ನು ಸ್ವಯಂಪೂರ್ಣ ಮಾಡಬೇಕು. ನಡುಗಾಲ ಸರಕಾರವು ತನ್ನ ಕಚೇರಿಗಳನ್ನು ಮತ್ತು ಮನೆಗಳನ್ನು ಖಾದಿಯಿಂದ ಅಲಂಕರಿಸಬಯಸುತಿದ್ದರೆ, ಮಿತ್ರನಂತೆ ನನ್ನಲ್ಲಿ ಬಂದಲ್ಲಿ ನಾನು ಅವರಿಗೆ ಅವಶ್ಯಕವಾದ ನೂಲು ಪೂರಯಿಸಿ ಕೊಟ್ಟು ಖಾದಿ ದೊರಕಿಸಿಕೊಡುವೆನು.

ನಡುಗಾಲ ಸರಕಾರ ಸರಿಯಾದ ಮಾರ್ಗ ತೋರಿಸಿ ಕೊಟ್ಟು ಹಿಂದುಸ್ತಾನವನ್ನು ಸತ್ಯ ಪಾವಿತ್ರ್ಯ ಹಾಗು ನಿಜವಾದ ಸ್ವರಾಜ್ಯದ ಮಾರ್ಗ ಹಿಡಿಸುವದೆಂದು ಆಶಿಸುತ್ತೇನೆ ಪ್ರತಿಯೊಬ್ಬ ಹಿಂದೀಯನು ಅವರ ಪ್ರಯತ್ನದಲ್ಲಿ ನಿಷ್ಠೆಯಿಂದ ಸಹಕರಿಸಬೇಕು.

ಮುಂಬಯಿಯಲ್ಲಿ ಜಾತೀಯ ದಂಗೆ

೧೪೬ ಮರಣ; ೫೩೦ ಜನರಿಗೆ ಗಾಯ

ಕೇಂದ್ರದಲ್ಲಿ ಹೊಸ ರಾಷ್ಟ್ರೀಯ ಸರಕಾರ ಮುಸ್ಲಿಂ ಲೀಗಿನ ಸಹಕಾರವಿಲ್ಲದೆ ಸ್ಥಾಪಿತವಾದುದರಿಂದ ಉಂಟಾದ ದ್ವೇಷದ ಫಲವಾಗಿ ಮುಂಬಯಿಯಲ್ಲಿ ಜಾತೀಯ ಗಲಭೆಗಳು ನಡೆದು ಈ ವರೆಗೆ ೧೪೬ ಜನರಿಗೆ ಮರಣ ೫೩೦ ಜನರಿಗೆ ಗಾಯ ಸಂಭವಿಸಿದೆ. ಪರಿಸ್ಥಿತಿಯನ್ನು ಹಿಡಿತಕ್ಕೆ ತರಲು ಶಕ್ತ ಪ್ರಯತ್ನಗಳನ್ನು ನಡೆಸಿ ಮಿಲಿಟರಿ ಮತ್ತು ಪೋಲೀಸ ಕಾವಲು ಹೆಚ್ಚಿಸಿದ್ದಲ್ಲದೆ ಅನೇಕ ಸಾರೆ ಗೋಳಿಬಾರನ್ನು ಕೂಡ ಮಾಡಬೇಕಾಯಿತು. ಮುಂಬಯಿ ನಗರದ ಹಲ ಭಾಗಗಳಲ್ಲಿ ೨೪ ತಾಸಿನ ಕರ್ಫ್ಯೂ ಅಜ್ಞೆಯನ್ನು ಜಾರಿ ಮಾಡಿರುವರು. ಪುಣೆಯಲ್ಲಿ ಜರಗುತಿರುವ ಶಾಸನ ಸಭೆಯ ಅಧಿವೇಶನದಲ್ಲಿ ಭಾಗ ವಹಿಸಿದ್ದ ಗೃಹಮಂತ್ರಿ ಮುರಾರಜಿ ದೇಸಾಯಿಯವರು ಮುಂಬಯಿಗೆ ಹೋಗಿ ಗವರ್ನರ, ಪೋಲಿಸ ಕಮೀಶನರ, ಮತ್ತು ಸಬ್ ಏರಿಯಾ ಮಿಲಿಟರಿ ಕಮಾಂಡಂಟರ ಸಂಗಡ ಗಲಭೆ ಪ್ರದೇಶಗಳಲ್ಲಿ ಸಂಚರಿಸಿ ಪರಿಸ್ಥಿತಿಯನ್ನು ಪರಿಶೀಲಿಸಿ ಬಂದರು. ಆದರೂ ಪರಿಸ್ಥಿತಿ ಇನ್ನೂ ಶಾಂತವಾಗಿಲ್ಲ. ಮುಖ್ಯ ಮಂತ್ರಿ ಖೇರರು ಗಲಭೆಗಳನ್ನು ಹತ್ತಿಕ್ಕಲು ಎಲ್ಲ ಜಾತಿಯ ನಾಗರಿಕರ ಸಹಕಾರವನ್ನು ಕೋರಿ ಮನವಿ ಹೊರಡಿಸಿದ್ದಾರೆ. ವೃತ್ತಪತ್ರಗಳು ಪರಿಸ್ಥಿತಿಯನ್ನು ಕೆರಳಿಸುವಂಥ ಲೇಖ, ಸುದ್ದಿಗಳನ್ನು ಪ್ರಕಟಿಸಬಾರದೆಂದು ಪ್ರಾರ್ಥಿಸಲಾಗಿದೆ. ಎಲ್ಲ ವೃತ್ತಪತ್ರಗಳ ಸಂಪಾದಕರೂ ಸೇರಿ ಒಂದು ಜತೆ ವಿನಂತಿಯನ್ನು ಪ್ರಸಿದ್ಧಿಸಿ ಜನರು ಶಾಂತತೆಯಿಂದಿರಬೇಕೆಂದು ಬಿನ್ನವಿಸಿದ್ದಾರೆ. ೧೧೭೦ ಜನ ಪುಂಡರನ್ನು ಬಂಧಿಸಲಾಗಿದೆ.

ತೊಂದರೆಯ ಉಗಮ

ಗಲಭೆಯ ಉಗಮು ತಾ ೧ನೆ ದಿನ ಗೋಲಪೀಠದಲ್ಲಿ ಪ್ರಾರಂಭವಾಯಿತು. ಹಿಂದೂ-ಮುಸ್ಲಿಮರಿಬ್ಬರೂ ಕೂಡಿ ವಾಸಿಸುತಿರುವ ಈ ಭಾಗದಲ್ಲಿ ಮರುದಿನ ಅಧಿಕಾರಕ್ಕೆ ಬರುವ ರಾಷ್ಟ್ರೀಯ ಸರಕಾರದ ವಿಷಯಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಲು ಮುಸ್ಲಿಂ ಲೀಗ ಆದೇಶದಂತೆ ಕಪ್ಪು ಪತಾಕೆಗಳನ್ನು ಮುಸ್ಲಿಮರು ತಮ್ಮ ಕಟ್ಟಡಗಳ ಮೇಲೆ ಏರಿಸತೊಡಗಿದರು. ರಾಷ್ಟ್ರೀಯ ಮನೋವೃತ್ತಿಯ ಜನರು ಇದಕ್ಕೆದುರಾಗಿ ತಮ್ಮ ಕಟ್ಟಡಗಳ ಮೇಲೆ ತ್ರಿವರ್ಣಧ್ವಜವನ್ನೇರಿಸಲು ಮುಂದಾದಾಗ ಇರಿತಗಳು ಸಂಭವಿಸಿದವು. ಪರಿಣಾಮವಾಗಿ ಉಭಯ ಪಂಗಡಗಳವರಲ್ಲಿ ಕದನವೇ ಪ್ರಾರಂಭವಾಯಿತು. ಲಾಠಿ, ಇಟ್ಟಿಗೆ, ಸೋಡಾವಾಟರ ಬಾಟ್ಲಿಗಳ ತೂರಾಟ ಧಾರಾಳವಾಗಿ ನಡೆಯಿತು. ೧೦ ನಿಮಿಷಗಳಲ್ಲಿ ೫ ಜನರು ಸತ್ತರು. ಅನೇಕರು ಗಾಯಗೊಂಡರು. ತಂಬಾಕಟ್ಟಾ, ನಲಬಜಾರ, ಬೆಂಡಿಬಜಾರಗಳಿಗೆ ಗಲಭೆ ಹಬ್ಬಿತು. ಸರಕಾರದವರು ತ್ವರಿತವಾಗಿಯೆ ಕ್ರಮಗಳನ್ನು ಕೈಕೊಂಡು ೧೪೪ ನೆ ಕಲಮನ್ನು ಗಲಭೆ ಪ್ರದೇಶಗಳಿಗೆ ಪ್ರಯೋಗಿಸಿದರು. ಗಂಡಾಂತರ ಪರಿಸ್ಥಿತಿಯನ್ನು ಸಾರಿ ಆಯುಧ ಸಹಿತ ಓಡಾಡುವದನ್ನು ಪ್ರತಿಬಂಧಿಸಲಾಯಿತು. ಅದರೂ ಮೊದಲನೆ ದಿನದ ೩ ತಾಸಿನ ಕಾಳಗದಲ್ಲಿ ೪೭ ಜನರು ಪ್ರಾಣ ಕಳೆದುಕೊಂಡರು. ಬ್ರಿಟಿಶ ಸೈನಿಕರ ಎರಡು ದಲಗಳನ್ನು ತಂದು ನಿಲ್ಲಿಸಲಾಯಿತು.

ಸುಲಿಗೆ, ಕೊಳ್ಳೆ

ಗುಂಡ ಜನರು ಇದರ ಉಪಯೋಗ ಪಡೆದುಕೊಂಡು ಸುಲಿಗೆ ಮಾಡುವದು ಮತ್ತು ಬೆಂಕಿ ಹಚ್ಚುವದನ್ನು ಪ್ರಾರಂಭಿಸಿ ಪರಿಸ್ಥಿತಿಯನ್ನು ವಿಕೋಪಕ್ಕೆ ಮುಟ್ಟಿಸಿದರು. ಒಂದು ಗುಡಿಯ ಮೇಲೆಯೂ ದಾಳಿಯಾಯಿತು.

೨ ನೇ ತಾರೀಕಿನ ದಿನ ಕುಂಭಾರವಾಡೆಯಲ್ಲಿ ಪುನಃ ಹೊಡೆದಾಟ ಮೊದಲಾಯಿತು- ಪರಿಸ್ಥಿತಿಯನ್ನು ಹದಕ್ಕೆ ತರಲು ಸರಕಾರ ೨೪ ತಾಸುಗಳ ಕರ್ಫ್ಯೂ ಅಜ್ಞೆಯನ್ನು ಎರಡು ದಿನಗಳವರೆಗೆ ಗಲಭೆ ಭಾಗಗಳಲ್ಲಿ ಜಾರಿ ಮಾಡಿತು ಕ್ರಾಫರ್ಡ ಮಾರ್ಕೆಟದಲ್ಲಿ ಅಂಗಡಿಗಳ ಲೂಟಿ ನಡೆಯಿತು. ಒಂದು ದೊಡ್ಡ ಕಟ್ಟಡದ ಮೇಲೆ ದಾಳಿಯೂ ಆಯಿತು. ಕಟ್ಟಡಗಳಿಗೆ ಬೆಂಕಿ ಹಚ್ಚುವದೂ ನಡೆಯಿತು. ಅಂದು ಗಲಭೆ ಹೆಚ್ಚು ಪ್ರದೇಶಗಳಿಗೆ ಹಬ್ಬಲಿಲ್ಲ. ಮಿಲಿಟರಿ ಗಸ್ತಿ ಪೋಲೀಸರ ಗೋಳಿಬಾರು ನಡೆಸಿ ಸುಲಿಗೆಗಾರ ಜನ ಜನಾಂಗುಳಿಯನ್ನು ಚದುರಿಸುವದಾಯಿತು. ಅಂದೊಂದೇ ದಿನ ೫೦೦ ಕ್ಕೂ ಮಿಕ್ಕಿ ಪುಂಡರನ್ನು ಬಂಧಿಸಲಾಯಿತು.

ಗಲಭೆಯ ಹಬ್ಬುಗೆ

ಈ ಕ್ರಮಗಳಿಂದ ೩ನೆ ತಾರೀಕು ಮುಂಜಾನೆ ಹೊತ್ತಿಗೆ ಪರಿಸ್ಥಿತಿ ತುಸು ಶಾಂತವಾದಂತೆ ತೋರಿದರೂ ಮಧ್ಯಾಹ್ನದ ಹೊತ್ತಿಗೆ ಪುನಃ ಅದು ಭೀಕರ ರೂಪವನ್ನು ಧರಿಸಿತು. ವಿರುದ್ಧ ಪಂಗಡಗಳಲ್ಲಿ ವ್ಯವಸ್ಥಿತ ರೀತಿಯಿಂದ ತಿಕ್ಕಾಟ ನಡೆಯಿತು ನಗರದ ಮಧ್ಯದಲ್ಲಿ ಒಂದು ಚದರು ಮೈಲು ವಿಸ್ತೀರ್ಣಕ್ಕೆ ಸೀಮಿತವಾಗಿದ್ದ ಗಲಭೆಗಳುಉತ್ತರದ ಔದ್ಯೋಗಿಕ ಭಾಗಗಳಿಗೂ ಪರೇಲ ಭಾಗಕ್ಕೂ ಹಬ್ಬಿದವು. ಮಸೀದೆ ದೇವಸ್ಥಾನಗಳನ್ನು ಸುಡುವ ಪ್ರಯತ್ನಗಳು ನಡೆದವು.

ಸಂಶಯಕ್ಕೊಳಗಾದ ಜನರನ್ನು ಬಂಧಿಸಲು ಹೋಗಿದ್ದ ಪೋಲೀಸ ಕಮೀಶನರ ವಿಲ್ಸನ್ ಮತ್ತು ಅವರ ಸಹಾಯಕ ವಿಲ್ಕಿನಸನ್ನರನ್ನು ಗಾಯಗೊಳಿಸಲಾಯಿತುಜನಗುಂಪುಗಳುಪೋಲೀಸರ ಮೇಲೆ ಕಲ್ಲುಗಳನ್ನು ತೂರಿದವು. ಅನೇಕ ಸಾರೆ ಗೋಳೀಬಾರು ನಡೆಯಿತು. ಕರ್ಫ್ಯೂ ಅಜ್ಞೆಯ ಪ್ರದೇಶವನ್ನು ವಿಸ್ತರಿಸಲಾಯಿತು.

ಮುರಾರಜಿಯವರ ಸಂಚಾರ

೪ ನೇ ತಾರೀಕು ಮುಂಜಾನೆ ಗೃಹಮಂತ್ರಿ ಮುರಾರಜಿ ದೇಸಾಯರು ಪರಿಸ್ಥಿತಿಯನ್ನು ಪರಿಶೀಲಿಸಲು ಮುಂಬಯಿಗೆ ಬಂದು ಗಲಭೆಯ ಭಾಗಗಳಲ್ಲಿ ಸಂಚರಿಸಿದರು.

ಅಂದು ಕರ್ಫ್ಯೂ ವೇಳೆ ಮುಗಿದೊಡನೆ ಪುನಃ ಔದ್ಯೋಗಿಕ ಭಾಗದಲ್ಲಿ ಕದನ ಮೊದಲಿಟ್ಟಿತು. ಕರ್ಫ್ಯೂ ವೇಳೆಯಲ್ಲಿಯೂ ಓಣಿಗಳಲ್ಲಿ ಬಡಿದಾಟಗಳು ಸಾಗಿಯೆ ಇದ್ದವು. ಈಶಾನ್ಯ ಭಾಗದಲ್ಲಿ ಒಂದು ವಿಶ್ರಾಂತಿಗೃಹವನ್ನು ಸಂಪೂರ್ಣ ನಾಶಗೊಳಿಸಲಾಗಿದೆ. ಸಾವುಕಾರನೊಬ್ಬನ ಅಂಗಡಿ ಮನ್ನು ದೋಚಿ ಅವನ ಲೆಕ್ಕದ ಪುಸ್ತಕಗಳನ್ನು ಸಮೀಪದಲ್ಲಿದ್ದ ಮೋಟಾರಿನಲ್ಲಿಟ್ಟು ಹೋಮ ಮಾಡಲಾಯಿತು. ದೇವಾಲಯ ಮಸೂದೆಗಳ ಮೇಲಿನ ದಾಳಿ ಯಥಾಸಾಂಗವಾಗಿ ನಡೆದಿತ್ತು. ಅನೇಕರನ್ನು ಊಟ ಮಾಡುತಿರುವಾಗಲೇ ಬಂಧಿಸಲಾಗಿದೆ

ಪತ್ರಿಕಾ ಪ್ರತಿನಿಧಿಗಳು ಪೋಲೀಸ ಕಾವಲಿನಲ್ಲಿ ಗಲಭೆ ಪ್ರದೇಶಗಳಲ್ಲಿ ಸುತ್ತಾಡಿ ಬಂದರು.

—೧೪ ನೇ ಪುಟ ನೋಡಿರಿ

ಸುಭಾಸ ಸೇನೆಯ ಬಿಡುಗಡೆ?

ರಾಷ್ಟ್ರೀಯ ಸರಕಾರದ ಮಂತ್ರಿಗಳು ಇದೀಗ ತಮ್ಮ ಖಾತೆಗಳ ಕಾರ್ಯಕಲಾಪಗಳನ್ನಭ್ಯಸಿಸುವಲ್ಲಿ ನಿರತರಾಗಿರುವರು. ಗೃಹಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಇದು ವರೆಗೆ ಶಿಕ್ಷೆಯನ್ನನುಭವಿಸುತಿರುವ ಸುಭಾಸ ಸೇನಾಧಿಕಾರಿಗಳ ಬಿಡುಗಡೆಗೆ ಎಲ್ಲರೂ ಮೊದಲು ಅಪ್ಪಣೆ ಹೊರಡಿಸುವರೆಂದು ತಿಳಿಯುತ್ತದೆ. ಅಮೇರಿಕೆಯಲ್ಲಿ ಭಾರತದ ವಿರುದ್ಧ ಪ್ರಚಾರ ಕೈಕೊಂಡಿರುವ ಸರಕಾರದ ಪ್ರತಿನಿಧಿ ಕಚೇರಿಯೂ ಅಂದರೆ ಸರ್ ಜಿ ಎಸ್ ವಾಜಪೇಯರ ಕಚೇರಿಯ ಪ್ರಚಾರ ವಿಭಾಗವನ್ನು ಮುಚ್ಚಿಬಿಡಲು ಸರದಾರರು ವಿಚಾರ ನಡಿಸಿರುವರೆಂದು ತಿಳಿಯುತ್ತದೆ ಮೇಲಿನ ೧೨ ಮಂತ್ರಿಗಳಲ್ಲಿ ೭ ಜನರು ೨ ನೇ ತಾರೀಕಿನ ದಿನ ಅಧಿಕಾರ ವಹಿಸಿದ್ದು ಉಳಿದವರು ಇಷ್ಟರಲ್ಲಿಯೆ ವಹಿಸಲಿರುವರು. ಮುಸ್ಲಿಂ ಲೀಗಿನವರನ್ನು ಬಿಟ್ಟರೆ ಉಳಿದವರೆಲ್ಲ ಈ ರಾಷ್ಟ್ರೀಯ ಸರಕಾರವನ್ನು ಸಂತೋಷದಿಂದ ಸ್ವಾಗತಿಸುವ ಸಂದೇಶ ಕಳಿಸಿದ್ದಾರೆ.

ವಿಶಿಷ್ಟ ಹಿತ ಸಂಬಂಧದ ಕಾಲ ಹೋಗಿಬಿಟ್ಟಿದೆ

ಹೊಲ ಸಾಗುವಳಿ ಕಾಯಿದೆಯ ಬಗ್ಗೆ ಮುರಾರಜಿಯವರ ಸ್ಪಷ್ಟೋಕ್ತಿ

ಮುಂಬಯಿ ಶಾಸನ ಸಭೆಯಲ್ಲಿ ಬಡವರ ಹಿತದ ಮಸೂದೆಗಳು

ಮುಂಬಯಿ ಶಾಸನಸಭೆ ೫ ವಾರಗಳ ವಿರಾಮದ ನಂತರ ತಾ. ೨ ಕ್ಕೆ ಪುಣೆಯಲ್ಲಿ ಸೇರಿತು. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿತವಾದುದನ್ನು ನಿಷೇಧಿಸಲು ಮುಸ್ಲಿಂ ಲೀಗ ಪಕ್ಷದ ಸದಸ್ಯರು ೧೫ ನಿಮಿಷ ಸಭೆಗೆ ಬಹಿಷ್ಕಾರ ಹಾಕಿದ್ದರು.

ಹೊಲ ಸಾಗುವಳಿ ಮಸೂದೆಯ ತಿದ್ದುಪಡಿ

ಮುರಾರಜಿ ದೇಸಾಯರು (ಕಂದಾಯ ಮತ್ತು ಗೃಹ) ಖೋತಿ ಸೆಟ್ಲಮೆಂಟ ತಿದ್ದುಪಡಿ ಮಸೂದೆ, ೧೯೪೧ ರ ಹೊಸ ಸಾಗುವಳಿ ಕಾಯಿದೆಯನ್ನು ಪುನಃ ಕಾಯಿದೆ ಮಾಡುವ ಮಸೂದೆ, ೧೯೩೯ ರ ಹೊಲ ಸಾಗುವಳಿ ತಿದ್ದುಪಡಿ ಮಸೂದೆ, ಹಿಂದೂ ಬಹುಪತ್ನೀತ್ವ ನಿರೋಧಕ ಮಸೂದೆಯ ಪರಿಶೀಲಕ ಸಮಿತಿಯ ವರದಿಗಳನ್ನು ಸಭೆಯ ಮುಂದೆ ಮಂಡಿಸಿದರು. ಖೋತಿ ತಿದ್ದುಪಡಿ ಮಸೂದೆಯ ದ್ವಿತೀಯ ವಾಚನ ಮುಗಿದು ಹೊಲ ಸಾಗುವಳಿ ತಿದ್ದುಪಡಿ ಮಸೂದೆಯ ದ್ವಿತೀಯ ವಾಚನ ಪ್ರಾರಂಭವಾದಾಗ ಧಾರವಾಡದ ಠಾಕೂರ ಸಾಹೇಬರೂ ಶ್ರೀ ಎಸ್. ಎಲ್. ಕರಂದೀಕರರೂ ಅದನ್ನು ಟೀಕಿಸಿ ಮಾತಾಡಿದರು. ವಿವಿಧ ಜಿಲ್ಲೆಗಳ ಭಿನ್ನ ಭಿನ್ನ ಪರಿಸ್ಥಿತಿಗಳನ್ನು ಗಣಿಸದೆ ಎಲ್ಲ ಕಡೆ ಜಮೀನದಾರರಿಗೆ ಬೆಳೆಯಲ್ಲಿ ೧/೩ ಅಂಶ ಗೊತ್ತು ಮಾಡಿದ್ದು ಸರಿಯಲ್ಲವೆಂದು ಕರಂದೀಕರರ ಆಕ್ಷೇಪವಾಗಿತ್ತು.

ಶ್ರೀ ಮುರಾರಜಿಯವರು ಆಕ್ಷೇಪಗಳಿಗೆ ಖಂಡತುಂಡ ಉತ್ತರವಿತ್ತು ೧೯೪೬ ರಲ್ಲಿ ವಿಶಿಷ್ಟ ಹಿತಸಂಬಂಧಗಳಿಗೆ ನಿಲ್ಲಲು ನೆಲೆಯಿಲ್ಲವೆಂದೂ ಜಮೀನ್ದಾರರಿಗೆ ಈ ಕಾಯಿದೆಯಿಂದ ನಷ್ಟವಾಗುವದು ನಿಜವಾದರೂ ಬಡರೈತನ ಹಿತಕ್ಕೆ ಅದು ಅವಶ್ಯವಾಗಿದೆಯೆಂದೂ ಹೇಳಿದರು.

ಲಂಚಗುಳಿತನ ನಿರ್ನಾಮ

ಲಂಚಗುಳಿತನದ ಅಪರಾಧವನ್ನು ಕ್ರಿಮಿನಲ್ ಪ್ರೊಸೀಜರ ಕೋಡಿನಲ್ಲಿ ಸೇರಿಸಿ ಅದರನ್ವಯ ಲಂಚಗುಳಿಗಳನ್ನು ದಂಡಿಸಬೇಕೆಂಬ ಆಶಯದ ಮಸೂದೆಯನ್ನು ತಾ ೩ ಕ್ಕೆ ಮಂಡಿಸಲಾಯಿತು. ಪೋಲೀಸ ಅಧಿಕಾರಿಗಳ ಅಧಿಕಾರವನ್ನು ಇದರಿಂದ ಬೆಳಸಿದಂತಾಗುವದೆಂದು ಲೀಗ್ ಸದಸ್ಯರು ಆಕ್ಷೇಪಿಸಿದರು. ಆದರೆ ಲಂಚಗುಳಿತನವನ್ನು ಹೋಗಲಾಡಿಸಲು ಇದು ಅವಶ್ಯವೆಂದು ಮುರಾರಜಿಯವರು ಉತ್ತರ ಕೊಟ್ಟರು.

ಬಡ್ಡಿವ್ಯವಹಾರ ನಿಯಂತ್ರಣ

ಮುಂಬಯಿ ಪ್ರಾಂತದಲ್ಲಿ ಬಡ್ಡಿ ವ್ಯವಹಾರ ಮಾಡುವವರ ನಿಯಂತ್ರಣ ಮಾಡಲು ಒಂದು ಮಸೂದೆಯನ್ನು ಮುರಾರಜಿಯವರು ಮಂಡಿಸಿದರು. ಬಡ ಜನರನ್ನು ಸಾವುಕಾರರ ಪೀಡೆಯಿಂದ ರಕ್ಷಿಸುವ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು. ಲೀಗ ಪಕ್ಷದ ಎಂ ಎ ಖಾಜಿ ಮೊದಲಾದವರು ಇದು ಸಾಕಷ್ಟು ಪರಿಣಾಮಕಾರಿಯಾಗಿಲ್ಲವೆಂದು ಟೀಕಿಸಿದರೆ ಎ ಎಸ್ ಗಾಂಧಿಯವರು ಇದರಿಂದ ಉದ್ದಿಮೆಗಾರರಿಗಾಗುವ ಹಾನಿಯನ್ನು ವಿವರಿಸಿದರು. ಮಸೂದೆಯ ಚರ್ಚೆ ಇನ್ನೂ ಮುಗಿದಿಲ್ಲ

ಬೆಂಗಳೂರು-ಮೈಸೂರು

ಮೈಸೂರು ಸಂಸ್ಥಾನದ ರೇಲ್ವೆ ಕೆಲಸಗಾರರ ಸಂಘದ ಕಾರ್ಯಸಮಿತಿಯ ಪ್ರತಿನಿಧಿಗಳು ದಿವಾಣ ರಾಮಸ್ವಾಮಿ ಮುದಲಿಯಾರರನ್ನು ಭೆಟ್ಟಿಯಾಗಿ ತಮ್ಮ ಭತ್ತೆ ಮೊದಲಾದವುಗಳ ಬೇಡಿಕೆ ಇನ್ನೂ ಮಾನ್ಯವಾಗಿಲ್ಲವೆಂದು ದೂರಿಕೊಳ್ಳಲಾಗಿ ಸಹಾನುಭೂತಿಪರವಾಗಿ ವಿಚಾರಿಸುವ ಆಶ್ವಾಸನೆ ದೊರೆತಿತು.

ಕೋಲಾರ ನಗರದಲ್ಲಿ ತಾ. ೨ ರಿಂದ ೩ ದಿನಗಳ ವರೆಗೆ ಸಂಜೆ ೬ ರಿಂದ ಮುಂಜಾನೆ ೭ ರ ವರೆಗೆ ಕರ್ಫ್ಯೂ ಆಜ್ಞೆ ಜಾರಿ ಮಾಡಲ್ಪಟ್ಟಿತ್ತು. ಸಿನೆಮಾ, ಹೆಂಡದಂಗಡಿಗಳನ್ನು ಮುಚ್ಚಿಸಲಾಗಿತ್ತು. ಲೀಗಿನ ಕಪ್ಪು ಬಾವುಟ ಪ್ರದರ್ಶನದ ಸಂಬಂಧವಾಗಿ ಗಲಭೆಯಾಗುವ ಭಯದಿಂದ ಈ ಆಜ್ಞೆ ಹೊರಡಿಸಲ್ಪಟ್ಟಿತ್ತು.

ಬಂಗಳೂರಲ್ಲಿ ನಡೆಯಬೇಕಾಗಿರುವ ಮೈಸೂರ ಕಾಂಗ್ರೆಸ್ ಮಹಾಧಿವೇಶನಕ್ಕಾಗಿ ೫೦೦ ಸ್ವಯಂಸೇವಕರು ಬೇಕಾಗಿದ್ದು ಅವರ ತರಬೇತಿ ಇದೇ ತಾ. ೧೫ ರಿಂದ ಪ್ರಾರಂಭವಾಗುವದೆಂದೂ ಸ್ವಯಂಸೇವಕರಾಗಬಯಸುವವರು ಸ್ವಯಂಸೇವಕ ಸಮವಸ್ತ್ರ ಮತ್ತು ಸ್ಥಳೀಯ ಕಾಂಗ್ರೆಸ ಕಾರ್ಯದರ್ಶಿಯ ಅನುಮೋದನಪತ್ರದೊಂದಿಗೆ ಬೆಂಗಳೂರಿಗೆ ಬರಬೇಕೆಂದೂ ಸ್ವಯಂಸೇವಕ ಸೇನಾನಾಯಕರಾದ ಶ್ರೀ ಕೆ. ರಾಮಸ್ವಾಮಿಯವರು ಪ್ರಕಟಿಸಿದ್ದಾರೆ.

ಕೇಂದ್ರದಲ್ಲಿ ಮುಸ್ಲಿಂ ಲೀಗ್ ಬಿಟ್ಟು ಮಂತ್ರಿಮಂಡಲ ರಚಿಸಲ್ಪಟ್ಟಿದ್ದನ್ನು ನಿಷೇಧಿಸಲು ಬೆಂಗಳೂರು ನಗರದಲ್ಲಿ ಮುಸ್ಲಿಮರು ಕಪ್ಪು ಬಾವುಟ ಮೆರವಣಿಗೆ ನಡೆಸಿದ್ದರು. ಪ್ರದರ್ಶನ ಶಾಂತವಾಗಿ ನಡೆಯಿತು. ನಗರದಲ್ಲಿ ಅಂದು ಮೂರು ಇರಿತಗಳು ಸಂಭವಿಸಿದರೂ ಅವು ಜಾತೀಯ ಕಲಹದಿಂದಾಗಿರದೆ ಗೃಹಕಲಹಕ್ಕೆ ಸಂಬಂಧಿಸಿದ್ದವೆಂದು ಹೇಳಲಾಗಿದೆ.

ಕೇಂದ್ರದಲ್ಲಿ ಕಾಂಗ್ರೆಸ ನೇತೃತ್ವದಲ್ಲಿ ಸರಕಾರ ಸ್ಥಾಪಿತವಾದುದಕ್ಕೆ ನೆಹರೂ ಅವರನ್ನೂ ಅವರ ಸಹಕಾರಿಗಳನ್ನೂ ಅಭಿನಂದಿಸಿ ಮೈಸೂರು ಕಾಂಗ್ರೆಸ ಕಾರ್ಯಸಮಿತಿಯ ಪರವಾಗಿ ತಂತಿ ಕಳಿಸಲಾಗಿದೆ.

ಮೈಸೂರು ಸರಕಾರದವರು ತಮ್ಮ ಕೆಳ ದರ್ಜೆಯ ನೌಕರರ ಸಂಬಳವನ್ನು ನೂರಕ್ಕೆ ೨೫ ರಷ್ಟು ಹೆಚ್ಚಿಸಬಹುದೆಂದು ತಿಳಿದುಬರುತ್ತದೆ.

೪೫೩೦೦ ರೂಪಾಯಿ ವೆಚ್ಚ ಮಾಡಿ ಬರಡು ದನಗಳನ್ನು ಸಾಕುವ ಕ್ಷೇತ್ರವೊಂದನ್ನು ಹೆಸರುಘಟ್ಟದಲ್ಲಿ ಸ್ಥಾಪಿಸಲು ಸರಕಾರದವರು ಆಜ್ಞಾಪಿಸಿದ್ದಾರೆ.

ಮೈಸೂರು ಸಂಸ್ಥಾನದಿಂದ ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಕಳಿಸುವ ವಿಷಯಕ್ಕೆ ದಿವಾಣ ರಾಮಸ್ವಾಮಿ ಮುದಲಿಯಾರರು ಕೆಲ ದಿನಗಳ ಹಿಂದೆ ವ್ಯಕ್ತಗೊಳಿಸಿದ ಅಭಿಪ್ರಾಯವನ್ನು ಮೈಸೂರು ನಗರಭವನದ ಮೈದಾನದಲ್ಲಿ ತಾ ೨೮ ಕ್ಕೆ ಸೇರಿದ ಸಭೆಯೊಂದರಲ್ಲಿ ಖಂಡಿಸಲಾಯಿತು. ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷರಾಗಿದ್ದರು. ಘಟನಾ ಸಮಿತಿಗೆ ಮೈಸೂರಿನಿಂದ ಪ್ರಜಾಪ್ರತಿನಿಧಿಗಳನ್ನೇ ಕಳಿಸಬೇಕು. ಇಲ್ಲದಿದ್ದರೆ ಈ ಪ್ರಶ್ನೆ ವಿಷಮಕ್ಕಿಟ್ಟುಕೊಂಡು ಜನರಿಗೂ ಸರಕಾರಕ್ಕೂ ಹೋರಾಟವೊದಗುವದು ಖಂಡಿತವೆಂದು ಭಾಷಣಕಾರರು ಎಚ್ಚರಿಕೆಯಿತ್ತರು. ದಿವಾಣರು ಈ ವಿಚಾರದಲ್ಲಿ ಅಧಿಕಾರೇತರರನ್ನೇ ಅಧಿಕ ಸಂಖ್ಯೆಯಲ್ಲಿ ಕಳಿಸಲಾಗುವದೆಂದೂ ಆದರೆ ಇದೇ ಪ್ರತಿನಿಧಿ ಮಂಡಲ ಏಕಾಭಿಪ್ರಾಯದ್ದಾಗಿರುವಂತೆ ಸದಸ್ಯರನ್ನಾರಿಸಲಾಗುವದೆಂದೂ ಹಿಂದೆ ಹೇಳಿದ್ದರು ಸರಕಾರಕ್ಕೆ "ಜೀ ಹುಕುಂ" ಎಂದು ಅಭಿಪ್ರಾಯಕರಾಗಿದ್ದವರನ್ನೇ ಕಳಿಸಲಾಗುವದೆಂಬುದೇ ಇದರ ಅರ್ಥವೆಂದು ಟೀಕಿಸಲಾಯಿತು. ಬಿ ನಾರಾಯಣ ಸ್ವಾಮಿ, ಎ ಜಿ. ಬಂದಿಗೌಡ, ಟಿ ಮರಿಯಪ್ಪ ಮೊದಲಾದ ಮಹನೀಯರು ಭಾಷಣ ಮಾಡಿದರು.

ಘಟನಾ ಸಮಿತಿಗೆ ಮೈಸೂರು ಪ್ರತಿನಿಧಿಗಳನ್ನಾರಿಸುವ ಹಕ್ಕು ಕೇವಲ ಪ್ರಜಾ ಪ್ರತಿನಿಧಿ ಸಭೆಯದಿದ್ದು ಅದಕ್ಕೆ ಚ್ಯುತಿ ಬಂದರೆ ತಾವು ಪ್ರತಿನಿಧಿ ಸಭೆಯ ಸದಸ್ಯರ ಆತ್ಮಗೌರವವನ್ನು ಕಾಯ್ದುಕೊಳ್ಳಲು ಪ್ರತಿನಿಧಿ ಸಭಾಂಗಣದಲ್ಲಿಯೆ ಸತ್ಯಾಗ್ರಹ ಹೂಡುವದಾಗಿಯೂ ಈ ಬಗ್ಗೆ ಕಾಂಗ್ರೆಸ್ ಕಾರ್ಯಸಮಿತಿಯ ಅಪ್ಪಣೆಯನ್ನು ಕೋರಲಾಗಿದೆಯೆಂದೂ ಪ್ರ. ಪ್ರ. ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು.

ಮೈಸೂರು ಕಾಂಗ್ರೆಸ್ ಕಾರ್ಯಸಮಿತಿಯ ಸಭೆಯೊಂದು ತಾ. ೩ ಕ್ಕೆ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಘಟನಾ ಸಮಿತಿಗೆ ಮೈಸೂರ್ರ ಪ್ರತಿನಿಧಿಗಳನ್ನು ಕಳಿಸುವ ವಿಚಾರ ಮತ್ತು ಪ್ರಜಾಪ್ರತಿನಿಧಿ ಸಭೆಯಲ್ಲಿ ಸತ್ಯಾಗ್ರಹ ಹೂಡಲು ಶ್ರೀ ಕೆ ಹನುಮಂತಯ್ಯನವರು ಕೇಳಿದ ಅನುಮತಿಯ ವಿಚಾರ ಚರ್ಚಿಸಲ್ಪಟ್ಟವು.

ಮೈಸೂರು ದಿವಾಣರಾದ ಸರ್ ಅರ್ಕಾಟ ರಾಮಸ್ವಾಮಿ ಮುದಲಿಯಾರರ ಸಂಬಳ ಮೊದಲು ೫೦೦೦ ವೆಂದು ಗೊತ್ತಾಗಿದ್ದರೂ ಮಹಾರಾಜರೀಗ ಅದನ್ನೀಗ ೬೦೦೦ಕ್ಕೇರಿಸಿದ್ದಾರೆ.

ಮೈಸೂರು ಕಾಂಗ್ರೆಸ್ಸಿನ ಆರನೆ ಮಹಾಧಿವೇಶನ ಬೆಂಗಳೂರಿನ ನೆಹರೂ ಮೈದಾನದಲ್ಲಿ ರಾಷ್ಟ್ರೀಯ ಹಾಯಸ್ಕೂಲಿನ ಹತ್ತಿರ ಸೆಪ್ಟೆಂಬರ ಕೊನೆಯ ವಾರದಲ್ಲಿ ನಡೆಯಬೇಕೆಂದು ನಿರ್ಧರಿಸಲ್ಪಟ್ಟಿದೆ ಇದಕ್ಕೆ ಬೇಕಾದ ವ್ಯವಸ್ಥೆಗಳೆಲ್ಲವೂ ಸಿದ್ಧವಾಗುತ್ತಿವೆ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ ೪

ಮುಂಬಯಿಯಲ್ಲಿ ಉಂಟಾಗಿರುವ ದಂಗೆಯ ಪರಿಸ್ಥಿತಿಯಿಂದ ಈ ವಾರದಲ್ಲೆಲ್ಲ ಶೇರ ಪೇಟೆ ಮುಚ್ಚಿತ್ತು. ಆದರೆ ಕಳೆದ ವಾರಾಂತ್ಯದಲ್ಲಿ ಪೇಟೆಯಲ್ಲಿ ಶೇರುಗಳ ಬೆಲೆ ಒಮ್ಮಿಂದೊಮ್ಮೆ ಇಳಿದು ಹೋಗಿ ಅನೇಕ ದಿನಗಳಿಂದ ರಭಸದಿಂದ ಮುಂದೊತ್ತುತ್ತಿದ್ದ ತೇಜಿ ಒಮ್ಮಿಂದೊಮ್ಮೆ ಕುಸಿದು ಬಿತ್ತು. ಜಾತೀಯ ಗಲಭೆಗಳ ನಿರೀಕ್ಷೆ, ಅಕ್ಟೋಬರ ೧ ಕ್ಕೆ ಸಂರಕ್ಷಣ ಕಾಯಿದೆ ಕೊನೆಗೊಳ್ಳುವದರಿಂದ ಮಹತ್ವದ ಆರ್ಥಿಕ ಸ್ಥಿತ್ಯಂತರಗಳಾಗಬಹುದೆಂಬ ಸಂದೇಹ, ಸಂಯುಕ್ತ ಪ್ರಾಂತ ಸರಕಾರದವರು ಅಗ್ಗ ಬಡ್ಡಿಯ ಹಣದ ಧೋರಣವನ್ನು ಕೃಜಿಸಿ ೩॥ ಬಡ್ಡಿಯ ಸಾಲ ತೆಗೆದಿದ್ದು, ರಾಷ್ಟ್ರೀಯ ಸರಕಾರ ಸ್ಥಾಪಿಸಿದ್ದರಿಂದ ಇನ್ನು ಉದ್ಯೋಗಗಳ ಮೇಲೆ ನಿಯಂತ್ರಣ ಹೆಚ್ಚುವದೆಂಬ ನಂಬಿಕೆ, ಇವೆಲ್ಲ ಸೇರಿ ಕಂಪನಿ ಪಾಲುಗಳನ್ನು ಇಟ್ಟುಕೊಂಡವರನ್ನು ವಿಚಲಿತಗೊಳಿಸಿದ್ದರಿಂದ ಮಾರಾಟದ ರಭಸ ಹೆಚ್ಚಾಯಿತು ೩೬೦೦-೦-೦ ರಲ್ಲಿದ್ದ ಟಾಟಾ ಡೆಫರ್ಡ ಪಾಲುಗಳು ೩೨೭೦-೦-೦ ರ ವರೆಗೂ ಇಳಿದು ಮುಂದೆ ತಾಸು ಸುಧಾರಿಸಿ ೩೩೫೦-೦-೦ ರಲ್ಲಿ ನಿಂತವು. ೩೨೭೨-೦-೦ ರಿಂದ ಬಾಂಬೇ ಡಾಯಿಂಗ್ ೩೦೬೦-೦-೦ ಕ್ಕಿಳಿದು ೩೧೫೫-೦-೦ ರಲ್ಲಿ ನಿಂತಿತು. ಇದೇ ಪ್ರಕಾರ ಜವಳಿ ಪಾಲುಗಳೂ ಇಳಿದು ಹೋಗಿವೆ. ಸೆಂಟ್ರಲ್ ೪೬೩-೦-೦ ರಲ್ಲಿ ಕೊಹಿನುರು ೧೦೬೦-೦-೦ ರಲ್ಲಿ ಸ್ವದೇಶಿ ೮೩೬-೦-೦ ಗೋಕಳ ೪೨೦ ರಲ್ಲಿ ನಿಂತವು. ಬೇಲಾಪುರ ೩೮೧-೦-೦ ವರೆಗೂ ಇಳಿದು ೩೧೬-೦ ೦ ಕ್ಕೆ ಸುಧಾರಿಸಿತು. ಸಿಂಧ್ಯ ಸ್ಟೀಮ ೫೫ ರಿಂದ ೫೨ ಕ್ಕೆ ಬಂತು. ಇಂಪೀರಿಯಲ್‌ಬ್ಯಾಂಕ ಎಫ್. ಸಿ. ೨೯೭೦-೦-೦ ರ ವರೆಗೂ ಇಳಿದು ೩೦೧೬-೦-೦ ಕ್ಕೆ ಸುಧಾರಿಸಿತು. ರಿಝರ್ವ ಬ್ಯಾಂಕ ೧೫೨-೦-೦ ಕ್ಕಿಳಿದು ೧೫೮ ಕ್ಕೆ ಸುಧಾರಿಸಿತು. ಸೆಂಟ್ರಲಬ್ಯಾಂಕ ೧೩೪-೮-೦.

ಚಿನ್ನ--ಬೆಳ್ಳಿ

ಶೇರ ಪೇಟೆಯಲ್ಲಿ ಪ್ರಾರಂಭವಾದ ಇಳಿತಾಯ ಸ್ವಲ್ಪಕಾಲ ಚಿನ್ನ ಬೆಳ್ಳಿ ಪೇಟೆಯನ್ನೂ ಆಕ್ರಮಿದರೂ ಅದು ಹಾಗೆಯೆ ಉಳಿಯಲಿಲ್ಲ. ೯೫-೧೪-೦ ರವರೆಗಿಳಿದ ತಯಾರಿ ಚಿನ್ನ ಸುಧಾರಿಸಿದ ೯೭-೨-೦ ಕ್ಕೆ ಬಂತು. ಚಿನ್ನ ವಾಯಿದಾ ೯೫-೨-೮ ಬೆಳ್ಳಿಯಾದರೂ ೧೬೪-೧೨-೦ ಕ್ಕಿಳಿದು ೧೬೭-೮-೮ ಕ್ಕೇರಿ ೧೬೬-೨-೦ ರಲ್ಲಿದೆ. ವಾಯಿದಾ ೧೬೬-೪-೮ ಸಾವರೀನ ೬೬-೮-೦.

ಅರಳೆಪೇಟೆ

ಜನವರಿ ವಾಯಿದೆ ಅರಳೆ ವ್ಯಾಪಾರ ತಾ. ೨೮ ಕ್ಕೆ ಪ್ರಾರಂಭವಾಯಿತು. ೪೫೫-೦-೦ ರಲ್ಲಿ ಮೊದಲಾದ ಇದು ವ್ಯಾಪಾರ ಮುಗಿಯುವ ಹೊತ್ತಿಗೆ ೪೫೧-೮-೦ ರಲ್ಲಿತ್ತು ಸಪ್ಟೆಂಬರ ವಾಯಿದೆಗೆ ಗಿರಾಕಿಗಳಿಲ್ಲದ್ದರಿಂದ ಅದು ಇಳಿಮುಖವಾಗಿ ೪೦೧-೦-೦ ರ ವರೆಗೂ ಹೋದುದು ೪೧೩-೮-೦ ಗೆ ಸುಧಾರಿಸಿತು.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.	೧೪—೧೬
ಅರಿಷಿಣ ಕೇರು	೮೦-೮೮
ಶೇಂಗಾ ಖಂಡಿ ,,	೮೮-೯೨
ಮೆಣಸಿನಕಾಯಿ ಹೇರು ,,	೧೯೫—೧೦
ದೇಶಿ ತಂಬಾಕು ಹೇರು	೧೦೦-೨೦೦
ತಂಬಾಕ ಪಂಢರಪುರಿ "	೧೫೦—೨೫೦
ತಂಬಾಕು ಅಕೋಳ (ಹೇರು)	೨೫೦—೩೭೫

ಶಿವಮೊಗ್ಗೆ

ತಾ. ೧೩

ಅಡಿಕೆ ದೇಶಾವರ ನಂ ೧ ಮಣ ೧ ಕ್ಕೆ		೩೧-೩
,, ,,	೨	೨೬—೨೮
,, ,,	೩	೨೮—೩
ರಾಜಾ ಅಲವು		೨೯—೩೦
ನುಲಿ		೩೩—೩೪
ವಂತಿ		೨೧—೨೨
ಬೆಟ್ಟೆ		೧೯-೨೦
ಪೊಣಸು		೨೧-೨೨

ಹುಬ್ಬಳ್ಳಿ ಪೇಟೆ

ಮುಂಬೈ ಪೇಟೆಯಲ್ಲಿ ಬಹಳೇ ಇಳಿಮುಖವಾಗಿದ್ದ ಮೂಲಕ ಇಲ್ಲಿ ಈ ಅಠವಡೆಯಲ್ಲಿ ಏನೂ ವ್ಯವಹಾರವಾಗಿಲ್ಲ. ಆಗಬಹುದಾದ ಅಜಮಾಸ ಧಾರಣೆ

ಜಯವಂತ ಹತ್ತಿ	ನಂ. ೧	೨೮೫-೨೮೦
,,	ನಂ. ೨	೨೭೫-೨೭೦
,,	ನಂ. ೩	೨೬೦-೨೬೫
ಜಿನ		೧೯೫-೨೦೦
ಸಾಜಿತ		೧೮೦-೧೮೫
ಬಲರೋಲರ		೧೮೦-೧೯೦

ಮುಂಬಯಿಯಲ್ಲಿ ಜಾತೀಯ ದಂಗೆ

(೧೩ ನೇ ಪುಟದಿಂದ ಮುಂದೆ ಸಾಗಿದ್ದು)

ಪೂರ್ವ ಸಿದ್ಧತೆ ?

ದಂಗೆಯಾಗಬಹುದೆಂಬ ಸಂಶಯ ಸರಕಾರಕ್ಕೆ ಮೊದಲೇ ಇತ್ತು. ಅದಕ್ಕಾಗಿ ಯೋಗ್ಯ ಸನ್ನಾಹಗಳನ್ನು ಸರಕಾರ ನಡೆಸಿಯೇ ಇತ್ತು. ಅದರಿಂದ ಇನ್ನೂ ಭಯಂಕರವಾಗಬಹುದಾಗಿದ್ದ ಪರಿಸ್ಥಿತಿ ಇಷ್ಟರಲ್ಲೇ ಇದೆ. ದಂಗೆಗೆ ಪೂರ್ವ ಸಿದ್ಧತೆ ನಡೆದಿತ್ತೆಂಬ ಬಗ್ಗೆ ಸರಕಾರಕ್ಕೆ ಮೊದಲೇ ಕುರುಹುಗಳು ದೊರೆತಿದ್ದವು. ಅಲೀಗಡದಿಂದ ಒಬ್ಬ ವ್ಯಾಪಾರಿಯ ಹೆಸರಿಗೆ ಅನೇಕ ಪೆಟ್ಟಿಗೆ ಕುಂಬ ಚೂರಿಗಳು ಬಂದುದನ್ನು ಪೋಲೀಸರು ರೇಲ್ವೆ ನಿಲ್ದಾಣದಲ್ಲಿ ಕಂಡುಹಿಡಿದಿದ್ದರು. ಈ ಸಂಬಂಧದಲ್ಲಿ ಬಂಧನಗಳು ನಡೆದುವು. ಅದರ ನಂತರವೂ ಪಂಜಾಬದಿಂದ ೯ ಪೆಟ್ಟಿಗೆ ಚಾಕುಗಳು ಬಂದದ್ದು ಕಂಡುಬಂದಿತ್ತು.

ಪೋಲೀಸರು ಪಕ್ಷಪಾತ ಮಾಡುತಿದ್ದಾರೆಂಬ ದೂರುಗಳು ಬಂದಿವೆಯೆಂದೂ ಇದು ನಿಜವಾಗಿ ಪರಿಣಮಿಸಿದರೆ ಉಗ್ರೋಪಾಯಗಳನ್ನು ಕೈಕೊಳ್ಳಲಾಗುವದೆಂದೂ ಮುರಾರಜಿಯವರು ಸಾರಿದ್ದಾರೆ.

ದಕ್ಷಿಣ ಕನ್ನಡ

ಅ. ಭಾ. ಕಿಸಾನ ಸಮ್ಮೇಲನ ಇದೇ ತಿಂಗಳ ಕೊನೆಯಲ್ಲಿ ಕಾಸರಗೋಡು ತಾಲೂಕಿನ ದಕ್ಷಿಣ ಭಾಗದಲ್ಲಿ ಜರಗುವದೆಂದು ತಿಳಿಯುತ್ತದೆ.

ಜನರಿಗೆ ಸಾಕಷ್ಟು ಪರಿಚಯವಿಲ್ಲದ, ಆಹಾರಾಭಾವದ ಕಾರಣದಿಂದ ಪರಿಚಯ ಮಾಡಿಸಿಕೊಡಬೇಕಾದ ಗೋವಿನಜೋಳ (ಮೆಕ್ಕೆಜೋಳ) ಮೊದಲಾದ ಧಾನ್ಯಗಳ ಉಪಯೋಗವನ್ನು ಜನಪ್ರಿಯವಾಗಿ ಮಾಡುವಗೋಸ್ಕರ ದಕ್ಷಿಣ ಕನ್ನಡದಲ್ಲಿ ಸರಕಾರದವರು ಪ್ರಚಾರ ಭಾಷಣಗಳನ್ನು ಮಾಡಿಸಲಿರುವರು.

ದಕ್ಷಿಣ ಕನ್ನಡ ಬಂಟರ ಅಥವಾ ನಾಡವರ ವಿದ್ಯಾವರ್ಧಕ ಸಂಘದ ಪರವಾಗಿ ಶಿರ್ವದಲ್ಲಿ ಒಂದು ಹಿಂದೂ ಹಾಯಸ್ಕೂಲ ಪ್ರಾರಂಭವಾಗುವದಿದ್ದು ಅದರ ಶಂಕುಸ್ಥಾಪನೆ ಡಾ. ಯು. ಕೆ. ಆಚಾರ್ಯರ ಹಸ್ತದಿಂದ ತಾ ೨೨ ಕ್ಕೆ ನೆರವೇರಿತು. ಈ ಹಾಯಸ್ಕೂಲಿಗೆ ನಡಿಬೆಟ್ಟು ಮನೆಯವರು ಪುಕ್ಕಟೆ ನಿವೇಶನವನ್ನು ಕೊಟ್ಟಿದ್ದಾರೆ.

ಹೊಸದಾಗಿ ಆರಿಸಲ್ಪಟ್ಟಿರುವ ದ. ಕ. ಜಿಲ್ಲಾ ಕಾಂಗ್ರೆಸ ಸಮಿತಿಯ ಸಭೆ ಶ್ರೀ ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ತಾ ೨೪ಕ್ಕೆ ಜರುಗಿ ಶ್ರೀ ಯು ಶ್ರೀನಿವಾಸ ಮಲ್ಯರು ಅಧ್ಯಕ್ಷರಾಗಿಯೂ ಶ್ರೀ ಎಚ್ ನಾರಾಯಣರಾವ್, ಶ್ರೀ ಎಂ ಡಿ ಅಧಿಕಾರಿಗಳು ಉಪಾಧ್ಯಕ್ಷರುಗಳಾಗಿಯೂ ಶ್ರೀ ಪಾಂಗಾಳ ಲಕ್ಷ್ಮೀ ನಾರಾಯಣ ನಾಯಕ ಹಾಗು ದಾಮೋದರ ಬಾಳಿಗರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಮಂಜೇಶ್ವರ ಅಮೃತ ಕೃಷ್ಣರಾಯರು ಕೋಶಾಧ್ಯಕ್ಷರು ಶ್ರೀಮತಿ ಕಮಲಾದೇವಿ ಮೊದಲಾದ ೧೫ ಜನರ ಕಾರ್ಯಸಮಿತಿ ಆರಿಸಲ್ಪಟ್ಟಿತು. ಒಂಭತ್ತು ಗೊತ್ತುವಳಿಗಳು ಅಂಗೀಕರಿಸಲ್ಪಟ್ಟಿದ್ದು ಅವುಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಸ್ಪರ್ಧಿಸಬಾರದು, ದ ಕ ಜಿಲ್ಲೆಯಲ್ಲಿ ಒಂದೇ ವರ್ಷದ ಸಾಗುವಳಿ ಹಕ್ಕು ಪಡೆದಿರುವ ಚಾಲಗೇಣಿ ಒಕ್ಕಲಿಗೆ ಭೂಮಿಯ ಮೇಲೆ ಶಾಶ್ವತವಾಗುವಳಿ ಹಕ್ಕು ಕೊಡುವ ಕಾಯಿದೆ ತರಬೇಕು. ಹರಿಜನ ದೇವಾಲಯ ಪ್ರವೇಶದ ವಿಷಯದಲ್ಲಿ ಮದ್ರಾಸ ಸರಕಾರ ಕೈಕೊಂಡಿರುವ ಉಪಕ್ರಮದಲ್ಲಿ ಜಿಲ್ಲೆಯ ದೇವಸ್ಥಾನದ ಆಡಳಿತೆಗಾರರು ನೆರವಾಗಬೇಕು. ಕಾಂಗ್ರೆಸ್ ಪಕ್ಷದ ವತಿಯಿಂದ ಜಿಲ್ಲಾ ಬೋರ್ಡಿಗೆ ಆರಿಸಲ್ಪಟ್ಟು ರಾಜಿನಾಮೆ ಕೊಡಲು ಆಜ್ಞೆಯಿತ್ತಾಗ ಕೊಡದೆ ಶಿಸ್ತುಭಂಗ ಮಾಡಿದ ಜಿಲ್ಲಾ ಬೋರ್ಡ ಅಧ್ಯಕ್ಷ ಆರೂರ ಲಕ್ಷ್ಮೀ ನಾರಾಯಣರಾಯರ ಭಾವಚಿತ್ರ ಅನಾವರಣಕ್ಕೆ (ಜಿಲ್ಲಾ ಬೋರ್ಡ ಕಚೇರಿಯಲ್ಲಿ) ಸರಕಾರದವರು ಸಮ್ಮತಿ ಕೊಡಬಾರದು. ಇತ್ಯಾದಿ ಮಹತ್ವದವುಗಳು. ಶ್ರೀಮತಿ ಕಮಲಾದೇವಿಯವರು ಅ ಭಾ ಕಾಂಗ್ರೆಸ ಕಾರ್ಯಸಮಿತಿ ಸದಸ್ಯರಾದುದಕ್ಕೆ ಅವರನ್ನು ಅಭಿನಂದಿಸಲಾಯಿತು.

ದಕ್ಷಿಣ ಕನ್ನಡದಲ್ಲಿ ಸ್ಥಾಪಿಸಬೇಕೆಂದು ಗೊತ್ತಾಗಿರುವ ಆಯುರ್ವೇದ ಕಾಲೇಜನ್ನು ಕುಂಬಳೆಯಲ್ಲಿ ಸ್ಥಾಪಿಸುವ ವಿಚಾರ ನಡೆದಿದೆಯೆಂದು ತಿಳಿಯುತ್ತದೆ.

ಉಡುಪಿ ನಗರ ಸಭೆಯು ತಾ ೨೪ ರ ಸಭೆಯಲ್ಲಿ ವಿಜಯ ದಿನಾಚರಣೆಯ ಸಮಿತಿಯವರು ಸಂಗ್ರಹಿಸಿದ ಹಣದಲ್ಲಿ ಉಳಿತಾಯವಾದ ೩೦೦ ರೂಪಾಯಿಯನ್ನು ತಾಲೂಕು ಕಚೇರಿ ಮುಂದೆ ವಿಕ್ಟರಿ ಲಾಯಿಟ್ [ವಿಜಯದೀಪ] ಎಂಬ ಕೆತ್ತನೆಯುಳ್ಳ ದೀಪಸ್ತಂಭ ಸ್ಥಾಪಿಸುವದಾದರೆ ನಗರ ಸಭೆಗೆ ದಾನ ಮಾಡುವದಾಗಿ ತಹಶಿಲದಾರರಿಂದ ಬಂದ ಪತ್ರವನ್ನು ಅಂಗೀಕರಿಸಲಾಯಿತು. ಶ್ರೀ ಎಲ್ ... ನಾಯಕರು ಕಾಂಗ್ರೆಸ್ ದೃಷ್ಟಿಯಿಂದ "ವಿಕ್ಟರಿ" ಶಬ್ದವನ್ನು ತೆಗೆದು ಹಾಕಿದರೆ ಮಾತ್ರ ದಾನವನ್ನು ಸ್ವೀಕರಿಸಬಹುದೆಂದು ಮಂಡಿಸಿದ ಸೂಚನೆ ಬಿದ್ದುಹೋದುದರಿಂದ ಅವರು ಸಭಾತ್ಯಾಗ ಮಾಡಿದ್ದಲ್ಲದೆ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರು.

ಬಳ್ಳಾರಿ ಮುನಸಿಪಲ್ ಹೆಲ್ಥ ಅಫೀಸರರು ಹಾಗು ಕಮೀಶನರರು ಭಂಗಿಗಳ ಬೇಡಿಕೆಗಳನ್ನು ಪೂರೈಸುವದಾಗಿಯೂ ಸಂಬಳ ವಿಷಯವನ್ನು ಮದ್ರಾಸ ಸರಕಾರದವರು ಏಯ ಮಿಸಿದ ಸಮಿತಿ ವಿಚಾರಿಸುವದೆಂದೂ ಆಶ್ವಾಸನ ಕೊಟ್ಟಿದ್ದರಿಂದ ಸ.ಪಿನ ನೋಟೀಸನ್ನು ಅವರು ಹಿಂದೆಗೆದುಕೊಂಡಿದ್ದಾರೆ.

ಹಳ್ಳಿಗಳೆಂದರೆ ಕೊಳಕಡಿಸುವವನ ಕಣ್ಣಲ್ಲಿಯ ಕೊಳೆಯೆನ್ನಬಹುದು. ಈ ಮಾತನ್ನು ನಾವೆಲ್ಲರು ಅರಿತುಕೊಂಡ ವಿಷಯ. ಹಳ್ಳಿಗಳು ಭಾರತದ ಪ್ರಾಣ; ಅವುಗಳ ಉದ್ಧಾರವೇ ನಮ್ಮ ಧ್ಯೇಯ—ಎಂದು ಕಾಂಗ್ರೆಸದವರು ಅನ್ನುವ ಮಾತು ಪ್ರಗತಿಪರವೆನಿಸಿದರೂ ಹಳ್ಳಿ ಹಳ್ಳಿಯೇ! ಎಲ್ಲರೂ ಮೂಗು ಮುರಿಯುವರೇ.

ಈ ಮೂಗು ಮುರಿಯುವವರ ಮಾತಿಗೆ ಬೆಲೆ ...ವೆಂತಲ್ಲ. ಹಳ್ಳಿಗೆ ಹೋಗಿ ಬರುವ ಅನುಕೂಲತೆ ಇರುವದಿಲ್ಲ. ಒಂದು ಗಟ್ಟಿಮುಟ್ಟಾದ ಸಾಲೆ ಇರುವದಿಲ್ಲ. ಸಂತೆ ಪೋಸ್ಟ ಕೇಳಬಾರದು. ಸಂಘ ಸಂಸ್ಥೆಯ ಹೆಸರಿಲ್ಲ. ವಾಚನಾಲಯ ಆಚ್ಚುಕೂಟಗಳ ಸುಳಿವಿಲ್ಲ. ಓದುಬಲ್ಲವರು ಅನುಭವಿಕರು ಕಾಣುವದಿಲ್ಲ. ಒಟ್ಟೇನು! ಮುಂದೋಡುವ ಜಗತ್ತಿನ ಸಂಗಡ ಸಂಪರ್ಕವೇ ಇರುವದಿಲ್ಲ. ವೇದಕಾಲದ ಒಂದು ರೂಢಿಗಣ್ಯವಾದ ದಾರಿಯನ್ನು ತುಳಿಯುತ್ತ ಬಂದ ವೃದ್ಧ—ಕೈಲಾಗದ—ಧರ್ಮಿಷ್ಠ—ಕರ್ಮಿಷ್ಠ—ಅನುಕರಣನಿಷ್ಠ ಮುದುಕಿಯೆಂದರೆ ಸರಿ. ಆಧುನಿಕ ತರುಣರು ಈ ಕುಚ್ಚಿಯನ್ನು ಕಂಡು ಹೇಗೆ ಸಮರಸರಾಗಬೇಕೋ! ಅದಕ್ಕನೆ ಹಳ್ಳಿ ಹಳ್ಳಿಯೇ!

ರಡೇರಟ್ಟಿ ಈ ಥೀ ಥೂಗಳ ಶಾಪಕೋಪದಲ್ಲಿ ಬೆಳೆದು ಬಂದ ಒಂದು ಹಳ್ಳಿ.

ಹಳ್ಳಿಯು ದೊಡ್ಡದಿರಲಿಲ್ಲ. ಕೇವಲ ಸಾವಿರದ ವರೆಗೆ ಮನೆಗಳು. ಮೂರೆರಡು ಸಾವಿರ ಜನವಸತಿ. ಆದರೆ ಊರಲ್ಲಿ ದರೋಡೆಖೋರರು, ಕಳ್ಳರು, ತುಡುಗರು, ಸುಳ್ಳುಗಾರರು, ವಂಚಕರು ಇವರಿಗೆ ಇತಿಮಿತಿಯಿಲ್ಲ. ಸಣ್ಣಕುಟ್ಟಿ ಬಾಯಿ ಮಾತಿನಿಂದ ಕೊನೆಯವರೆಗೆ ಅಸಭ್ಯ ವರ್ತನೆಯು ಹಳ್ಳಿಯ ನಿತ್ಯದ ಕೆಲಸ. ಕೆಲವು ಮನೆಗಳು ಕಳವಿನಿಂದಲೇ ಉಪಜೀವಿಸುತ್ತುಂಟು. ನಾಲ್ಕೈದು ಮನೆಗಳ ಜನರು "ಖೂನಿ—ಮಾರಾಮಾರಿ" ಯಲ್ಲಿ ಪಿತ್ರಾರ್ಜಿತ ಧರ್ಮದಂತೆ ಪ್ರಸಿದ್ಧರಾಗಿ ಬಂದವರು. ಅವರ ಮನೆಯ ಯಾವುದೇ ಗಂಡಸು ತುರಂಗವಾಸದ ರುಚಿಯನ್ನು ಕಂಡಿಲ್ಲವೆಂತಲ್ಲ. ತುರುಂಗವೆಂದರೆ ನಮ್ಮ ಇಲಾಖೆಯ ಗವ್ಹರ್ನರನು ಬೇಸಿಗೆಯಲ್ಲಿ ಹೋಗುವ ಶೀತಪ್ರದೇಶವೆಂದು ಹೇಳಿಕೆ. ವೃದ್ಧಾಪ್ಯದಿಂದ ಸತ್ತ ಗಂಡಸರು ಅವರ ಮನೆಯಲ್ಲಿ ವಿರಳ. ಬ್ರಿಟಿಷ ಸರಕಾರದ ಅಮಲು ಆರಂಭವಾದಂದಿನಿಂದ ಇದು ನೋಡಿ ಬಂದ ವಿಷಯವು. ಕ್ರಿಮಿನಲ್ ಕಾಯದೆಯು ಅವರ ಮನೆಯ ಮೇಲೆ ಬೆಳೆದ ಹುಲ್ಲುಕಡ್ಡಿ.

ಪುರಂಧರನ ಪೂರ್ವಜರು ಈ ಊರಿಗೆ ಹೇಗೆ ಬಂದರೆಂಬುದು ತಿಳಿಯದ ವಿಷಯ. ಬಡ್ಡಿಯ ವ್ಯವಹಾರದಿಂದ ಧನಿಕರಾದರು. ಮಕ್ಕಳು ಮರಿಗಳು ಮನೆ ತುಂಬಿ ಬೆಳೆದು ದೊಡ್ಡ ಒಕ್ಕಲಾದರು. ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟರು. ಗಂಡುಮಕ್ಕಳಲ್ಲಿ ಇಬ್ಬರ ಕೊಲೆಯು ಈಗ ಕೆಲ ವರುಷಗಳ ಹಿಂದಿನ ದರವಡೆಯಲ್ಲಿ ಸಂಭವಿಸಿತು. ಈಗ ಉಳಿದವ ಕೊನೆಗೆ ಪುರಂಧರ.

ಪುರಂಧರನು ಬೆಳೆದು ದೊಡ್ಡವನಾದನು. ದೂರದೂರದ ಪಟ್ಟಣಗಳಲ್ಲಿ ನಿಂತ ಅಕ್ಕತಂಗಿಯರು ಇವನ ಮದುವೆಗಾಗಿ ಎಡತಾಕಿದರು. ಅಂಗಲಾಚಿದರು. ಆದರೆ ಎಲ್ಲರೂ ನಿರಾಶೆರಾಗಿ ಹಿಂದಿರುಗಿದರು. ಅವರು ಪಡೆದ ಉತ್ತರ ಒಂದೇ. "ಇನ್ನೊಂದು ಸಾರೆಯ ದರವಡೆಯಲ್ಲಿ ನನ್ನ ಕೊಲೆಯಾದರೆ ನಿಮ್ಮ ಮಗಳು ವಿಧವೆಯಾಗುವಳಲ್ಲ! ಅದಕ್ಕೆ ಏನೆನ್ನುವಿರಿ?"—ಇದರಿಂದ ಮದುವೆಯ ಮಾತು ಸಂಪೂರ್ಣ ನಿಂತಿತು. ಅಕ್ಕತಂಗಿಯರು ತಮ್ಮನ ಸಂಬಂಧ ಹರಿದುಕೊಂಡರೂ ಪುರಂಧರನಿಗೆ ದುಃಖವಾಗಲಿಲ್ಲ.

ನಸುಕಿನಲ್ಲಿ ಏಳುವದು, ಅಹ್ನಿಕಗಳನ್ನು ತೀರಿಸುವದು, ಒಂದೆರಡು ದೇವರಿಗೆ ಹೋಗುವದು, ಅಲ್ಪೋಪಹಾರ, ಮುಂದೆ ತನ್ನ ಕೋಣೆಯಲ್ಲಿ ಹೋಗಿ ಕುಳಿತು ಹಣಕ್ಕಾಗಿ ಬಂದ ಜನರಿಗೆ ಅನುಕೂಲದಂತೆ ಹಣ ಕೊಡುವದು, ತಂದು ಕೊಡುವವರಿಂದ ಅಸಲು, ಬಡ್ಡಿ ಸಹಿತವಾಗಿ ಎತ್ತುವದು ತನ್ನ "ವಾಯದೆ" ಯಲ್ಲಿ ಅಕರಣೆಯಾದ ಹಣದಲ್ಲಿ ಒಂದು ಕಾಸು ಬಿಟ್ಟವನಲ್ಲ. ವ್ಯವಹಾರವೆಂದರೆ ವ್ಯವಹಾರ ಎಂದುಬಿಡುವನು.

ವಾರದ ಕತೆ

★ ಒ ಡೆ ಯಾ ರ

[ಶ್ರೀಕೃಷ್ಣ ಪಾಟೀಲ, ಕಲಾಮಂಟಪ, ಬೆಳಗಾವಿ]

ಈ ವ್ಯವಹಾರದಿಂದ ಅವನ ಜೀವನಕ್ಕೆ ತೊಂದರೆ ಇರಲಿಲ್ಲ. ಬೇಕೆನಿಸುವ ವಸ್ತುಗಳನ್ನು ರೋಖ ಬೆಲೆ ಕೊಟ್ಟು ಕೊಳ್ಳುವನು. ಅಗ್ಗ ದರದ ಅಂಗಡಿಗೇ ಇವನ ನುಗ್ಗಾಟ. ಯಾರ ಹಂಗಿನಲ್ಲಿ ಬೆಳೆದು ಬಂದ ಸ್ವಭಾವದವನಲ್ಲ.

ಮುಂಜಾನೆಯ ವ್ಯವಹಾರವು ತೀರಿತೆಂದರೆ ಸ್ನಾನ. ಒಂದಿಷ್ಟು ಪೂಜಾ ವಿಧಾನ. ಸ್ವಯಂಪಕ್ವವಾದ ಊಟ. ಒಂದಿಷ್ಟು ವಾಮ. ಕುಕ್ಷಿ. ಮತ್ತೆ ಸಂಜೆಯ ವ್ಯವಹಾರ. ಇಳಿಹೊತ್ತಿನ ಸುಮಾರಿಗೆ ವ್ಯವಹಾರವನ್ನು ನಿಲ್ಲಿಸಿ ಮನೆಯ ಹೊರಗಡೆಯ ಕಟ್ಟೆಯ ಮೇಲೆ ಒಂದಿಷ್ಟು ವಿರಾಮ. ಆಗ ಮನೆಯ ಮುಂದೆ ಹಾದುಹೋಗುವ ಜನರ ಸಂಗಡ ಪ್ರಾಸಂಗಿಕ ಒಂದೆರಡು ಮಾತು. ಕತ್ತಲಾಗಲು ಮನೆ ಸೇರಿ ಬಾಗಿಲ ಹಾಕಿದನೆಂದರೆ ಮರುದಿನ ನಸುಕಿನ ವರೆಗೆ ಅವನ ಮುಖ ನೋಡಿದವರಿಲ್ಲ.

ಊರಲ್ಲಿ ಮದುವೆ-ಮುಂಜಿವೆಗಳಾಗಲಿ, ಜನನ ಮರಣಗಳಾಗಲಿ ಓಕಳಿ-ಸಂತೆಯಾಗಲಿ ಯಾವುದರಲ್ಲಿಯೂ ಭಾಗ ವಹಿಸಿದವನಲ್ಲ. ಊರ ಜಗಳ-ತಗಳಗಳಲ್ಲಿ ತಾನು ಮುಂದಾಗಿಯಾಗಲಿ, ಹಿಂದಾಗಿಯಾಗಲಿ ಅಭಿಪ್ರಾಯ ಕೊಟ್ಟವನಲ್ಲ. ಜನರು ತಾವಾಗಿ ಬಂದು ಕೇಳಿದರೆ- "ನನಗೇನು ತಿಳಿಯಬೇಕು! ಊರಲ್ಲಿ ಹಿರಿಯರಿರುವರಲ್ಲ! ಅವರ ಜ್ಞಾನವನ್ನು ನಾವೆಲ್ಲರು ಮೆಚ್ಚಬೇಕು. ನೀವು ಅಲ್ಲಿಗೆ ಹೋದರೆ ಯೋಗ್ಯ. ಅದಕ್ಕೆ ಏನಾದರೂ ವೆಚ್ಚ ಬೀಳುವದೆನಿಸಿದರೆ ನನ್ನ ಕಡೆಗೆ ಬನ್ನಿರಿ." ಎಂದು ತವಾಸೆಯಲ್ಲಿ ಹೇಳಿ ಮುಗಿಸುವನು. ತನ್ನ ನೀನೆ-ಬೇಸರಿಕೆಗಳಿಗೂ ಇನ್ನೊಬ್ಬರ ಕೈಸೇರಿಗೆ ಆಶಿಸಿದವನಲ್ಲ. ಯಾರಾದರೂ ಮುಂದೆ ಬಂದರೆ- "ಈ ಬೇನೆ ನನ್ನ ಅಂಕಿತದಲ್ಲಿದೆ. ಮೀರಿ ನಿಂತರೆ ಅಂದರೆ ಸಾವು ಬಂದರೆ ನೀವು ಆ ಹೆಣದ ಸಂಗಂ ಹೇಗೆ ನಡೆವಿರೆಂದು ನೋಡಬೇಕಾಗಿದೆ. ಅದು ನನಗೆ ತಿಳಿಯಬಹುದೇ!" ಎಂದು ಪ್ರಶ್ನಿಸುತ್ತಿದ್ದನು.

ಪುರಂಧರನನ್ನು- ಸಾಲವನ್ನು ಕೊಡುವ, ಅದನ್ನು ನಿಯಮಕ್ಕನುಸರಿಸಿ ಎತ್ತುವ-ಒಂದು "ಜಂತ್ರಿ" ಎಂದು ಜನರು ತಿಳಿದಿದ್ದರು.

೧೯೨೦ ರಲ್ಲಿ ಮತ್ತು ೧೯೩೦ ರಲ್ಲಿ ಮತ್ತೆ ಎರಡು ಸಾರೆ ಆವನ ಮನೆ ಕಳ್ಳರಿಂದ ದೋಚಲಾಯಿತು. ಕಳ್ಳರು ಅವನನ್ನು ವೈಮುರಿ ಬಡಿದರು. ಕೊಲ್ಲುವ ಹೆದರಿಕೆಯನ್ನೂ ಹಾಕಿದರು. ಆದರೆ ಬದುಕಿದ. ಮದುವೆಯಾಗಿದ್ದರೆ ಸಾಯುತ್ತಿದ್ದನೇನೋ! ಎಂದು ಜನಾಡಿಕೊಂಡರು. ಆದರೆ ಮೊದಲ ಸಾರೆ ಹೋದ ಹಣವೆಷ್ಟು, ಎರಡನೆಯ ಸಾರೆ ಹೋದ ಹಣವೆಷ್ಟು ಯಾರಿಗೂ ತಿಳಿಯಲಿಲ್ಲ. ಪೋಲೀಸರು ಬಂದು ಕೇಳಿದರು. ಹುಡುಕಿ ಕೊಡುವೆವೆಂದು ಅಭಯವಚನವನ್ನಿತ್ತರು. ಆದರೆ ಯಾರ ಮುಂದೂ ಒಂದು ಮಾತು ಹೇಳಿದವನಲ್ಲ. ದರವಡೆಯಾಗಿವೆ ಎಂದು ಹೇಳುವ ಮಾತನ್ನೇ ಪೋಲೀಸರ ಕಾಟದಿಂದ ಆಗಿಲ್ಲವೆಂದು ಬರೆದು ಕೊಡಲು ಸಿದ್ಧನಾದನು.

ತನ್ನ ವ್ಯವಹಾರವನ್ನು ಮತ್ತೆ ಮುಂದುವರಿಸಿದನು.

ಜನರಿಗೆ ಮಾತ್ರ ಇವನ ಸ್ವಭಾವವು ತಿಳಿಯದೆ ಹೋಯಿತು. ಕೆಲವರು ಹುಚ್ಚನೆಂದರು. ಕೆಲವರು ಹೀಗೆ ಮಾಡಿದ್ದೇ ಯೋಗ್ಯವೆಂದರು. ಸ್ವಭಾವದ ಸಂಬಂಧ ಇಬ್ಬರಿಗೂ ಸಂಶಯ.

ಒಂದು ಸಂಗತಿಯು ಹೊಸದಾಗಿಯೇ ನಡೆಯಿತು.

ಪುರಂಧರನು ಇಂದಿಗೆ ಒಬ್ಬೊಂಟಿಗನಲ್ಲ ಊರಲ್ಲಿ ಎಲ್ಲರ ಜೊತೆಗೆ ಸಮರಸನಾಗಹತ್ತಿದನು ಮಕ್ಕಳು ನೆರೆದಲ್ಲಿ ತಾನಾಗಿ ಹೋಗಿ ಕತೆ ಹೇಳಹತ್ತಿದನು. ಕತೆಯ ಸಾರಾಂಶವನ್ನು ಹೊರಡಿಸಹತ್ತಿದನು. ಒಂದೆರಡು ಬುದ್ಧಿಯ ಮಾತನ್ನು ಹೇಳುವನು. ಅವುಗಳಿಗೆ ಅಂಟಿ ನಡೆಯಲು ಉಪದೇಶಿಸುವನು.

ಊರಲ್ಲಿಯ ಕಳ್ಳರನ್ನು, ಖೂನಿಯವರನ್ನು ಕಂಡನು. ಅವರ ಮನೆಗೆ ಬೇಕೆಂತಲೆ ದಿನಕ್ಕೆ ಎರಡು ಸಾರೆ ಹೋಗುವನು. ಮನೆಯ ಹಿರಿಯರ ಜೊತೆಗೆ ಮಾತುಗುಟ್ಟುವನು. ಮಾತಿನ ಭರದಲ್ಲಿ ಸತ್ಯ, ನ್ಯಾಯ, ಧರ್ಮ, ದೇವರು, ಪಾಪ, ಪುಣ್ಯಗಳ ಸಂಗತಿಗಳನ್ನು ಪುರಾಣಗಳ ಆಧಾರದಿಂದ ತಿಳಿಯಪಡಿಸುವನು. ಹಿಂದಿನ ಪಾಪಗಳಿಗೆ ಮನುಷ್ಯನು ಇಂಥಿಂಥ ಪ್ರಾಯಶ್ಚಿತ್ತವನ್ನು ಹೊಂದಬೇಕೆಂದು ತಿಳಿಸುವನು.

ಇದರಿಂದ ಅವನ ಬಡ್ಡಿಯ ವ್ಯವಹಾರ ಒಂದಿಷ್ಟು ಇಳಿಮುಖವಾಯಿತು. ಆದರೂ ಹಿಂಜರಿಯಲಿಲ್ಲ ಬೋಧನೆಯು ಹಾಗೆಯೆ ಸಾಗಿತು ಜನರು ಬೇರೆ ಅರ್ಥವನ್ನೇ ಕಲ್ಪಿಸಿದರು. ಕಲ್ಪಿಸಲು ಕಾರಣವಿದ್ದಿತು. ಆದರೆ ತನಗೆ ಬರುವ ಬಡ್ಡಿಯಲ್ಲಿ ಒಂದು ಕಾಸು ಬಿಟ್ಟವನಲ್ಲ. ಊರ ಹೆಂಗಸರು, ಹುಡುಗರು ಪುರಂಧರನ ಧರ್ಮ ಪ್ರವೃತ್ತಿಗೆ ಬೆಲೆಗೊಟ್ಟರು.

ಮೊನ್ನಿನ ಮಹಾಯುದ್ಧ ಪೂರ್ವದಲ್ಲಿ ಅವನ ಮನೆಯನ್ನು ಮತ್ತೆ ಒಡೆದರು. ಇದ್ದ-ಬಿದ್ದ ಬೆಲೆಯುಳ್ಳ ಎಲ್ಲವನ್ನು ಕದ್ದರು. ಹಣವು ಸಹ ಪ್ರತಿ ಸಾರೆಗಿಂತ ಹೆಚ್ಚು ಹೋಯಿತು. ತುಡುಗು ಮಾಡಿದವರೆಲ್ಲ ತನ್ನ ಊರಿನವರೇ! ಮುಖಪರಿಚಯ, ಹೆಸರು ಚೆನ್ನಾಗಿ ಬಲ್ಲನು. ಅವರು ಮನೆಯನ್ನು ಹೊಕ್ಕು ವಸ್ತುಗಳನ್ನು ದೋಚುವ ಮುಂದೆ ರಾಮನಾಮವನ್ನು ಉಚ್ಚರಿಸುತ್ತಿದ್ದನು. ಹೋದ ಮೇಲೆ ಬಾಗಿಲ ಹಾಕಿ ಮಲಗಿಕೊಂಡನು.

ಮರುದಿನ ನಿತ್ಯದಂತೆ ಬೆಳಗಿನ ಸಂಗಡ ಎದ್ದನು. ಅಹ್ನಿಕಗಳನ್ನು ತೀರಿಸಿದನು. ಒಂದೆರಡು ದೇವರ ಗುಡಿಗೆ ಹೋಗಿ ಭಕ್ತಿಯನ್ನು ಸಲ್ಲಿಸಿದನು. ಅಲ್ಪೋಪಹಾರ ತೀರಿಸಿದನು. ತನ್ನ ಕೋಣೆಯಲ್ಲಿ ಹೋಗಿ ಕುಳಿತನು. ಹೊಸ ಸಾಲಗಾರರು ಹಣ ಪಡೆಯಲೂ ಹಳೆಯ ಸಾಲಗಾರರು ಹಣ ಸಲ್ಲಿಸಲೂ ಬಂದರು.

ಪುರಂಧರನ ಮುಖದಲ್ಲಿ ಇಂದು ಉಲ್ಲಸದ ಸಂತೆಯಾಡುತಿದ್ದಿತು.

—ನಿನ್ನೆ ನಿಮ್ಮ ಮನೆಗೆ ಮತ್ತೆ ತುಡುಗರು ಬಂದಿದ್ದರೇ? ಎಂದು ಕೆಲವರು ಕೇಳಿದರು.

ಎಲ್ಲರ ಮಾತಿಗೆ ಒಂದು ಮುಗುಳು ನಗೆ.

ಪ್ರತಿ ಸಾರೆಯಂತೆ ಹೊಸ ಸಾಲಗಾರರ ಅರಕೆತೆಯನ್ನು ಕೇಳಿದರೂ ತನ್ನ ಹಣವು ಸಕಾಲಕ್ಕೆ ದೊರಕುವ ಯೋಗ್ಯತೆಯುಳ್ಳವರಿಗೆ ಸಾಲ ಕೊಟ್ಟನು. ಅದವಿನ ಸಂಬಂಧ ಅವರನ್ನು ಕಾಡಲಿಲ್ಲ. ಹಳೆಯ ಸಾಲಗಾರರ ಕಾಸು-ಕಾಸು ಲೆಕ್ಕವನ್ನು ಮಾಡಿ ಅವರ ಆದವಿನ ಸಾಮಾನು ಅವರಿಗೆ ಕೊಟ್ಟು ತೆರುವ ಹಣ ನಿಮ್ಮ ಬಳಿಯಲ್ಲಿರಲಿ ಎಂದು ಹೇಳಿದನು.

ಇಬ್ಬರೂ ಅವಾಕ್ಕಾದರು.

—ಆಶ್ಚರ್ಯಪಡುವ ಕಾರಣವಿಲ್ಲ. ಸಾಲಿನಿಂದ ಈ ವ್ಯವಹಾರವನ್ನು ನಿಲ್ಲಿಸುವೆನು. ಊರಲ್ಲಿ ಎಲ್ಲರಿಗೂ ಇದನ್ನು ಹೇಳಿರಿ. ಹೋಗಿರಿ ಎಂದು ಕಳಿಸಿದನು.

ಊರಲ್ಲಿ ಈ ಮಾತು ಹಾ! ಎನ್ನುವಷ್ಟರಲ್ಲಿ ಡಂಗುರ ಹೊಯಿದಂತಾಯಿತು.

—ಪಾಪ! ಹಣದ ಅಪಹರಣದಿಂದ ನಾಲ್ಕನೆಯ ಸಾರೆಯ ಹೊಡೆತದಿಂದ ಪುರಂಧರನ ತಲೆಯು ಕೆಟ್ಟಿದೆ ಎಂದು ಊರ ಹಿರಿಯರು ಆಡಿಕೊಂಡರು.

ಊರಲ್ಲಿ ಮಕ್ಕಳಿಂದ ಮುದುಕರ ವರೆಗೆ ಎಲ್ಲರ ಬಾಯಲ್ಲಿ ಪುರಂಧರನ ಹುಚ್ಚುತನದ ಚರ್ಚೆಯೇ! ಇದಕ್ಕೆ ಪುಷ್ಟಿದಾಯಕವಾಗಿ ಅವನ ನಿತ್ಯಕರ್ಮಗಳು ಹಿಂದುಮುಂದಾದವು.

ಈಗಲೂ ಪುರಂಧರನು ನಿತ್ಯ ಬೆಳಗಿನಲ್ಲಿ ಏಳುವನು. ಸ್ನಾನ-ಪಾನವನ್ನು ಮುಗಿಸುವನು. ಐದು ಸಾರೆ ರಾಮನಾಮದಿಂದ ಗ್ರಾಮ ಪ್ರದಕ್ಷಿಣೆಯನ್ನು ಹಾಕುವನು. ಬೀದಿಯಲ್ಲಿ ಸಿಕ್ಕ ಜನರಿಗೆ ಪೌರಾಣಿಕ ನೀತಿಯ ಕಥೆಗಳನ್ನು ಹೇಳುವನು. ಕತೆಯ ತುಂಬ ಧರ್ಮ, ನೀತಿ ಸತ್ಯತೆಯನ್ನು ಪ್ರತಿಪಾದಿಸುವನು. ಕಳವು ಪಾಪದ ಮೂಲವೆಂದು ಗಟ್ಟಿಯಾಗಿ ಅರಚುವನು. ಉಳಿದ ವೇಳೆ ತನ್ನ ಮನೆಯಲ್ಲಿ ಏಕಾಂತದಲ್ಲಿ ಕಳೆಯುವನು.

ನಾಲ್ಕಾರು ದಿನಗಳ ಮೇಲೆ ಪುರಂಧರನ ಇನ್ನೊಂದು ಹುಚ್ಚುತನವು ಪ್ರಸಿದ್ಧವಾಯಿತು.

ದೀವಳಿಗೆಯ ಹಬ್ಬದ ಒಂದಿನ. ಎಲ್ಲರ ಮನೆಯಲ್ಲಿ ಸಂತಸವೇ ಸಂತಸ. ಬೀದಿಯ ಮೇಲೆ ಮಕ್ಕಳೆಲ್ಲ ಹೊಸ ಬಟ್ಟೆಯನ್ನು ತೊಟ್ಟುಕೊಂಡು ತಿರುಗುತಿರುವರು. ಮನೆಮನೆಯಲ್ಲಿ ಹೆಂಗಸರು ಪಗಡೆಯಾಟದಲ್ಲಿ ತನ್ಮಯರಾಗಿರುವರು. ಪ್ರಾಪಂಚಿಕ ತೊಂದರೆಯನ್ನು ಕೆಲ ಸಮಯವಾದರೂ ಸರಿ, ಮರೆತಿರುವರು. ಹೊರಗೆ ಬೀದಿಯ ಮೇಲೆ ಪುರಂಧರನ ಕೂಗು—

—ಕೇಳಿರಿ, ಕೇಳಿರಿ. ನನ್ನ ಅಕ್ಕತಂಗಿಯರೆ, ನನ್ನ ಮಕ್ಕಳೇ! ನಾಳಿನ ದಿನವು ನನ್ನ ಸವಾರ್ಣ ದಿನವು. ಬೆಳಗಿನ ಒಂಬತ್ತು ಘಂಟೆಗೆ ಊರ ಎಲ್ಲ ಬಾಲಕರು, ಹೆಂಗಸರು ನನ್ನ ಮನೆಗೆ

—೧೬ ನೇ ಪುಟಕ್ಕೆ

ಒಡೆಯಾರ

(೧೫ನೇ ಪುಟದಿಂದ)

ಒಂದು ನನ್ನ ವ್ರತಕ್ಕೆ ಸಹಾಯ ಮಾಡಬೇಕು.... ಟಂ.... ಠಂ.... ಗಂಟೆಯನ್ನು ಹೊಡೆಸು ಮುಂದೆ ಸಾಗಿದನು. ಕೂಡಿದವರು— ಅಂದರೇನು? ಎಂದು ತೀಸರಿಟ್ಟರು.

ಕೆಲ ಹಿರಿಯರು— ಅಂದರೆ ಹುಚ್ಚುತನ! ಎನಲು ಎಲ್ಲರು ಗಟ್ಟಿಯಾಗಿ ನಕ್ಕರು.

ಮರುದಿನ ಪುರಂಧರನು ಮಕ್ಕಳನ್ನು ಸಾಲಾಗಿ ನಿಲ್ಲಿಸಿದನು. ಹೆಂಗಸರನ್ನು ಓರಣದಿಂದ ಕೂಡಿಸಿ ದನು. ದೂರದಲ್ಲಿ ಗಂಡಸರು ಮುಗುಳು ನಗೆ ಯಿಂದ ನೋಡುತ್ತ ನಿಂತರು. ಪುರಂಧರನು ಮನೆಯಲ್ಲಿಯ ಪಾತ್ರೆ, ಅರಿವೆ ಅಂಚಡಿ ಎಲ್ಲವನ್ನು ಕಟ್ಟೆಯ ಮೇಲೆ ರಾಸಿಯಾಗಿ ಒಟ್ಟಿದನು. ಒಟ್ಟೊಟ್ಟಾಗಿ ಹೆಂಗಸರನ್ನು ಕರೆದು ಅವುಗಳನ್ನೆಲ್ಲ ಹಂಚಿದನು. ತುಡುಗ, ಕೊಲೆಗಡಕರ ಹೆಂಡಂದಿರಿಗೆ ಬೆಲೆಯುಳ್ಳವು ದೊರೆತವು. ಮಕ್ಕಳಿಗೆ ಮನೆಯಲ್ಲಿಯ ಎಲ್ಲ ಹಣವನ್ನು ಕೊಟ್ಟನು.

ಇದರರ್ಥವೇನೆಂದು ಯಾರಿಗೂ ತಿಳಿಯಲಿಲ್ಲ. ಬೆಕ್ಕಸಬೆರಗಾದರು.

ಪುರಂಧರನು ಒಮ್ಮೆಲೆ ಮನೆಯನ್ನು ಸೇರಿದನು. ನಾಲ್ಕಾರು ನಿಮಿಷದ ಮೇಲೆ ಹೊರಗ ಬಂದನು. ಬೆನ್ನು ಹತ್ತಿಕೊಂಡೇ ಮನೆಯೊಳಗಿಂದ ಉರಿಯೂ ಹೊರಗೆ ಬಂದಿತು.

—ಮನೆಗೆ ಉರಿ. ಉರಿ.... ಎಂದು ಜನರು ಚೀರಿದರು.

—ಜೋಕೆ! ಈ ಉರಿಯನ್ನು ಯಾರೂ ನಂದಿಸಲಾಗದು. ಅದು ಉರಿಯಲ್ಲ. ನಮ್ಮ ಊರಿನ ಪಾಪವು ಉರಿಯುತಿದೆ. ನೂರಾರು ವರ್ಷಗಳಿಂದ ಸಂಗ್ರಹವಾಗಿ ನಿಂತ ಪಾಪವು ಬೆಂಕಿಯ ಬಾಯಿಗೆ ಸುಟ್ಟು ಹೋಗುತಿದೆ. ಇನ್ನು ಮುಂದೆ ಊರಲ್ಲಿ ಕಳವು, ಹೊಲೆಗೆಲಸ ಇಣಿಕಿ ಹಾಕದು. ಒಂದು ಸಣ್ಣದಾದರೂ ಸರಿ ಯಾರಾದರೂ ತಪ್ಪು ಮಾಡಿದರೆ ಈ ಬೆಂಕಿಯಾಕಾರದ ಬ್ರಹ್ಮರಾಕ್ಷಸವು ಗೂದಿಯಿಂದೆದ್ದು ನಿಮ್ಮ ವಂಶವನ್ನು ಹಾಳು ಮಾಡದೆ ಬಿಡದು. ಇಂದಿಗೆ ಊರಲ್ಲಿ ಶಾಂತಿ, ತುಷ್ಟಿ, ತ.ಷ್ಟಿ ಎನ್ನುತ್ತ ಮೈಮೇಲಿನ ಒಂದೊಂದು ಅರಿವೆಯನ್ನು ಬೆಂಕಿಯಲ್ಲಿ ತೂರಿದನು. ಉಟ್ಟ ಒಂದು ಪಂಜೆಯ ಹೊರತು ನಗ್ನಮೂರ್ತಿ.

ಪ್ರಖರ ಸೂರ್ಯನು ನೆತ್ತಿಯ ಮೇಲೆ ಏರಿದನು. ಜನರು ಹೌಹಾರಿ ಮನೆಗೆ ಹೋದರು.

ಪುರಂಧರನ ಈ ಕೃತಿಯಿಂದ ಜನರೇ ಹುಚ್ಚಾದರು.

ಮರುದಿನ ಪುರಂಧರನು ಮನೆಯ ಬೂದಿಯನ್ನು ಬಳಿದನು. ನಡುವೆ ಒಂದು ತೆಗ್ಗು ತೆಗೆದನು ಎಲ್ಲವನ್ನು ಹೂಳಿ ಬದಿಯಲ್ಲಿ ಒಂದು ಕಲ್ಲು ಹಾಸಿ ಅದರ ಮೇಲೆ ಕುಳಿತನು. ಇಂದಿನಿಂದ ಅವನು ಪರಾವಲಂಬಿ.

ಜನರೇ ಅವನ ಊಟ—ಉಪಚಾರದ ಹೊಣೆ ಹೊತ್ತರು.

ಈಗ ಅವನು ಸಾವ್ರಕಾರನಲ್ಲ. ಪುರಂಧರನಲ್ಲ. ಒಡೆಯಾ! ಎಲ್ಲರು ಒಡೆಯಾರ ಎಂದು ಕರೆಯ ಹತ್ತಿದರು.

ಒಮ್ಮೆ ಊರ ಹಿರಿಯರು-ಒಡೆಯಾರ, ಇಂದಿಗೆ ಊರಲ್ಲಿ ಶಾಂತಿ. ನೀವು ಹತ್ತು ಜನರಂತೆ ನಡೆಯಬೇಕು. ಎಂದು ಅಂಗಲಾಚಿದರು.

—ಹೂ ಹಾಗಾದರೆ ನಾನು ಸಾಯಬೇಕು.

—ನಮ್ಮ ತಪ್ಪು ಕ್ಷಮಿಸಿರಿ. ನಾವು ಪಾಪಿಗಳು. ಬೇಡಿಕೊಂಡರು.

—ಊರ ಪಾಪ ಸುಟ್ಟು ಹೋದ ಮೇಲೆ ಈಗ ಯಾರೂ ಪಾಪಿಗಳಲ್ಲ. ನಿರುತ್ತರರಾಗಿ ಅವರು ಹಾಗೆಯೇ ಕುಳಿತರು.

ಈ ಊರು ನೆಲದ ಮೇಲೆ ನಿಂತಿರುವವರೆಗೆ ನಾನು ಬದುಕಿರುವೆನು. ಮನುಷ್ಯನಾದರು ಸರಿ. ಬ್ರಹ್ಮರಾಕ್ಷಸನಾದರೂ ಸರಿ. ಊರಲ್ಲಿ ಕದ್ದು—ಮುಚ್ಚಿ ಮಾಡಿದ ಪಾಪಗಳನ್ನು ಸಹ ನಾನು ನೋಡುವೆ. ಅವರನ್ನು ಕಾಣುವೆ. ನೀವು ಮನೆಗೆ ಹೋಗಿರಿ.

ಮುಗಿಲು ಗರ್ಜಿಸಿದಂತಾಯಿತು. ಬೂದಿಯನ್ನು ಹಣೆಗೆ ಒರಸಿಕೊಂಡು ಮನೆಗೆ ಬಂದರು.

ಪುರಂಧರನು ಕೆಲ ವರುಷದ ಮೇಲೆ ತೀರಿಕೊಂಡನು.

ಈಗ ಅಲ್ಲೊಂದು ಸುಂದರವಾದ ಸಮಾಧಿ. ಊರ ಸಣ್ಣಪುಟ್ಟ ನ್ಯಾಯಗಳೆಲ್ಲ ಆ ಸಮಾಧಿಯ ಬಳಿಯಲ್ಲಿ ತೀರ್ಪುಗೊಳ್ಳುವವು. ಉಭಯತರಿಗೂ ಸಂತೋಷದ ತೀರ್ಪು.

ಒಡೆಯಾರನ ತೀರ್ಪು ಅಷ್ಟು ಜಾಗ್ರತವಾದುದು. ಕಳೆದ ಅಂದೋಲನದಲ್ಲಿ ಒಂದು ಕಳವಿಲ್ಲ. ಒಂದು ಮೋಸವಿಲ್ಲ. ಇದೆಲ್ಲ ಒಡೆಯಾರನ ಮಹಾತ್ಮೆಯೆಂದು ಜನರಾಡಿಕೊಳ್ಳುತ್ತುಂಟು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು